ಪುಸ್ತಕ ಪ್ರಪಂಚ

ಅಕ್ಟೋಬರ್—೧೯೯೯



ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ

ಮೈಸೂರು

ಪುಸ್ತಕ ಪ್ರಪಂಚ

ಮಾಸಿಕ

ಸಂಪುಟ ೫೦ ಸಂಚಿಕೆ ೧ ಅಕ್ಟೋಬರ್ ೧೯೯೯

ಸಂಪಾದಕ ಮಂಡಳಿ :

ಪ್ರಧಾನಸಂಪಾದಕರು
ಡಾ॥ ದೇ. ಜವರೇಗೌಡ

ಗೌರವ ಪ್ರಧಾನ ಸಂಪಾದಕರು
ಕೋಣಂದೂರು ಲಿಂಗಪ್ಪ

ಅಧ್ಯಕ್ಷರು
ಕ.ರಾ.ವ.ಶಿ. ಸಮಿತಿ

ಸದಸ್ಯರು :
ಧರ್ಮರಾಜ ಲಿಂಗಪ್ಪ ರಿತ್ತಿ ಮರಿಯಣ್ಣನವರ್
ಉಪಾಧ್ಯಕ್ಷರು
ವೈ. ಎನ್. ಶಂಕರೇಗೌಡ
ಖಜಾಂಚಿ
ಆರ್. ಎಲ್. ಮಂಗಳೂರ್
ಪ್ರಧಾನ ಕಾರ್ಯದರ್ಶಿ
ಜಿ. ಟಿ. ನಾರಾಯಣರಾವ್
ರಾ. ನಂ. ಶ್ರೀನಿವಾಸಮೂರ್ತಿ
ಡಾ॥ ಪ್ರಧಾನ್ ಗುರುದತ್ತ
ಪರಮಶಿವ ನಡುಬೆಟ್ಟ
ಡಾ॥ ಹಾ. ತಿ. ಕೃಷ್ಣೇಗೌಡ
ಪ್ರೊ॥ ಸಿ. ನಾಗಣ್ಣ
ಲತಾ ರಾಜಶೇಖರ್

ಸಂಪಾದಕ
ಚಂದ್ರಶೇಖರಾರಾಧ್ಯ

೯೯ ರ ಜುಲೈ–ಆಗಸ್ಟ್, ದೇಜಗೌ ವಿಶೇಷ ಸಂಚಿಕೆಯ ಸಂಪಾದಕ ಮಂಡಳಿಯಲ್ಲಿ 'ದೇಜಗೌ' ಇಲ್ಲದಿರುವ ಬಗ್ಗೆ ಓದುಗರ ಪತ್ರಗಳು ಬರುತ್ತಿವೆ. ದೇಜಗೌ ಆ ಸಂಚಿಕೆಗೆ ಮಾತ್ರ ಇರಲಿಲ್ಲ. ಆನಂತರದ ಸಂಚಿಕೆಯಿಂದಲೇ ಪ್ರಧಾನ ಸಂಪಾದಕರಾಗಿ ಮುಂದುವರಿದಿದ್ದಾರೆ.

—ಸಂ.

ಪರಿವಿಡಿ

ಮುಖಪುಟ ಚಿತ್ರ : ಚಾಮುಂಡಿ ಬೆಟ್ಟದ ದೇವಸ್ಥಾನ

PUSTAKA PRAPANCHA : Monthly

Published and printed by Karnataka State Adult Education Council, Mysore-6. Price : Rupees Ten

ಬಿಡಿಪ್ರತಿ : ರೂ. ೧೦

ವಾರ್ಷಿಕ ಚಂದಾ : ರೂ. ೧೦೦

ಆಜೀವ ಸದಸ್ಯತ್ವ ಚಂದಾ :

ವ್ಯಕ್ತಿಗೆ : ರೂ. ೬೦೦

ಸಂಸ್ಥೆಗೆ : ರೂ. ೯೦೦

ಪ್ರಕಟಣೆ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ

ಮೈಸೂರು–೫೭೦ ೦೦೬

ದಸರಾ ಮಹೋತ್ಸವದ ಉದ್ಘಾಟನಾ ಭಾಷಣ

೧೦–೧೦–೧೯೯೯

ಶ್ರೀ ಚಾಮುಂಡೇಶ್ವರೀ ದೇವಿಯ ಕೃಪೆಯಿಂದಾಗಿ, ಕರ್ನಾಟಕ ಸರ್ಕಾರದ ಹಾಗೂ ದಸರಾ ಮಹೋತ್ಸವ ಸಮಿತಿಯ ಔದಾರ್ಯದಿಂದಾಗಿ ಈ ಜಗತ್ಪ್ರಸಿದ್ಧ ಉತ್ಸವವನ್ನು ಉದ್ಘಾಟಿಸುವ ಪುಣ್ಯಾವಕಾಶ ನನಗೆ ದೊರಕಿದೆ. ಇದರಿಂದ ನನ್ನ ಅಹಂಕಾರ ಬಲಿಯದೆ, ನನ್ನ ಪುಲಕಿತ ಹೃದಯ ಗುರುಭಾವತರಂಗಗಳ ತಾಡನೆಯಿಂದ ಪವಿತ್ರವಾಗುತ್ತದೆಂದು ಭಾವಿಸುತ್ತೇನೆ.

ಹಲವು ನದಿಗಳ ನೀರು ಒಂದು ಕೇಂದ್ರಕ್ಕೆ ಹರಿದು ಕಡಲಾಗುತ್ತದೆ. ಸಾವಿರಾರು ವರ್ಷದಿಂದ ದೇಶವಿದೇಶಗಳಿಂದ ಬಂದ ಜನರ ಭಕ್ತಿಪ್ರವಾಹ ಹಾಗೂ ದೇವಿಯ ಕರುಣೆಯ ಹೊನಲು ಘನೀಭೂತಗೊಂಡು, ಪರ್ವತರೂಪದಲ್ಲಿ ಕರ್ನಾಟಕವನ್ನು ಆಶೀರ್ವದಿಸುತ್ತಿದೆ, ಲೋಕದ ಮೇಲೆ ಕೃಪೆಯ ಮಂದಹಾಸ ಬೀರುತ್ತಿದೆ. ಸಚರಾಚರ ವಸ್ತುಗಳಲ್ಲಿ ಚೈತನ್ಯ ಹರಿಯುತ್ತಿದೆ. ಭುವನ ಕವಿಯ ಕವನದಂತಿರುವ ಲೋಕ ಶಿಲ್ಪಿಯ ಚಿತ್ರಕೃತಿಯಂತಿರುವ ಈ ಗಿರಿ ಕವಿ ವಾಣಿಯಲ್ಲಿ ಹೇಳುವುದಾದರೆ,

ದೇಗುಲವು ಭಕ್ತರಿಗೆ,
ಉಪವನವು ರಸಿಕರಿಗೆ,
ಲೌಕಿಕರಿಗಿದು ಸಗ್ಗ,
ವೈದಿಕರಿಗಿದು ಮುಕ್ತಿ।

ವಿಜಯನಗರ ಸಾಮ್ರಾಜ್ಯ ಸೂರ್ಯ ಅಸ್ತಂಗತವಾಗಿ ಮೈಸೂರಿನಲ್ಲಿ ಮೂಡಿದಾಗ ರಾಜ ಒಡೆಯರೇ ಮೊದಲಾದ ಮೈಸೂರರಸರ ದೂರದೃಷ್ಟಿಯ, ಕಲಾಭಿರುಚಿಯ, ದೈವಶ್ರದ್ಧೆಯ, ಸಾಂಸ್ಕೃತಿಕ ಪ್ರಜ್ಞೆಯ ಹಾಗೂ ಐತಿಹಾಸಿಕ ಪ್ರತಿಷ್ಠೆಯ ಫಲವಾಗಿ ದಸರಾ ಮಹೋತ್ಸವ ಅವಿಚ್ಛಿನ್ನವಾಗಿ ನಾಡಿನ ಹಾಗೂ ಬದುಕಿನ ಭಾಗವಾಗಿ ನಡೆಯುತ್ತಿರುವುದು ಹೆಮ್ಮೆಯ ಸಂಗತಿ. ಅದನ್ನು ನಾಡಹಬ್ಬವಾಗಿ ಆಚರಿಸುತ್ತಿರುವ ಕರ್ನಾಟಕ ಸರ್ಕಾರ ಅಭಿನಂದನೆಗೆ ಪಾತ್ರವಾಗಿದೆ. ನವರಾತ್ರಿ ದುರ್ಗಾ ಪೂಜೆಯೆಂದು ಬೇರೆ ಬೇರೆ ಹೆಸರಿನಿಂದ ರಾಷ್ಟ್ರದ ಎಲ್ಲ ಕಡೆಯೂ ಸಂಭ್ರಮ ಸಡಗರಗಳಿಂದ ಹತ್ತು ದಿನ ಜರುಗುವ ಈ ಹಬ್ಬ ರಾಷ್ಟ್ರೀಯ ಉತ್ಸವವೆಂದೇ ಹೇಳಬೇಕು.

ಪ್ರಾರಂಭದ ಜೈತ್ರಯಾತ್ರೆಯ ದಸರಾ ಉತ್ಸವದ ಕಲ್ಪನೆ ಕಾಲಾನಂತರದಲ್ಲಿ ಸಾಂಸ್ಕೃತಿಯ ವೈಭವದ ಮತ್ತು ದೈವೀ ಶ್ರದ್ಧೆಯ ಉತ್ಸವವಾಗಿ ಪರಿಣಮಿಸಿದ್ದು ಯುಕ್ತ ಹಾಗೂ ಉಪಯುಕ್ತ. ಕಲೆ ಅಥವಾ ಸೌಂದರ್ಯ ಶಿವದ, ಸತ್ಯದ ಹೆಬ್ಬಾಗಿಲು ಎನ್ನುವುದಾದರೆ ಇಡೀ ಉತ್ಸವ ವೈವಿಧ್ಯಮಯವಾದ ಜಾನಪದ ಹಾಗೂ ಶಿಷ್ಟ ಕಲೆಗಳ ವೈಭವದಿಂದ ಕೂಡಿದೆ ಎಂದೇ ಹೇಳಬಹುದು. ದಾನವರಿಗೂ ದೇವತೆ

ಗಳಿಗೂ ನಡೆದ ಯುದ್ಧದ ವಿಜಯ, ರಾಮ ರಾವಣನನ್ನು ಕೊಂದು ವಿಜಯ ಸಾಧಿಸಿದ ದಿನವೇ ವಿಜಯದಶಮಿ ಎಂಬುದು ಪೌರಾಣಿಕ ಕಲ್ಪನೆ. ಒಂಬತ್ತು ದಿನಗಳು ಯುದ್ಧ ಸಿದ್ಧತೆಯ ಕಾಲವಷ್ಟೆ. ಸುರಾಸುರರ, ಶಿಷ್ಟದುಷ್ಟಶಕ್ತಿಗಳ ಯುದ್ಧ ಎಂದೂ ಮುಗಿಯದ ಕಥೆ. ಆದಿಶಕ್ತಿಯ ಜನಶಕ್ತಿಯ ಸೃಷ್ಟಿ ಚೈತನ್ಯದ ಮತ್ತು ಧಾರ್ಮಿಕ ಊರ್ಜಸ್ಸಿನ ಸಂಕೇತವೇ ಚಾಮುಂಡೇಶ್ವರಿ. ಇವಳು ತಾಳುವ ರೂಪಾವತಾರಗಳು ಅನಂತ. ಕ್ಷಾಮ ದೇವತೆಯಾಗಿ, ಭೂಕಂಪನಶಕ್ತಿಯಾಗಿ, ರಾಜರಾಜೇಶ್ವರಿಯಾಗಿ, ರಣಚಂಡಿಯಾಗಿ, ಕನ್ನಡ ಭುವನೇಶ್ವರಿಯಾಗಿ, ಭರತಮಾತೆಯಾಗಿ, ವಿಶ್ವಶಕ್ತಿಯಾಗಿ ನಾಡುನುಡಿಗಳಿಗೆ ಸಜ್ಜನರಿಗೆ ರಕ್ಷೆಯಾಗಿದ್ದಾಳೆ. ಮಹಿಷಾಸುರ ಮರ್ದನ ದಿನದಿನವೂ ನಡೆಯದಿದ್ದರೆ, ಪ್ರಪಂಚ ಎಂದೋ ನಾಶವಾಗುತ್ತಿತ್ತು. ಹಿಂದೆ ಮಹಿಷಾಸುರಮರ್ದಿನಿಯಾಗಿದ್ದವಳು ಭ್ರಷ್ಟಾಸುರ ಮರ್ದಿನಿಯಾಗಬೇಕಾಗಿದೆ.

ಕನ್ನಡ ನಾಡಿನಂಥ ಸುಸಮೃದ್ಧ ರಾಜ್ಯ ಮತ್ತೊಂದಿಲ್ಲ. ಜಾತಿ ಮತ ಭ್ರಷ್ಟಾಚಾರಗಳ ಚಂಡಮಾರುತದಲ್ಲಿ ಸಿಕ್ಕಿಕೊಂಡು ಕನ್ನಡತಾಯಿ ಸೊರಗಿದ್ದಾಳೆ. ಇಂಥ ಉತ್ಸವದ ಸಮಯದಲ್ಲಾದರೂ ನಾಯಕರು ಬುದ್ಧಿಜೀವಿಗಳು ಮೊದಲುಗೊಂಡು ಸರ್ವರೂ ಆತ್ಮಸಂಶೋಧನೆ ಮಾಡಿಕೊಳ್ಳಬೇಕಾಗಿದೆ. ಕನ್ನಡಿಗರ ಮುಕ್ತಿ ಕನ್ನಡದಲ್ಲಿ, ಕನ್ನಡ ನಾಡಿನಲ್ಲಿದೆಯೆಂಬುದನ್ನು ಮರೆಯಬಾರದು. ಅಂಗದಿಂದ ಅಂಗಿಗೆ ಕ್ಷೇಮ, ಭಾರತದ ಕ್ಷೇಮ ಅದರ ಅಂಗವಾದ ಕನ್ನಡನಾಡಿನಲ್ಲಿದೆ. ಇಂಥ ಸಂದರ್ಭದಲ್ಲಿ ಆಗಿರುವ, ಆಗಬೇಕಾಗಿರುವ ನಾಡಿನ ಅಭಿವೃದ್ಧಿಯನ್ನು ಕುರಿತ, ಭಾಷಾಭಿವೃದ್ಧಿಯನ್ನು ಕುರಿತ ವಸ್ತುಪ್ರದರ್ಶನವಿದ್ದರೆ ಉತ್ಸವಕ್ಕೆ ಹೆಚ್ಚು ಶೋಭೆ ಲಭಿಸೀತೆಂದು ಹೇಳಬಹುದಾಗಿದೆ. ಉತ್ಸವದ ಎಲ್ಲ ಕಾರ್ಯಕ್ರಮಗಳು ಸುಸೂತ್ರವಾಗಿ ನಡೆಯಲಿ, ಸತ್ಯಕ್ಕೆ ಜಯ ದೊರೆಯಲಿ, ಸರ್ವರೂ ರಾಷ್ಟ್ರ ರಾಜ್ಯಗಳ ಕ್ಷೇಮದ ಬಗ್ಗೆ ಚಿಂತನೆ ನಡಸಲಿ, ಆ ದಿಶೆಯಲ್ಲಿ ಸರ್ವರೂ ದೀಕ್ಷೆಯನ್ನು ತೊಡಲಿ, ಸರ್ವಾಭ್ಯುದಯಕ್ಕಾಗಿ ಜನಮನದ ಅಭೀಪ್ಸೆಯಂತೆ ವಾಜಪೇಯಿ ಯಜ್ಞ ಸಾಂಗವಾಗಿ ನೆರವೇರಲಿ, ಕೃಷ್ಣ ಸಾರಥ್ಯದ ವಿಜಯಯಾತ್ರೆ ಗುರಿ ಸೇರಲಿ, ಎಲ್ಲೆಲ್ಲೂ ಪಾಂಚಜನ್ಯ ಮೊಳಗಲಿ ಎಂದು ಹಾರೈಸುತ್ತೇನೆ.

ಓಂ ಹಾಲು ಹಳ್ಳ ಹರಿಯಲಿ। ಜೇನು ಮಳೆಯು ಸುರಿಯಲಿ।
ಪೈರು ಪಚ್ಚೆ ಬೆಳೆಯಲಿ। ತೆನೆಯ ಚಿನ್ನ ಹೊಳೆಯಲಿ।
ಮುಗಿದು ಸಮರ ನರಬಲಿ। ಶಾಂತಿ ಜಗವ ತುಂಬಲಿ।

ಎಂಬ ಕವಿವಾಣಿಯನ್ನು ನೆನೆಯುತ್ತ, ನನಗೆ ಈ ಪವಿತ್ರಾವಕಾಶವನ್ನು ಕಲ್ಪಿಸಿ ಧನ್ಯನನ್ನಾಗಿ ಮಾಡಿದ ಎಲ್ಲರಿಗೂ ಕೈಮುಗಿದು ನನ್ನ ನಮನಗಳನ್ನು ಸಲ್ಲಿಸುತ್ತೇನೆ.

ದೇಜಗೌ

ಇತಿಹಾಸ ನಿರ್ಮಾಪಕ ಗೋಪಾಲಗೌಡ ಶಾಂತವೇರಿ

ಚಪ್ಪಲಿ ಕಚ್ಚಿದವನಿಗಲ್ಲದೆ ಅನ್ಯರಿಗೆ ಕಚ್ಚುನೋವಿನ ಬೇನೆ ಅರ್ಥವಾಗದು. ರೈತನ ಕಷ್ಟ ರೈತನಿಗಲ್ಲದೆ ದೊರೆಗೆ ತಿಳಿಯದು. ಅಂತೆಯೇ ದಲಿತನ ನೋವು ದಲಿತನಿಗಲ್ಲದೆ ಉತ್ತಮರಿಗರಿವಾಗದು. ಗೇಣಿದಾರರ ಕಷ್ಟಕಾರ್ಪಣ್ಯಗಳು ಗೇಣಿದಾರರಿಗಲ್ಲದೆ ದಣಿಗಳಿಗೆ ಅರ್ಥವಾಗದು. ಅಮೆರಿಕೆಯ ನೀಗ್ರೋಗಳ ವ್ಯಥೆಯೂ ಇಂಥದೇ. ಇದು ಲೋಕರೂಢಿ. ದಲಿತ ಕುಟುಂಬದಲ್ಲಿ ಹುಟ್ಟಿ ದಲಿತರ ಕಷ್ಟಕ್ಲೇಶಗಳಲ್ಲಿ ಪಾಲ್ಗೊಂಡು, ಸವರ್ಣೀಯರ ಬರ್ಬರ ಸದೃಶ ಅಮಾನವೀಯ ದೌರ್ಜನ್ಯಗಳಿಗೆ ಗುರಿಯಾಗಿ ನೊಂದು ಬೆಂದು ಬಸವಳಿಯಲಾಗಿ, ಬುವಿ ಬಾನಂತರದಲ್ಲಿ ನಿರಾಶೆ ಬಾಯಿ ತೆರೆದಿರಲಾಗಿ ಡಾ|| ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸಕಾರಣ ಕ್ರೋಧ ದಲಿತೋದ್ಧಾರ ಸಂಕಲ್ಪ ಶಕ್ತಿಯಾಗಿ ಪರಿವರ್ತನೆಗೊಂಡದ್ದು ಸಹಜ. ಅಂತೆಯೇ ಗೇಣಿದಾರರ ನಡುವೆ ಜನಿಸಿ, ಅವರ ಗೋಳು ನಿಟ್ಟುಸಿರುಗಳಲ್ಲಿ ತಾವೂ ಭಾಗಿಗಳಾಗಿ, ಕೊನೆಗೆ ಅವರ ಮುಕ್ತಿಗಾಗಿ ಗೋಪಾಲಗೌಡರು ಪ್ರತಿಜ್ಞಾ ಗಾಂಗೇಯರಾದದ್ದು ನಾಡಿನ ಸುದೈವ. ರಾಷ್ಟ್ರದ ರೈತರ ಮತ್ತು ಗೇಣಿದಾರರ ಮೂಕಸಂಕಟಕ್ಕೆ ಅವರು ನಾಲಗೆಯಾದ ಕಥೆಯೊಂದು ಜಯಗಾಥೆಯಾದದ್ದಲ್ಲದೆ, ರಾಷ್ಟ್ರೀಯ ಸ್ವಾತಂತ್ರ್ಯದ ಮಹದ್ಘಟನೆಯಾಗುತ್ತದೆ; ಮಹತ್ವಪೂರ್ಣದ ಚಾರಿತ್ರಿಕ ಸಂಗತಿಯಾಗುತ್ತದೆ. ದಲಿತರಿಗೆ, ಜೀತಗಾರರಿಗೆ, ಗೇಣಿದಾರರಿಗೆ, ಸಮಾಜದ ಕೊನೆಯ ಪ್ರಜೆಗೆ ಬಿಡುಗಡೆ ಇಲ್ಲವಾದರೆ, ದೇಶಕ್ಕೆ ಪೂರ್ಣ ಸ್ವಾತಂತ್ರ್ಯ ದೊರೆತಂತಾಗುವುದಿಲ್ಲ; ಸ್ವಾತಂತ್ರ್ಯದ ಪರಿಕಲ್ಪನೆ ಹುಸಿಯಾಗುತ್ತದೆ.

ಗಾಂಧೀಜಿಯ ಕನಸೆ ನನಸಾದಂತೆ, ಸ್ವಾತಂತ್ರ ಜ್ಯೋತಿಯೇ ಮೂರ್ತಿವೆತ್ತಂತೆ, ಜಗತ್ತಿನ ಗೇಣಿದಾರರ ಗೋಳೇ ಸಾಕಾರಗೊಂಡಂತೆ ಮಲೆನಾಡಿನ ಮೂಲೆಯಲ್ಲಿ ಹುಟ್ಟಿದ ಗೋಪಾಲಗೌಡರು ಬಡತನವನ್ನು ಹೊದ್ದುಕೊಂಡಿದ್ದರೂ, ಕೀರ್ತಿ ಲತೆಗೆ ಆಶ್ರಯವೆಂಬಂತೆ ಬೆಳೆಯುತ್ತಾರೆ. ಅವರು ಇಂಟರ್‌ಮೀಡಿಯಟ್‌ತನಕ ಓದಿದ್ದುಂಟಾದರೂ, ಶಾಲಾಕಾಲೇಜುಗಳ ಹೊರಗೆ ಕಲಿತದ್ದೇ ಹೆಚ್ಚು. ಅವರ ಜ್ಞಾನ ದಾಹ ಪರಿಹಾರಕ್ಕೆ ಮಾನಸಸರೋವರದ ನೀರೇ ಬೇಕಾಗುತ್ತದೆ; ಶಾಲಾಕಾಲೇಜುಗಳ ನಲ್ಲಿಯ ನೀರು ಸಾಲದಾಗುತ್ತದೆ. ಕುಮಾರವ್ಯಾಸ, ಲಕ್ಷ್ಮೀಶ, ಬೇಂದ್ರೆ, ಕುವೆಂಪು, ಡಿವಿಜಿ, ಕಾರಂತ, ಮಾರ್ಕ್ಸ್, ಗಾಂಧಿ ಕೃತಿಗಳು ಅವರ ಜ್ಞಾನದಾಹವನ್ನು ಹಿಂಗಿಸುತ್ತಿದ್ದುವಲ್ಲದೆ, ಅವರ ಪ್ರತಿಭಾ ಜ್ವಾಲೆಯನ್ನು ಉದ್ದೀಪನಗೊಳಿಸುತ್ತವೆ; ಅವರ ಆಲೋಚನೆಗಳನ್ನು ಚುರುಕುಗೊಳಿಸುತ್ತವೆ; ಅವರ ಭಾಷೆಗೆ ಸಾಣೆ ಹಿಡಿಯುತ್ತವೆ. ಗಾಂಧಿ ಸಿದ್ಧಾಂತ ಮತ್ತು ಸುಭಾಷ್‌ಚಂದ್ರಬೋಸ್‌ರ ಉಜ್ವಲ ರಾಷ್ಟ್ರಭಕ್ತಿ ಅವರನ್ನು ದಂಗುಗೊಳಿಸುತ್ತವೆ. ವಿದೇಶೀಯ ಆಡಳಿತ ಯಾವ ರೂಪದಲ್ಲಿರಲಿ, ವಿಶ್ವದ ಯಾವ

ಭಾಗದಲ್ಲಿರಲಿ, ಯಾವ ರೀತಿಯಿಂದಾದರೂ, ಎಷ್ಟಾದರೂ ಬೆಲೆ ತೆತ್ತು ಅದನ್ನು ತೆರವು ಮಾಡಬೇಕಾದ್ದು ಆತ್ಮಗೌರವವುಳ್ಳ ಜನರ ಕರ್ತವ್ಯವೆಂಬ ಸತ್ಯವನ್ನು ಗೌಡರು ವಿದ್ಯಾರ್ಥಿ ದಶೆಯಲ್ಲಿಯೇ ಮನದಟ್ಟು ಮಾಡಿಕೊಳ್ಳುತ್ತಾರೆ. ಉಪ್ಪಿನ ಸತ್ಯಾಗ್ರಹ, ಭಾರತ ಬಿಟ್ಟು ತೊಲಗಿ ಮೊದಲಾದ ಗಾಂಧೀಜಿಯ ಕರೆಗಳಿಗೆ ಮಣಿದು, ಚಳುವಳಿ ನಡೆಸಿ ಜೈಲುವಾಸವನ್ನು ಅವರು ಅನುಭವಿಸುತ್ತಾರೆ. ಅನ್ಯಾಯದ ವಿರುದ್ಧವಾಗಿ ಆಂದೋಲನ ನಡೆಸುವ, ಅನಿಷ್ಟ ಸಂಪ್ರದಾಯಗಳ ವಿರುದ್ಧವಾಗಿ ಬಂಡಾಯವೇಳುವ ಮನೋವೃತ್ತಿ ಅವರ ಶರೀರದ ಕಣ ಕಣಗಳಲ್ಲಿ ಹುದುಗಿದ್ದು, ಅವರ ಬಾಲ್ಯ ಯೌವನಗಳೊಡನೆ ಅದವ್ಯು ಶಕ್ತಿಯಾಗಿ ವಿಕಾಸಗೊಳ್ಳುತ್ತಿತ್ತೆಂದೇ ಹೇಳಬೇಕು.

ಒಂದು ಕಡೆ ಶ್ರೀಮಂತರ ಬಿಗಿಮುಷ್ಟಿಯಲ್ಲಿ ಗೇಣಿದಾರರು ಜೀವಂತ ಶವಗಳಾಗುತ್ತಿದ್ದಾಗ ಮತ್ತೊಂದು ಕಡೆ ಗಾಂಧೀಜಿ ಮೊದಲಾದ ಸ್ವಾತಂತ್ರ್ಯ ವೀರರು ಜೈಲಿನಲ್ಲಿ ಕೊಳೆಯುತ್ತಿದ್ದಾಗ, ಸ್ವಾತಂತ್ರ್ಯದೇವಿ ಕೈಬೀಸಿ ಕರೆಯುತ್ತಿದ್ದಾಗ ಆ ಕಡೆ ಗಮನ ಹರಿಸದೆ ಕಾಲೇಜಿನ ನಾಲ್ಕು ಗೋಡೆಗಳ ಮಧ್ಯೆ ಗಿಳಿಪಾಠ ಕೇಳಿಕೊಂಡಿರಲು ಗೌಡರಿಗೆ ಸಾಧ್ಯವಾಗದು. ಕಾಲೇಜುರಂಗದಿಂದ ನೇರವಾಗಿ ಲೋಕರಂಗವನ್ನು ಪ್ರವೇಶಿಸಿ ಪ್ರತ್ಯಕ್ಷವಾಗಿಯೊ ಪರೋಕ್ಷವಾಗಿಯೊ ಲೋಹಿಯಾ ಗಾಂಧಿ ಜಯಪ್ರಕಾಶ್ ನಾರಾಯಣರ ಗುರುಪಾತ್ರವನ್ನೊಪ್ಪಿಕೊಂಡು, ಸಾಮಾನ್ಯರೊಡನೆ ಅತಿಸಾಮಾನ್ಯರಾಗಿ ಒಡನಾಡುತ್ತ, ಸ್ವತಂತ್ರವಾಗಿ ಆಲೋಚಿಸುತ್ತ, ಲೋಕಾನುಭವ ಶ್ರೀಮಂತರಾಗುತ್ತಾರೆ. ಹೌದು, ದಾರಿದ್ರ್ಯದ ನಡುವೆಯೂ ಅಪೂರ್ವ ಶ್ರೀಮಂತರಾಗುತ್ತಾರೆ. ಸ್ವಾತಂತ್ರ್ಯ ಕೈಗೂಡುತ್ತಿದ್ದಂತೆ ಸ್ವಾತಂತ್ರ್ಯದಾತ ಹತಗೊಳ್ಳಲಾಗಿ, ಕಾಂಗ್ರೆಸ್ಸು ಬಂಡವಾಳಶಾಹಿಯ ಕಡೆಗೆ ವಾಲುತ್ತಿರಲಾಗಿ, ಗೋಪಾಲಗೌಡರು ಸಂಪೂರ್ಣವಾಗಿ ರಾಮ ಮನೋಹರ ಲೋಹಿಯಾ ಅವರ ಸರ್ವಂಕಷ ವಿದ್ವತ್ತು, ತಲಸ್ಪರ್ಶಿಯಾದ ಆಲೋಚನೆ, ದೀನದಲಿತ ಕ್ಷೇಮಕಾತರತೆ, ನ್ಯಾಯ ನೈಷ್ಠುರ್ಯ, ಪಾರದರ್ಶಿಕ ವರ್ತನೆ, ವಿಶ್ವಾಸಾರ್ಹವಾದ ಮೊನಚುನುಡಿ, ಎಲ್ಲಕ್ಕಿಂತ ಮಿಗಿಲಾಗಿ ಅವರ ಮಾನವೀಯತೆ ಗೌಡರನ್ನು ಸೆರೆಹಿಡಿಯುತ್ತವೆ. ಅಷ್ಟೇಅಲ್ಲ, ಅವು ಅವರ ಬದುಕನ್ನು ರೂಪಿಸುತ್ತವೆ ಮಾತ್ರವಲ್ಲ, ಆ ಬದುಕಿನ ಅವಿಭಾಜ್ಯಾಂಗವಾಗುತ್ತವೆ. ಇಂಡಿಯಾದಲ್ಲಿ ದ್ವಿತೀಯ ಗಾಂಧಿಯಂತು ಹುಟ್ಟಲಿಲ್ಲ, ದ್ವಿತೀಯ ಲೋಹಿಯಾ ಅವರನ್ನು ಕಂಡ ಹೆಮ್ಮೆ ಕರ್ನಾಟಕದ್ದಾಗಿದೆ.

ತಾನು ಕೆತ್ತಿದ ವಿಗ್ರಹವೇ ಶಿಲ್ಪಿಯನ್ನು ಲೋಕದಲ್ಲೆಲ್ಲ ಮೆರೆಸುವಂತೆ, ಗಣಪತಯ್ಯ ಮೊದಲಾದವರೊಡನೆ ೧೯೫೨ ರಲ್ಲಿ ತಾವು ಪ್ರಾರಂಭಿಸಿದ ಕಾಗೋಡು ಸತ್ಯಾಗ್ರಹವೇ ಗೌಡರ ಹೆಸರನ್ನು ಜಗತ್ತಿನ ಮೂಲೆ ಮೂಲೆಗೆ ಪಸರಿಸುತ್ತದೆ. ಜಮೀನ್ದಾರರ ಮತ್ತು ಸರ್ಕಾರದ ವಿರುದ್ಧವಾಗಿ ಬಂಡೆದ್ದ ಕುರುಕ್ಷೇತ್ರವದು. ಲೋಹಿಯಾ ಅವರು ಆ ಸತ್ಯಾಗ್ರಹದಲ್ಲಿ ಭಾಗವಹಿಸಲಾಗಿ ಅದಕ್ಕೆ ಅಂತರರಾಷ್ಟ್ರೀಯ ಖ್ಯಾತಿ ಮತ್ತು ಐತಿಹಾಸಿಕ ಮಹತ್ವ ಲಭಿಸಿದವೆಂಬುದನ್ನು ಮರೆಯುವಂತಿಲ್ಲ. ಅದರಿಂದ ರೈತ ಚಳು

ವಳಿಗೆ ಅಜೇಯ ಶಕ್ತಿ ಪ್ರಾಪ್ತವಾಯಿತಲ್ಲದೆ, ಗೌಡರ ನೇತೃತ್ವದಲ್ಲಿ ಕರ್ನಾಟಕದಲ್ಲಿ ಸಮಾಜವಾದ ಭದ್ರವಾಗಿ ನೆಲೆಯೂರುವಂತಾಗುತ್ತದೆ. ಬಂಗಾರಪ್ಪ, ತಿಮ್ಮಪ್ಪ ಜೆ. ಎಚ್. ಪಟೇಲ್ ಮೊದಲಾದವರ ಸುಪ್ತಶಕ್ತಿ ಮಂಜೂಷೆಯ ಮುಚ್ಚಳವನ್ನು ತೆಗೆಯಲು ಅದು ಸಹಾಯಕವಾಗುತ್ತದೆ.

ಅದೇ ವರ್ಷ ಹೊಸನಗರ ಕ್ಷೇತ್ರದಿಂದ ವಿಧಾನಸಭೆಗೆ ಗೌಡರು ಆಯ್ಕೆಗೊಳ್ಳು ತ್ತಾರೆ. ಗೇಣಿದಾರರ ಕುಟುಂಬದಿಂದ ಬಂದ ತಿಕಾಣಿಯೂ ಇಲ್ಲದ ಯುವಕನೊಬ್ಬ ಚುನಾವಣೆಯಲ್ಲಿ ಗೆದ್ದದೊಂದು ಸವಾಲ. 'ನೀವು ಹರಸಿ ಕೊಡುವ ಒಂದು ಮತ ಮತ್ತು ಒಂದು ರೂಪಾಯಿಂದ ನನಗೆ ಜಯವೊದಗುತ್ತದೆ' ಎಂಬ ಅವರ ಮನವಿ ಫಲ ದಾಯಿಯಾಗುತ್ತದೆ. ಚುನಾವಣೆಯ ಎಲ್ಲ ಖರ್ಚುಗಳನ್ನು ಜನರೇ ಭರಿಸುತ್ತಾರೆ. ತ್ಯಾಗ ಪ್ರಾಮಾಣಿಕತೆ ಸೇವಾನಿಷ್ಠೆ ಪಾರದರ್ಶಿಕತೆಗಳಿದ್ದರೆ ಚುನಾವಣೆಗಳಲ್ಲಿ ಭ್ರಷ್ಟಾಚಾರ ನಡೆಯುವುದಿಲ್ಲವೆನ್ನುವುದಕ್ಕೆ ಆ ಚುನಾವಣೆ ಜ್ವಲಂತ ನಿದರ್ಶನ ವಾಗಿದೆ. ಸತ್ಯವಂತರ ಚುನಾವಣೆಯ ಯೋಗಕ್ಷೇಮವನ್ನು ಕೃತಜ್ಞ ಜನರೇ ನೋಡಿ ಕೊಳ್ಳುತ್ತಾರೆನ್ನುವುದಕ್ಕೆ ಅನ್ಯಸಾಕ್ಷಿ ಅನವಶ್ಯ.

ಮೀನು ನೀರಿಗಿಳಿದಂತೆ ಗೋಪಾಲಗೌಡರು ವಿಧಾನಸಭೆಯನ್ನು ಪ್ರವೇಶಿಸು ತ್ತಾರೆ. ಮಿಂಚಿನಂಥ ಪ್ರತಿಭೆ, ಆಳವಾದ ವಿದ್ವತ್ತು, ನಿರ್ದಿಷ್ಟವಾದ ಆಲೋಚನೆ, ವಿಶಾಲ ಲೋಕಾನುಭವ ಹಾಗೂ ಸುಸ್ಪಷ್ಟ ಅರ್ಥಗರ್ಭಿತ ನಿರರ್ಗಳ ಭಾಷೆಯಿಂದಾಗಿ ವಿಧಾನಸಭೆ ಕಳೆಗಟ್ಟುತ್ತದೆ; ಅಲ್ಲಿಯ ಜಡವಸ್ತುಗಳಿಗೂ ಚೈತನ್ಯವುಂಟಾಗುತ್ತದೆ. ಗೌಡರ ಭಾಷಣವೆಂದರೆ, ಮುಖ್ಯಮಂತ್ರಿ ಮೊದಲುಗೊಂಡು ಎಲ್ಲ ಸದಸ್ಯರು ಹಾಜ ರಾಗಿ ಅವರ ಭಾಷಣವನ್ನು ಮೈಯೆಲ್ಲ ಕಿವಿಯಾಗಿ ಕೇಳುತ್ತಾರೆ. ಹಾಸ್ಯ, ವ್ಯಂಗ್ಯ ಚಟಾಕಿ ವಿಡಂಬನೆ ಓಜಸ್ಸು ವಿದ್ವತ್ತುಗಳಿಂದ ಸಮೃದ್ಧವಾದ ಅವರ ಭಾಷಣವೇ ಒಂದು ಹಬ್ಬ. ಆ ವಾದೀಭಸಿಂಹರ ಗರ್ಜನೆ ಆಡಳಿತ ಪಕ್ಷಕ್ಕೆ ಭೀಕರ ಸ್ವಪ್ನ. ಅಲ್ಪ ಮಹತ್ವಗಳ ತಾರತಮ್ಯವಿಲ್ಲದೆ, ಅಧ್ಯಯನ ಅನ್ವೇಷಣೆ ಆಲೋಚನೆಯಿಲ್ಲದೆ, ಸರ್ವ ಶಸ್ತ್ರ ಸನ್ನದ್ಧರಾಗದೆ ಅವರು ವಾದ ವಿವಾದಗಳ ಅಖಾಡಕ್ಕಿಳಿದವರಲ್ಲ. ಮಾನ್ಯರ ಅಥವಾ ಅಸಾಮಾನ್ಯರ ಅಹವಾಲುಗಳಿಗೆ ತಲೆ ಕೆಡಿಸಿಕೊಳ್ಳದೆ ಸದಾ ಅವರು ಸಾಮಾನ್ಯರ ಸಮಸ್ಯೆಗಳಲ್ಲಿಯೇ ಮುಳುಗಿರುತ್ತಾರೆ. ವಿಧಾನಸಭೆಯಲ್ಲವರು ತಮ್ಮ ಭಾಷಣಕ್ಕೆತ್ತಿಕೊಂಡ ವಿಷಯಗಳನ್ನು ಗಮನಿಸಿದಾಗ, ಅವರ ಧ್ಯೇಯ ಧೋರಣೆ ವಿಚಾರಧಾರೆ ಕನಸು ನನಸು ಸಂಕಲ್ಪಗಳ ಪರಿಚಯವಾಗುತ್ತದೆ. ದೀನದಲಿತರಿಗೆ ಉಚಿತ ಶಿಕ್ಷಣ, ಭೂಸುಧಾರಣೆಯ ಮೂಲಕ ಉಳುವವನಿಗೆ ಮತ್ತು ಇಲ್ಲದವರಿಗೆ ಭೂಮಿಯ ಹಂಚಿಕೆ, ರಾಜಧನ ರದ್ದಿಯಾತಿ, ಇನಾಂ ರದ್ದಿಯಾತಿ, ಗೇಣಿ ಜೀತ ಗಾರಿಕೆ ರದ್ದತಿ, ರೈತ ಸಂಘಟನೆ, ಕನಿಷ್ಠ ಮತ್ತು ವರಿಷ್ಠ ನೌಕರಿಗಳ ಹಂತಗಳಲ್ಲಿ ಅಂತರಗಳನ್ನು ಕಡಮೆ ಮಾಡುವ ಮೂಲಕ ಸಂಬಳಗಳ ತರ್ಕಬದ್ಧ ನಿಷ್ಕರ್ಷೆ, ರೈತ ಸಂಘಟನೆ, ಲಂಚನಿರೋಧ–ಇವು ಸಮಾಜವಾದ ಸಿದ್ಧಾಂತ ರಚನೆಗೆ ಆಕರಗಳಾಗಿವೆ

ಎಂಬುದನ್ನು ಮರೆಯುವಂತಿಲ್ಲ. ಇಂದಿರಾಗಾಂಧಿಯವರ ಗರೀಬಿ ಹಟಾವೊ ಮಂತ್ರ ಹುಟ್ಟುವುದಕ್ಕೆ ಮುಂಚೆಯೇ, ಒಂದು ದಶಕದ ಹಿಂದೆಯೇ ಗೋಪಾಲಗೌಡರ ವಿಚಾರಲಹರಿ ಆ ಮಾರ್ಗದಲ್ಲಿ ಹರಿದಿತ್ತೆನ್ನುವುದನ್ನು ಗಮನಿಸಬೇಕಾಗಿದೆ. ಭೂಮಿ ಮೊದಲುಗೊಂಡು, ಉತ್ಪತ್ತಿ ಸಾಧನಗಳು ಸ್ವಂತ ಆಸ್ತಿಯಾಗದೆ, ಸಮಾಜದ ಆಸ್ತಿ ಆದಾಗ ಮಾತ್ರ, ಮಠ ಮತ್ತು ದೇವಾಲಯಗಳ ಆಸ್ತಿಯನ್ನು ರಾಷ್ಟ್ರೀಕರಿಸಿದಾಗ ದೇಶದಲ್ಲಿ ಬಡತನ ಹೋಗಿ ಸುಭಿಕ್ಷ ತಾಂಡವವಾಡುತ್ತದೆಂಬುದು ಅವರ ಅಚಲ ನಂಬಿಕೆ.

ಪರಭಾಷೆಯನ್ನಾಗಲಿ, ಅನ್ಯಭಾಷೀಯರನ್ನಾಗಲಿ ಅವರೆಂದೂ ದ್ವೇಷಿಸಿದವರಲ್ಲ. ಆದರೆ ಸಾಮಾನ್ಯರ ದೃಷ್ಟಿಯಿಂದ, ಪ್ರಜಾಪ್ರಭುತ್ವ ಮತ್ತು ವಿಕೇಂದ್ರೀಕರಣ ತತ್ವದ ಕಡೆಯಿಂದ, ಮನೋವಿಜ್ಞಾನದ ದೃಷ್ಟಿಯಿಂದ ಬಹುಸಂಖ್ಯಾತರ ಭಾಷೆ ಸರ್ವ ಮಾಧ್ಯಮವಾಗತಕ್ಕದ್ದು ಧರ್ಮ. ಭಾವೈಕ್ಯ ಮತ್ತು ಆಡಳಿತ ಸೌಲಭ್ಯದ ದೃಷ್ಟಿಯಿಂದ ಭಾಷಾವಾರು ಪ್ರಾಂತ ನಿರ್ಮಾಣವಾಗತಕ್ಕದ್ದು ಶ್ರೇಯಸ್ಕರ; ಅದರಿಂದ ಸರ್ವಸಮಾನತೆಯನ್ನು ಸಾಧಿಸಲು ಸಾಧ್ಯವಾಗುತ್ತದೆಂದವರು ಪ್ರಬಲವಾಗಿ ಸಮರ್ಥವಾಗಿ ವಾದಿಸುತ್ತಾರಲ್ಲದೆ, ಏಕೀಕರಣಕ್ಕಾಗಿ ಮತ್ತು ಕನ್ನಡ ಭಾಷೆಯ ಸ್ಥಾನಮಾನಗಳಿಗಾಗಿ ದೃಢಹಠದಿಂದ ಹೋರಾಟ ನಡೆಸುತ್ತಾರೆ, ಅಂಗ್ರೇಜಿ ಹಠಾವೊ ಚಳುವಳಿಯಲ್ಲಿ ಭಾಗವಹಿಸುತ್ತಾರೆ. ಭಾಷೆಯೂ ಶೋಷಣೆಯ ಸಾಧನವಾಗಬಾರದು, ಯಾವ ಕಾರಣದಿಂದಲೇ ಆಗಲಿ ಭಾರತೀಯ ಸಂಸ್ಕೃತಿಯ ವೈವಿಧ್ಯವನ್ನು ಪೋಷಿಸುವ ಫಲವತ್ತಾದ ಪುರಾತನ ಭಾಷೆಗಳನ್ನು ತುಳಿಯುವ ಯಜಮಾನ ಭಾಷೆಯಾಗಬಾರದೆಂಬುವ ಅವರ ತರ್ಕದಲ್ಲಿ ವಿವೇಕವಿದೆ, ಔದಾರ್ಯವಿದೆ, ಸಮಾಜವಾದ ಸಿದ್ಧಾಂತದ ಲಕ್ಷಣಗಳಿವೆಯೆಂದು ತಿಳಿಯಬೇಕಾಗಿದೆ.

ತಾವು ನಂಬಿದ ತತ್ವದ ಕಾರ್ಯಾಚರಣೆಗಾಗಿ ಎಂಥ ಹೋರಾಟಕ್ಕಾದರೂ ಸಿದ್ಧರೆಂಬುದಕ್ಕೆ ವಿಧಾನಸಭೆಯಲ್ಲಿ ರಾಜ್ಯಪಾಲರ ಆಂಗ್ಲ ಭಾಷಣವನ್ನು ಹರಿದು, ಕಾಲಿನಲ್ಲಿ ತುಳಿದ ಪ್ರಸಂಗ, ಮೈಕು ಮುರಿದೆಸೆದ ಪ್ರಕರಣ, ಗೋವಾ ವಿಮೋಚನಾ ಚಳುವಳಿಯಲ್ಲಿ ಸಕ್ರಿಯವಾಗಿ ಪಾತ್ರವಹಿಸಿದ್ದು, ದಸರಾ ಸಮಯದಲ್ಲಿ ಮುಸ್ಲಿಂ ಸ್ತ್ರೀ ವೇಷಧಾರಿಯಾಗಿ ಮಹಾರಾಜರ ಮುಂದೆ ಕಪ್ಪು ಬಾವುಟ ಹಿಡಿದದ್ದೇ ಸಾಕ್ಷಿ. ಅವರ ಪ್ರತಿಯೊಂದು ನಡೆನುಡಿ ಚಳುವಳಿಯಲ್ಲಿಯೂ ಶುದ್ಧ ನಿಷ್ಕಪಟ ಕುತಂತ್ರ ವಿಹೀನ ಗಾಢೀಯ ವರ್ಚಸ್ಸು ಮತ್ತು ಕ್ಷಾತ್ರ ತೇಜಸ್ಸು ವಿಜೃಂಭಿಸುತ್ತವೆ. ಆದರೆ ಮಹಾರಾಜರು ಮೊದಲುಗೊಂಡು ಯಾವ ವ್ಯಕ್ತಿಯಲ್ಲಿಯೂ ಕಿಂಚಿತ್ತೂ ದ್ವೇಷವಿಲ್ಲ. ಅಂಜಿಕೆ ಎಂಬ ಪದವೇ ಅವರ ಕೋಶದಲ್ಲಿಲ್ಲ. ಅವರೆಂದೂ ಶತ್ರುವಿಗಂಜಿದವರಲ್ಲ. ಅವರಿಗೆ ಶತ್ರುಗಳೇ ಇಲ್ಲವೆಂದರೂ ತಪ್ಪಲ್ಲ. ಅಕಸ್ಮಾತ್ ಈ ಬೀದಿಯಲ್ಲಿ ಯಾರೊಡನೆ ಯಾವರೂ ಬಯ್ದಾಡಿದರೆ, ಆ ಬೀದಿಯಲ್ಲಿ ತಾವೇ ಮೇಲೆ ಬಿದ್ದು ಅವರನ್ನು

ಮಾಡಿಸುತ್ತಾರೆ. ಅವರದು ಸ್ವಚ್ಛ ಮನಸ್ಸಾದ್ದರಿಂದ ಸೇಡು ದ್ವೇಷ ಕೋಪಗಳಿಗಲ್ಲಿ ಸ್ಥಾನವಿಲ್ಲ.

೧೯೫೭ ರಲ್ಲಿ ತೀರ್ಥಹಳ್ಳಿ ಕ್ಷೇತ್ರದಿಂದ ಅವರು ಚುನಾವಣೆಗೆ ನಿಂತು ಸೋಲನುಭವಿಸುತ್ತಾರೆ. ಅದು ವಾಸ್ತವವಾಗಿ ಅವರ ಸೋಲಲ್ಲ, ಜನತೆಯ ಸೋಲು. ಸೋತರೂ ಅವರು ನಿರಾಶರಾಗುವುದಿಲ್ಲ. ಅವರು ನಿಂತ, ಕುಳಿತ ಜಾಗವೇ ಶಾಸನಸಭೆ ಆಗುತ್ತದೆ, ಸುತ್ತ ನೆರೆದ ಜನರೇ ಶಾಸಕರಾಗುತ್ತಾರೆ. ತಾವು ನಂಬಿದ ತತ್ತ್ವಗಳ ಪ್ರಚಾರದಲ್ಲಿ, ಪಕ್ಷವನ್ನು ಕಟ್ಟುವಲ್ಲಿ ಸಹೋದ್ಯೋಗಿಗಳ ಕ್ಷೇಮಾಭ್ಯುದಯ ಸಾಧನೆಯಲ್ಲಿ, ಬಡವರ ಗೋಳಿನ ನಿವಾರಣೆಯಲ್ಲಿ ಸದಾ ನಿರತರಾಗುತ್ತಾರೆ. ಕೈಯಲ್ಲಿ ಹಣವಿಲ್ಲದಿದ್ದರೂ, ಮುಂದೇನು, ನಾಳೆಗೇನು, ನಾಡಿದ್ದಿಗೇನೆಂದು ಯೋಚಿಸುವುದಿಲ್ಲ. ನಡುವಿಗೆ ಹಮ್ಮಿಣಿಯನ್ನು ಕಟ್ಟಿಕೊಂಡು, ಬಾಯಲ್ಲಿ ಬೆಳ್ಳಿಯ ಚಂಚವಿಟ್ಟುಕೊಂಡು ಹುಟ್ಟಿದವರಿಗೆ ಹಣದ ಅಭಾವದ ಪರಿಣಾಮ ಗೊತ್ತಾಗುತ್ತದೆಯೆ ಹೊರತು, ಬಡವರಿಗಲ್ಲ. ಬಡವರಿಗೆ ಹಣದ ಅಭಾವದ ಕಲ್ಪನೆಯೆ ಇರುವುದಿಲ್ಲ. ಜಲಚರಗಳಿಗೆ ನೀರಿನ ಅಭಾವ ತೋರಬಹುದೇ ಹೊರತು ಮರುಭೂಮಿಯ ಜಂತುಗಳಿಗಲ್ಲ. ಅಂತೆಯೇ ಗೌಡರು ಹಣ ಇದ್ದಾಗ ಖರ್ಚು ಮಾಡುತ್ತಾರೆ; ಇಲ್ಲದಾಗ ಅದರ ಯೋಚನೆಯೂ ಇಲ್ಲ. ಇದ್ದಾಗ ಯಾರಾದರೂ ಬಂದು ಕೇಳಿದರೆ ಕೊಟ್ಟುಬಿಡುತ್ತಾರೆ. ಒಮ್ಮೆ ಬೆಂಗಳೂರಿಗೆ ಹೋಗಬೇಕಾಗಿತ್ತು. ಯಾರೊ ಮಿತ್ರರು ಅವರ ಕೈಗೆ ಐವತ್ತು ರೂಪಾಯಿ ಕೊಡುತ್ತಾರೆ. ನಿಲ್ದಾಣಕ್ಕೆ ಹೋಗುವ ದಾರಿಯಲ್ಲಿ ಪುಸ್ತಕದಂಗಡಿ ಕಣ್ಣಿಗೆ ಬೀಳುತ್ತದೆ. ಒಳಹೋಗುತ್ತಾರೆ. ಪುಸ್ತಕ ಕೊಳ್ಳುತ್ತಾರೆ. ನಿಲ್ದಾಣದಲ್ಲಿ ಓದುತ್ತ, ಜಗತ್ತನ್ನೆ ಮರೆಯುತ್ತಾರೆ. ಅಲ್ಲಿದ್ದ ಮಿತ್ರರೊಬ್ಬರು ಬಳಿಗೆ ಬಂದು ಅವರ ಕಾರ್ಯಕ್ರಮ ವಿಚಾರಿಸುತ್ತಾರೆ. ಅವರೇ ಟಿಕೀಟು ತಂದುಕೊಡುತ್ತಾರೆ.

ಕಡಿದಾಳ್ ಮಂಜಪ್ಪನವರು ರೆವಿನ್ಯೂ ಮಂತ್ರಿಗಳು. ಗೋಪಾಲಗೌಡರ ಸ್ಥಿತಿಗತಿಗಳನ್ನು ಬಲ್ಲವರೊಬ್ಬರು ಮಂತ್ರಿಗಳ ಬಳಿ ಹೋಗಿ, ಅವರ ಸ್ಥಿತಿಯನ್ನು ವಿವರಿಸಿ, ಏನಾದರೂ ಸಹಾಯ ಮಾಡುವಂತೆ ಕೇಳಿಕೊಳ್ಳುತ್ತಾರೆ. ನಾಲೆ ಕೆಳಗೆ ಆರು ಎಕರೆ ಗದ್ದೆ ಮಂಜೂರು ಮಾಡುವುದಾಗಿ ಮಂಜಪ್ಪನವರು ತಿಳಿಸುತ್ತಾರೆ. ನನ್ನೊಬ್ಬನಿಗೆ ಆರು ಎಕರೆ ಗದ್ದೆ ಮಂಜೂರು ಮಾಡುವ ಬದಲು ೬ ಮಂದಿ ಭೂಹೀನರಿಗೆ ತಲಾ ಒಂದೊಂದು ಎಕರೆ ಹಂಚಬಹುದೆಂದು ಗೌಡರು ಸೂಚಿಸುತ್ತಾರೆ. ೧೯೬೨ ರಲ್ಲಿ ಮತ್ತೆ ಶಾಸಕರಾಗುತ್ತಾರೆ. ೧೯೬೪ ರಲ್ಲಿ ಸೋನಕ್ಕರೊಡನೆ ಮದುವೆಯೂ ನೆರವೇರುತ್ತದೆ. ಬೆಂಗಳೂರಲ್ಲೊಂದು ನಿವೇಶನ ಕೊಡುವುದಾಗಿ ಸಂಬಂಧಪಟ್ಟವರು ಹೇಳಿಕಳಿಸುತ್ತಾರೆ. ಗೌಡರಿಗೆ ಅದೂ ಬೇಡ. ಅವರು ಸಂಸಾರಿಯಾಗಿಯೂ ಸನ್ಯಾಸಿ: ಲೋಕದ ಮಧ್ಯೆ ಇದ್ದೂ ಸ್ಥಿತಪ್ರಜ್ಞ. ಗಗನವಿಹಾರಿ ಹಕ್ಕಿಯಂತೆ ಸ್ವತಂತ್ರ, ನಿರ್ಲಿಪ್ತ, ನಿರ್ಮೋಹಿ.

ಬಡತನದ ಹಿಂಸೆಯೊ, ಪುಷ್ಟಿಕರ ಆಹಾರದ ಅಭಾವವೊ, ಬಡವರ ಸಂಕಷ್ಟಗಳಿಗೆ ಸದಾ ಸ್ಪಂದಿಸುತ್ತಿದ್ದ ಹೃದಯದ ತಾಪವೊ, ತಮ್ಮೊತ್ತರಕ್ಕೇರಲಾರದ ಸಹೋದ್ಯೋಗಿ

ಗಳನ್ನು ಕುರಿತ ಚಿಂತೆಯೊ, ಸುತ್ತಮುತ್ತಣ ಭ್ರಷ್ಟಾಚಾರದ ಬಗೆಗಿನ ಅಸಹನೆಯೊ ವ್ಯಥೆಯೊ ಕಾರಣವಾಗಿ ನಡುವಯಸ್ಸಿನಲ್ಲಿಯೇ ಅವರ ದೇಹ ಖಾಯಿಲೆಯ ಗೂಡಾಗುತ್ತದೆ. ಎಚ್. ಸಿ. ವಿಷ್ಣುಮೂರ್ತಿ ಸೋನಕ್ಕ ಕೋಣಂದೂರು ಲಿಂಗಪ್ಪ ಮೊದಲಾದ ಗೆಳೆಯರು ವೈಯೆಲ್ಲ ಎಚ್ಚರಿಕೆಯಾಗಿ ಅವರ ಶುಶ್ರೂಷೆಗೆ ನಿಲ್ಲುತ್ತಾರೆ. ಹಲವು ದಿನ ತಮ್ಮ ಮನೆಯಲ್ಲಿಯೇ ಅವರನ್ನಿರಿಸಿಕೊಂಡು, ಡಾಕ್ಟರ್ ವಿಷ್ಣುಮೂರ್ತಿ ತಮ್ಮ ಮಡದಿಯೊಡನೆ ಶ್ರದ್ಧಾಗೌರವದಿಂದ ಉಪಚರಿಸುತ್ತಾರೆ. ಲಿಂಗಪ್ಪನವರು ಸದಾ ಅವರ ಬೆಂಗಾವಲಿಗೆ ನಿಲ್ಲುತ್ತಾರೆ. ಕೊನೆ ಕೊನೆಗೆ ಅವರ ದೇಹಸ್ಥಿತಿ ಚಿಂತಾಜನಕ



ಗುರು ರಾಮಮನೋಹರ ಲೋಹಿಯಾರೊಂದಿಗೆ ಶಾಂತವೇರಿ ಗೋಪಾಲಗೌಡರು

ವಾಗುತ್ತದೆ; ಪ್ರಜ್ಞೆಯೂ ಮರೆಯಾಗುತ್ತದೆ. ೧೯೭೨ ರಲ್ಲಿ ತಮ್ಮ ೪೯ನೆಯ ವಯಸ್ಸಿನಲ್ಲಿ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ನಿಧನ ಹೊಂದುತ್ತಾರೆ. ಆಚಾರ್ಯ ನರೇಂದ್ರದೇವ್, ಅಚ್ಯುತ ಪಟವರ್ಧನ್, ಯೂಸುಫ್ ಮೆಹರಾಲಿ, ಲೋಹಿಯಾ ಮೊದಲಾದ ರಾಷ್ಟ್ರನಾಯಕರೊಡನೆ ಗುರುತಿಸಿಕೊಂಡು, ಅವರಿಗೆ ಸಮಗ್ರೆಯಾಗಿದ್ದ ಗೋಪಾಲಗೌಡರ ನಿಧನದೊಡನೆ ಕರ್ನಾಟಕದ ಸಮಾಜವಾದ ರಾಜಕೀಯ ನಿಟ್ಟುಸಿರು ಬಿಡುವಂತಾಗುತ್ತದೆ.

ಅವರು ತೀರಿಕೊಂಡಾಗ ಕಣ್ಣೀರು ಹರಿಸದ ಜನರಿಲ್ಲ, ನಾಯಕರಿಲ್ಲ. 'ಅವರೊಂದು ಹಿಂಡಗಲಿದ ಸಲಗ; ರಾಜಕೀಯ ಕ್ಷೇತ್ರದಲ್ಲಿ ಅವರಿತ್ತರಕ್ಕೇರಿದ ಸೃಜನಶೀಲ ರಾಜಕಾರಣಿಗಳಿಲ್ಲ. ಕ್ರಾಂತಿಕಾರಿ ಹೋರಾಟಗಾರರಾಗಿ, ಮಾನವತಾವಾದಿ

ಯಾಗಿ ನನ್ನಂಥ ಹಲವರಿಗೆ ರಾಜಕೀಯ ಗುರುವಾಗಿ, ಅವರ ಬದುಕುಗಳನ್ನು ರೂಪಿಸಿದ್ದಾರೆ. ಅವರೆಂದೂ ಆಶೆ ಆಮಿಷಗಳಿಗೊಳಗಾದವರಲ್ಲ; ಅವರೊಬ್ಬರು ಸ್ವಯಂ ಪ್ರಕಾಶ ಜ್ಯೋತಿ' ಎಂದು ಬಂಗಾರಪ್ಪ ಎದೆ ತುಂಬಿ ನುಡಿಯುತ್ತಾರೆ. 'ಅವರದು ಶುಭ್ರ ರಾಜಕೀಯ ಜೀವನ, ತತ್ತ್ವಸಮರ್ಪಿತ ತ್ಯಾಗ'ವೆಂದು ದೇವರಾಜ ಅರಸು ನಿರಸೂಯರಾಗಿ ಪ್ರಶಂಸಿಸುತ್ತಾರೆ. ನಿಜಲಿಂಗಪ್ಪನವರಂತು ಗೌಡರ ವಿಚಾರಸರಣಿಗೆ, ತತ್ತ್ವನಿಷ್ಠೆಗೆ, ನಿಷ್ಕಾಪಟ್ಯಕ್ಕೆ ಹಾಗೂ ಭಾಷಾಗಾರುಡಿಗತನಕ್ಕೆ ಮಾರುಹೋಗಿದ್ದಾರೆ. 'ಅವರು ಯಥಾಸ್ಥಿತಿವಾದಿಯಲ್ಲ; ದೂರದೃಷ್ಟಿಯ ವಾಸ್ತವತಾವಾದಿ.ಅವರ ಮೈಮನಗಳಲ್ಲಿ ದೀನ ದಲಿತ ರೈತರೇ ತುಂಬಿಕೊಂಡಿದ್ದರು' ಎಂಬುದು ಸುಪ್ರಸಿದ್ಧ ಗಾಯಕ ಕಾಳಿಂಗರಾಯರ ನುಡಿಗಾಣಿಕೆ. 'ಅಚ್ಚಗನ್ನಡದಲ್ಲಿ ಸ್ವಚ್ಛವಾಗಿ ವೈಚಾರಿಕ ಭಾಷಣ ಮಾಡಬಲ್ಲ ವಾಗ್ಮಿ' ಎಂಬುದು ಕವಿ ಪುತಿನ ಅವರ ಮೆಚ್ಚಿಕೆ. 'ಅವರ ಪಾಲಿಗೆ ಸಮಾಜವಾದ ಬರಿಯ ಸಿದ್ಧಾಂತವಲ್ಲ ; ಅವರ ಬದುಕೇ ಸಮಾಜವಾದ' ಎಂದೊಬ್ಬರ ಹೇಳಿದರೆ, 'ಕವಿಯೊಳಗೆ ಕ್ರಾಂತಿಕಾರಿಯಿರುವಂತೆ, ಕ್ರಾಂತಿಕಾರಿ ನಾಯಕನಲ್ಲಿ ಸೃಜನಶೀಲ ಕವಿ ಕುಳಿತಿರುತ್ತಾನೆ' ಎಂದು ಮತ್ತೊಬ್ಬರು ನುಡಿಯುತ್ತಾರೆ.ಶತಮಾನದ ರಾಜಕಾರಣಿಯೆಂಬುದು ಅಜೀಜ್ ಸೇಠರ ಉದ್ಗಾರ. ಅವರೊಬ್ಬರು ನಿರ್ಮಲ ವ್ಯಕ್ತಿ ಎಂಬುದು ಬಸವಲಿಂಗಪ್ಪನವರ ಪ್ರಶಂಸೆ. 'ಅವರೆಂದೂ ತಾವು ನಂಬಿದ ಧ್ಯೇಯ–ಧೋರಣೆಗಳಿಂದ ವಿಮುಖರಾಗಲಿಲ್ಲ. ಆಶೆ ಆಮಿಷಗಳಿಗೆ ಬಲಿಯಾಗಲಿಲ್ಲ. ಅವರೊಬ್ಬರು ಹುತಾತ್ಮರೆಂದರೂ ತಪ್ಪಾಗಲಾರದು. ರಾಜಕೀಯಕ್ಕಾಗಿ ಅವರು ತಮ್ಮ ಲೌಕಿಕವಾದುವುಗಳನ್ನೆಲ್ಲ ಯಜ್ಞ ಮಾಡಿದ್ದಾರೆ. ಅವರು ಸ್ವಲ್ಪ ಸಂಯಮದಿಂದ ಬಾಳಿದ್ದರೆ, ಇನ್ನಷ್ಟು ಕಾಲ ನಾಡಿನ ಸೇವೆಗಾಗಿ ಬದುಕಬಹುದಾಗಿತ್ತು. ಅವರ ಅಕಾಲ ಮರಣ ನಾಡಿನ ರಾಜಕೀಯ ರಂಗಕ್ಕೆ ಭರಿಸಲಾಗದ ನಷ್ಟ. ಅವರ ಸತ್ಯನಿಷ್ಠುರತೆ ಮತ್ತು ಪ್ರಾಮಾಣಿಕತೆಯನ್ನಾದರೂ ನಮ್ಮ ತರುಣರು ಅನುಸರಿಸಿ ನಡೆದರೆ ಈ ನಾಡಿನ ರಾಜಕೀಯ ಕ್ಷೇತ್ರ ಹೆಚ್ಚು ಪರಿಶುದ್ಧವಾದೀತು'!–ಹೀಗೆ ನುಡಿದವರು ಮಹಾಕವಿ ಕುವೆಂಪು. ಅವರ ಒಂದೊಂದು ಮಾತೂ ನಿಜ. ಹೇಗೂ ಹಳೆಯ ರಾಜಕಾರಣಿಗಳನ್ನು ತಿದ್ದಲು ಸಾಧ್ಯವಿಲ್ಲ. ಹೊಸ ಪೀಳಿಗೆಯ ತರುಣರಾದರೂ ಗೋಪಾಲಗೌಡರ ಆದರ್ಶವನ್ನನುಸರಿಸಿದ್ದಾದರೆ ಅವರಿಗೂ ಹಿತ, ದೇಶಕ್ಕೂ ಕ್ಷೇಮ ಎಂಬ ಕವಿಯ ಆಶಯವನ್ನು ಮರೆತದ್ದಾದರೆ ಇಡೀ ಸಮಾಜಕ್ಕೆ ಕೇಡು ತಪ್ಪಿದ್ದಲ್ಲ. ಗೋಪಾಲಗೌಡರನ್ನು ಅಗ್ರಗಣ್ಯ ಸಮಾಜವಾದಿ, ಸಂಭಾವಿತ, ಮಹಾಸಾಹಸಿ, ಪರಾಕ್ರಮಿ ಎಂದು ಕರೆದಿರುವ ಖಾದ್ರಿ ಶಾಮಣ್ಣನವರು ಅವರ ಬಹುಮುಖ ವ್ಯಕ್ತಿತ್ವವನ್ನು ನಿರೂಪಿಸುತ್ತ ಹೇಳಿದ ಮಾತು ಗೌಡರ ಎತ್ತರದ ವ್ಯಕ್ತಿತ್ವಕ್ಕೆತ್ತಿದ ಆರತಿಯಾಗಿದೆ. 'ಜೀವನದ ಸೊಗಸೆಲ್ಲಕ್ಕೂ ಅವರಲ್ಲಿ ಸ್ವಾಗತವಿತ್ತು. ಅದಕ್ಕೆ ಬೇಕಾದ ಅಭಿರುಚಿ ಇತ್ತು. ಸಂಗೀತ, ಸಾಹಿತ್ಯ, ಉದಾತ್ತ ತತ್ತ್ವಚಿಂತನೆ, ಲಘುವಾದ ಹರಟೆ ಕಡೆಗೆ ಪಾಪ್ ಸಂಗೀತ–ಎಲ್ಲಕ್ಕೂ ಅವರಲ್ಲಿ ಎಡೆಯಿತ್ತು' ಜಾತಿ ಜನಾಂಗ ವೃತ್ತಿಭೇದವಿಲ್ಲದೆ ಎಲ್ಲರ ಆದರಕ್ಕೂ

ಪಾತ್ರರಾಗಿದ್ದ ಅಜಾತಶತ್ರು ಅವರೆಂಬುದು ಅವರ ಬಗೆಗಿನ ಲೇಖನಗಳಿಂದ ಮತ್ತು ಪತ್ರಿಕಾ ವರದಿಗಳಿಂದ ರುಜುವಾತಾಗುತ್ತದೆ. ಗೌಡರ ಪತ್ರಗಳಲ್ಲಿ, ಅಭಿವ್ಯಕ್ತಿಗಳಲ್ಲಿ, ಶಾಸನಸಭೆಯ ಕೆಲವೊಂದು ಘಟನೆಗಳಲ್ಲಿ, ಗೌಡರ ಜೀವಿತ ಕಾಲದ ಪತ್ರಿಕಾವರದಿ ಗಳಲ್ಲಿ, ಸುದ್ದಿಗೋಷ್ಠಿಗಳಲ್ಲಿ, ಭಾಷಣಗಳಲ್ಲಿ, ಅವರು ತೀರಿಕೊಂಡಾಗ ಪತ್ರಿಕೆಗಳು ಸಲ್ಲಿಸಿದ ಅಶ್ರುತರ್ಪಣದಲ್ಲಿ, ಅಂತೆಯೇ ಅವರನ್ನು ಕುರಿತ ನೆನಪುಗಳಲ್ಲಿ ಗೌಡರ ಅಸಾಧಾರಣ ವ್ಯಕ್ತಿತ್ವ ಪಡಿಮೂಡಿದೆ. ಡಾ|| ಎಚ್. ಸಿ. ವಿಷ್ಣುಮೂರ್ತಿಯವರು ಸಂಪಾದಿಸಿರುವ ಗೋಪಾಲಗೌಡ ಶಾಂತವೇರಿ'[1] ಎಂಬ ಗ್ರಂಥ ಗೋಪಾಲಗೌಡರ ವ್ಯಕ್ತಿತ್ವವನ್ನು ಸಾಕಾರಗೊಳಿಸಿರುವ, ಅವರ ಬದುಕಿನ ಸಂದೇಶವನ್ನು ಮುಂದಿನ ಶತ ಮಾನಕ್ಕೂ ಕೊಂಡೊಯ್ಯುವ ಸಾಹಸ ಪ್ರಯತ್ನವಾಗಿದೆ.

ಗೋಪಾಲಗೌಡರು ಬರಿಯ ನಾಯಕರಲ್ಲ, ಅನೇಕ ರಾಜಕೀಯ ಸಾಂಸ್ಕೃತಿಕ ನಾಯಕರನ್ನು ಸೃಷ್ಟಿಸಿದ ಶಿಖರ ಶಿಲ್ಪಿಗಳು. ಅಂಥ ನಾಯಕರಲ್ಲಿ ಬಂಗಾರಪ್ಪ, ಜೆ. ಎಚ್. ಪಟೇಲ್, ಕಾಗೋಡು ತಿಮ್ಮಪ್ಪ, ಕೋಣಂದೂರು ಲಿಂಗಪ್ಪ, ವಿಷ್ಣುಮೂರ್ತಿ,ತೇಜಸ್ವಿ,ಉ.ರಾ. ಅನಂತಮೂರ್ತಿ-ಕೆಲವರು ಮಾತ್ರ.ಆಗಿನ ಕಾಲದಲ್ಲಿ ತರುಣರಿಗವರು ಚುಂಬಕ ಶಕ್ತಿಯಾಗಿದ್ದವರು. ಸನಿಹಕ್ಕೆ ಬಂದವರನ್ನು ತಮ್ಮ ತೆಕ್ಕೆಗೆ ತೆಗೆದುಕೊಂಡು, ತಮ್ಮ ಅಂತಃಕರಣದ ರೆಕ್ಕೆಯುಲ್ಲವಚಿಕೊಂಡು, ಧೈರ್ಯ ಸಾಹಸ ಜ್ಞಾನಗಳನ್ನು ತುಂಬಿ ಬೆಳೆಸುತ್ತಾರೆ. ಅವರ ಗೆಲವು ಸೋಲುಗಳಲ್ಲಿ ಹರ್ಷಿಸುತ್ತಾರೆ, ದುಃಖಿಸುತ್ತಾರೆ. ಪಟೇಲರೊಮ್ಮೆ ಸೋತಾಗ ಅವರ ಮನಸ್ಸಿಗಾದ ಆಘಾತ ಅವರ್ಣ ನೀಯ. ಈಗವರು ಬದುಕಿದ್ದರೆ ಪಟೇಲರ ಬಗೆಗಿನ ಮರುಕ ಮೇರೆ ಮೀರುತ್ತಿತ್ತೆಂದು ತೋರುತ್ತದೆ. ಕವಿ ಗೋಪಾಲಕೃಷ್ಣ ಅಡಿಗರು ಜನಸಂಘದಿಂದ ಲೋಕಸಭೆಗೆ ಅಭ್ಯರ್ಥಿ ಯಾಗಿ ಚುನಾವಣೆಗೆ ನಿಂತಾಗ ಅವರಿಗುಂಟಾದ ನೋವು ಅವರ ಹೃದಯದ ಮೇಲೆ ಭಾರಿ ಒತ್ತಡವನ್ನುಂಟುಮಾಡುತ್ತದೆ. 'ಸಾಹಿತಿಗಳು ಭಾರೀ ಅಪಾಯದ ಜನ. ಅಷ್ಟೇ ಹುಂಬತನವೂ ನಿಮ್ಮಲ್ಲಿದೆ. ಅದಕ್ಕೇ ನಿಮ್ಮನ್ನು ಕಂಡರೆ ನನಗೆ ಎಷ್ಟು ಪ್ರೀತಿಯೋ ಅಷ್ಟೇ ಭಯ....ಸಾಹಿತಿಗಳು ಅಪ್ರಾಮಾಣಿಕರು' [2]ಎಂಬ ಗೌಡರ ಮಾತುಗಳಿಂದ ಸಾಹಿತಿಗಳು ಪಾಠ ಕಲಿಯಬೇಕಾಗಿದೆ. ಆದರೆ ಗೌಡರು ಮಾನವ ಸ್ವಭಾವವನ್ನು ಸರಿ ಯಾಗಿ ಅರ್ಥಮಾಡಿಕೊಳ್ಳಲಾರದ ನಿಷ್ಕಪಟ ಮುಗ್ಧರೆಂದೇ ಹೇಳಬೇಕಾಗಿದೆ. ಹಲ ವರು ಅವರನ್ನು ಅವರ ಜೀವನ ಸಂದೇಶವನ್ನು ಮರೆತರೂ, ಕೋಣಂದೂರು ಲಿಂಗಪ್ಪ ಮತ್ತು ವಿಷ್ಣುಮೂರ್ತಿಯಂಥವರು ನಮ್ಮೊಡನಿರುವುದು ಸಮಾಧಾನದ ಸಂಗತಿ. ಗೌಡರು ತೀರಿಕೊಂಡ ನಂತರದ 'ಅವಸ್ಥೆ' ಕರುಣಾಜನಕವಾದದ್ದು. ವಿಷ್ಣುಮೂರ್ತಿಯವರಂತು ಮೈಸೂರು ನಗರದಲ್ಲಿ ಗೋಪಾಲಗೌಡರ ಹೆಸರಿನಲ್ಲಿ ಬೃಹತ್ತಾದ ಆಸ್ಪತ್ರೆಯನ್ನು ಸ್ಥಾಪಿಸಿ, ಅವರ ಹೆಸರನ್ನು ಚಿರಸ್ಥಾಯಿಯಾಗಿಸಿಕೊಳಿಸಿದ್ದಾರೆ

1 ಆನನ್ಯ ಪ್ರಕಾಶನ, ಹೊಸಮನೆ, ಶ್ರೀದೇವಿನಗರ, ವಿದ್ಯಾಗಿರಿ, ಧಾರವಾಡ-೫೮೦ ೦೦೪

2 ಜೀವಂತ ಜ್ವಾಲೆ, (ಸಂ) ವೆಂಕಪ್ಪಗೌಡ ಪು. ೮೪-೮೫ ಕೋಣಂದೂರು

ರಲ್ಲದೆ, ಪ್ರತಿನಿತ್ಯವೂ ಗೌಡರ ಬದುಕಿನ ಸಂದೇಶವನ್ನು ತಮ್ಮಲ್ಲಿಗೆ ಬರುವ ಸಾವಿರಾರು ಜನರಿಗೆ ತಲುಪಿಸುತ್ತಿದ್ದಾರೆ. ಇದಕ್ಕಾಗಿ ಅವರು ಮತ್ತು ಅವರ ಕುಟುಂಬ ಪಟ್ಟಿರುವ ಶ್ರಮ, ಮಾಡಿರುವ ತ್ಯಾಗ ಅಷ್ಟಿಷ್ಟಲ್ಲವೆಂಬುದು ಬಲ್ಲವರಿಗೆ ಮಾತ್ರ ಗೊತ್ತು ; ಕೃತಜ್ಞತೆಯೆ ಹೆಪ್ಪುಗಟ್ಟಿ ಮೂರ್ತತ್ವ ಪಡೆದಂತಿದೆ. ಈಗಂತು ಗೌಡರ ಸ್ಮಾರಕ ನಿಕೇತನವಂತಿರುವ ಗೋಪಾಲಗೌಡ ಶಾಂತವೇರಿ-ಅಂತರಂಗ, ಬಹಿರಂಗ ಗ್ರಂಥವನ್ನು ಪ್ರಕಟಿಸುವ ಮೂಲಕ ಅವರು, ಡಾ|| ಸಿದ್ಧಲಿಂಗ ಪಟ್ಟಣ ಶೆಟ್ಟರು ಮತ್ತು ಪ್ರೊ|| ಹೇಮಾ ಪಟ್ಟಣ ಶೆಟ್ಟರು ಕನ್ನಡಿಗರ ಅಭಿನಂದನೆಗೆ ಪಾತ್ರರಾಗಿದ್ದಾರೆ.

ಗೋಪಾಲಗೌಡರ ವಾಗ್ವೈಖರಿಯನ್ನು ಸಾಮಾನ್ಯರಿಂದ ಹಿಡಿದು ಅಸಾಮಾನ್ಯರವರೆಗೆ ಪ್ರತಿಯೊಬ್ಬರೂ ಮನಸಾರೆ ಮೆಚ್ಚುವುದುಂಟಷ್ಟೆ. ಅವರ ಭಾಷಣ ಮತ್ತು ಪತ್ರಗಳಿಂದ ಆಯ್ದ ಸುಭಾಷಿತ ಸದೃಶವಾದ ಕೆಲವು ವಾಕ್ಯಗಳನ್ನಿಲ್ಲಿ ಉದ್ಧರಿಸಲಾಗಿದೆ. ೧. ಹೆಚ್ಚು ಆಸ್ತಿಯ ಹಿಂದೆ ಶೋಷಣೆ ಅಪಹರಣ ಉಂಟೇ ಉಂಟು. ೨. ಕೃಷಿ ಮಾಡುವ ತನಕ ಆಸ್ತಿ ಕೃಷಿಕರದು. ಆನಂತರ ಅದು ಸರ್ಕಾರದ್ದು. ಅದು ಮಾರುವ ಅಥವಾ ಬಾಡಿಗೆಯ ಸ್ವತ್ತಾಗಬಾರದು. ಅವಶ್ಯಕತೆಗಿಂತ ಹೆಚ್ಚು ಆಸ್ತಿ ಇಟ್ಟುಕೊಳ್ಳುವುದು ಕಳ್ಳತನ. ೩. ಬಡತನದಿಂದ ದೇಶ ದುರ್ಬಲ. ೪. ದರೋಡೆಯನ್ನೇ ಧರ್ಮವನ್ನಾಗಿಸಿಕೊಂಡಿರುವ ವ್ಯವಸ್ಥೆ ಶೋಷಣೆಯ ತಳಹದಿಯ ಮೇಲಿದೆ. ದಳ್ಳಾಳಿಗಳ ದಯೆಯ ಮೇಲೆ ನಾವು ಬದುಕಬೇಕಾಗಿದೆ. ೫. ದೇವರ ಆಸ್ತಿಪಾಸ್ತಿ ಸಾರ್ವಜನಿಕರಿಗೆ ಸೇರಬೇಕು. ದೇವರ ಹೆಸರಲ್ಲಾಗಲಿ, ದೇವಸ್ಥಾನದ ಹೆಸರಲ್ಲಾಗಲಿ ಒಬ್ಬ ವ್ಯಕ್ತಿ ಅನುಭವಿಸತಕ್ಕದ್ದಲ್ಲ. ೬. ಅಧಿಕಾರದ ಸುತ್ತ ಇತಿಹಾಸ ಹುಟ್ಟುತ್ತದೆ; ಹಾಗೆ ಅಳಿಯುತ್ತದೆ. ಹಾಗಾಗಿ ನಾಳಿನ ತಲೆಮಾರು ಬರೀ ಸುಳ್ಳಿನ ಸರಮಾಲೆಯನ್ನೇ ನಂಬುವ ಸನ್ನಿವೇಶ ಬರಬಹುದು. ಗೌಡರಂಥವರು ಇಂದು ಮುಂದೆ ಶಾಸಕರಿದ್ದರೆ ಲೋಕಪಾಲ, ಲೋಕಾಯುಕ್ತ, ಲಂಚನಿರೋಧ ಇಲಾಖೆಗಳು ಬೇಕಾಗಿರಲಿಲ್ಲ. ಅವಿದ್ದೂ ಏನಾಗಿದೆ?

ಕ್ರಾಂತಿಯ ಗರ್ಭದಿಂದ ಮೂಡಿದ ಸಿಡಿಲುಮರಿ ; ಗಾಂಧಿಮಾರ್ಗದಲ್ಲಿ ಬೆಳೆದು, ಲೋಹಿಯಾ ಮಾರ್ಗದಲ್ಲಿ ಮುಕ್ತಿಯನ್ನು ಕಂಡುಕೊಂಡ ಕಟ್ಟಾ ಸಮಾಜವಾದಿ ಗೋಪಾಲಗೌಡರು. ಬಡತನದಲ್ಲಿ ಹುಟ್ಟಿ, ಬಡತನದಲ್ಲಿ ಬೆಳೆದು, ಬಡತನದಲ್ಲಿಯೇ ಕೊನೆಯುಸಿರೆಳೆದ ಅವರು ಅನೇಕ ನಾಯಕರನ್ನು ಸೃಷ್ಟಿಸಿ, ಇತಿಹಾಸ ನಿರ್ಮಾಪಕರಾದದ್ದು ರೋಮಾಂಚಕಾರಿ ಗಾಥೆ. ಗಗನದಿಂದ ಭೂಮಿಗಿಳಿತಂದು, ನಾಡಿನ ರಾಜಕೀಯ ಜೀವನದಲ್ಲಿ ಚೈತನ್ಯವನ್ನು ಹರಿಸಿ, ನೊಂದವರ ಬೆಂದವರ ಹೃದಯಕುಹರದ ಕತ್ತಲನ್ನು ಪರಿಹರಿಸಿ, ಮತ್ತೆ ಸ್ವಸ್ಥಾನವನ್ನು ಸೇರಿದ ಜ್ಯೋತಿಃಕಿರಣದ ಚೈತ್ರಯಾತ್ರೆ ಅವಿಸ್ಮರಣೀಯವಾದ ಕಥೆ.

ದೇಜಗೌ

ಬೆಟ್ಟದ ಚಾಮುಂಡಿ

ಪಿ. ಗೌರೀಶ
ಮನೆ ನಂ. ೧೬೯೬, ೧೧ ನೇ ಬೀದಿ
ಅಶೋಕಪುರಂ, ರಾಮಯ್ಯರ್ ರಸ್ತೆ
ಮೈಸೂರು ೫೭೦ ೦೦೪

ಮೈಸೂರಿನ ಯದುವಂಶದ ಕುಲದೇವತೆ ಚಾಮುಂಡೇಶ್ವರಿ. ಈ ವಂಶದ ದೊಡ್ಡದೇವರಾಜರು ಬೆಟ್ಟಕ್ಕೆ ಸಾವಿರ ಮೆಟ್ಟಿಲುಗಳನ್ನು ಮಾಡಿಸಿ, ಬೃಹತ್ ನಂದಿಯನ್ನು ನಿರ್ಮಿಸಿದರೆ, ದೇವಾಲಯದ ಗೋಪುರ ನಿರ್ಮಾಣದ ಕೀರ್ತಿಯು ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ಸಲ್ಲುತ್ತದೆ. ಕರ್ನಾಟಕ ಸಂಗೀತದ ವಾಗ್ಗೇಯಕಾರರೂ ಆಗಿದ್ದ ಬಹುಮುಖ ಪ್ರತಿಭೆಯ ಶ್ರೀ ಜಯಚಾಮರಾಜ ಒಡೆಯರ್ ಅವರು ಶ್ರೀ ಚಾಮುಂಡೇಶ್ವರಿಯ ಅಂಕಿತವನ್ನು ತಮ್ಮ ಹಲವು ಕೃತಿಗಳಲ್ಲಿ ಅಳವಡಿಸಿಕೊಂಡು ಸ್ತುತಿಸಿದ್ದಾರೆ. ಹೀಗೆ ಚಾಮುಂಡೇಶ್ವರಿಗೂ ಮೈಸೂರು ಅರಸು ಮನೆತನಕ್ಕೂ ನಿರಂತರ ಸಂಬಂಧ. ಮೈಸೂರಿನ ಜಗತ್ಪ್ರಸಿದ್ಧ ದಸರಾ ಪ್ರಾರಂಭವಾಗುವುದೇ ಚಾಮುಂಡೇಶ್ವರಿಗೆ ಅಗ್ರಪೂಜೆ ಸಲ್ಲಿಸುವ ಮೂಲಕ. ಅಂದು ರಾಜರು ಸಾಂಪ್ರದಾಯಿಕ ಪೂಜೆ ಸಲ್ಲಿಸಿದ ಅನಂತರ ನವರಾತ್ರಿ ಕಾರ್ಯಕ್ರಮ ಪ್ರಾರಂಭವಾಗುತ್ತಿತ್ತು. ಇಂದು ನಾಡಿನ ಗಣ್ಯರು ಸಾಹಿತಿ ಕಲಾವಿದರು ಚಾಮುಂಡಿಬೆಟ್ಟದಲ್ಲಿ ಜನತಾ ದಸರಾ ಕಾರ್ಯಕ್ರಮ ಉದ್ಘಾಟಿಸುವುದು ನಡೆದು ಬಂದಿದೆ. ಕನ್ನಡ ಸಾಹಿತ್ಯದ ಹಿರಿಯರಾಗಿ ಕನ್ನಡವನ್ನೇ ಪ್ರಾಣವಾಯುವನ್ನಾಗಿಸಿಕೊಂಡಿರುವ 'ನಾಡೋಜ' 'ಪಂಪ ಪ್ರಶಸ್ತಿ' ಪುರಸ್ಕೃತರೂ ಆಗಿರುವ ಪ್ರೊ|| ದೇಜಗೌ ಅವರು ಈ ಸಾರಿಯ ದಸರಾ ಕಾರ್ಯಕ್ರಮ ಉದ್ಘಾಟಿಸುತ್ತಿರುವುದು ನಾಡು ನುಡಿಗೆ ಹರ್ಷದ ಸಂಗತಿ. ಅದರಲ್ಲಿಯೂ ಕಳೆದ ಐದು ದಶಕಗಳಿಂದಲೂ 'ಪುಸ್ತಕ ಪ್ರಪಂಚ'ದ ನಾಡಿಮಿಡಿತವಾಗಿರುವ ದೇಜಗೌ, ಪುಸ್ತಕ ಪ್ರಪಂಚ ಐವತ್ತನೆಯ ಸಂಚಿಕೆಗೆ ಅಡಿ ಇಟ್ಟ ಸಂದರ್ಭದಲ್ಲಿಯೇ ಈ ಅಪೂರ್ವ ಸನ್ನಿವೇಶ ಒದಗಿ ಬಂದಿರುವುದು ಹೆಚ್ಚಿನ ಸಂತೋಷಕ್ಕೆ ಕಾರಣವಾಗಿದೆ. ಈ ಹಿನ್ನೆಲೆಯಲ್ಲಿ 'ಬೆಟ್ಟದ ಚಾಮುಂಡಿ' ಲೇಖನ ಈ ಸಂಚಿಕೆಯಲ್ಲಿ ಪ್ರಕಟವಾಗಿರುವುದು ಅರ್ಥಪೂರ್ಣವಾಗಿದೆ.

ಸಂ.

ಬೆಟ್ಟದ ಚಾಮುಂಡಿ ಮೈಸೂರಿನ ರಾಜಮನೆತನದ ಆರಾಧ್ಯ ದೈವ. ಮೈಸೂರು ಅರಸರ ಚರಿತ್ರೆಯಲ್ಲಿ ಚಾಮುಂಡಿ ಕ್ಷೇತ್ರದ ಚರಿತ್ರೆಯೂ ಹೆಣೆದುಕೊಂಡಿದೆ. ಹೊಯ್ಸಳರ ಕಾಲದಿಂದಲೇ ಈ ಕ್ಷೇತ್ರ ಪ್ರಸಿದ್ಧಿಗೆ ಬಂದಿದ್ದರೂ—ಚಾಮುಂಡಿಯ ಹೆಸರಿನಲ್ಲಿ ಖ್ಯಾತಿಗಳಿಸಿಕೊಂಡಿದ್ದು ಸುಮಾರು ಮುನ್ನೂರು—ನಾನೂರು ವರ್ಷಗಳ ಈಚೆಗೆ.

ಆದರೆ ಜನಪದ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಚಾಮುಂಡಿಯ ಬಗೆಗೆ ಜನಜನಿತವಾಗಿರುವ ಕತೆಗಳನ್ನು ಗಮನಿಸಿದಾಗ ಕರ್ನಾಟಕದ ಪ್ರಮುಖ ಆರಾಧನೆಯ ದೈವಗಳ ಸಾಲಿನಲ್ಲಿ ಚಾಮುಂಡಿಯ ಹೆಸರೂ ಸೇರುತ್ತದೆ. ತಿರುಪತಿಯ—ತಿಮ್ಮಪ್ಪ, ನಂಜನಗೂಡು ನಂಜುಂಡ, ಚುಂಚನಗಿರಿಯ ಭೈರವ, ಮೇಲುಕೋಟೆಯ



ಮಹಿಷಾಸುರ

ಚಲುವರಾಯ, ಸವದತ್ತಿ ಎಲ್ಲಮ್ಮ, ಮೈಲಾರ ಲಿಂಗ, ಮಾದೇಶ್ವರ ಗಿರಿಯ ಮಾದಪ್ಪ–ಇಂಥ ಪ್ರಸಿದ್ಧ ದೈವಗಳ ಸಾಲಿನಲ್ಲಿ ಚಾಮುಂಡಿಯೂ ಸೇರುತ್ತಾಳೆ.

ಮೈಸೂರು ನಗರಕ್ಕೂ ಚಾಮುಂಡಿ ಬೆಟ್ಟಕ್ಕೂ ಒಂದು ವಿಶಿಷ್ಟವಾದ ಸಂಬಂಧ ಇದೆ. ಮಹಿಷಾಸುರನನ್ನು ಸಂಹಾರ ಮಾಡಲು ಚಾಮುಂಡಿ ಮಹಿಷಾಸುರ ಮರ್ದಿನಿಯಾದಳು. ಈ ಮಹಿಷಾಸುರನಿಂದಲೇ 'ಮಹಿಷಪುರ' ಮೈಸೂರು ಆಗಿರ

ಬೇಕು ಎಂಬುದು ಜನಪದರ ನಂಬಿಕೆ ಪ್ರತಿಯೊಂದು ದೈವಕ್ಕೂ ಸಂಬಂಧಿಸಿದಂತೆ ಜನಪದ ಪುರಾಣಗಳು ಹುಟ್ಟಿಕೊಳ್ಳುತ್ತವೆ. ಚುಂಚನಗಿರಿಯ ಗಂಗಾಧರ ಅಲ್ಲಿ ನೆಲೆಸಿದ್ದ ಚುಂಚನೆಂಬ ರಾಕ್ಷಸನನ್ನು ಕೊಂದು ಬೆಟ್ಟದಲ್ಲಿ ನೆಲೆನಿಂತ. ಮೈಲಾರಲಿಂಗ ಮಣಿಮಲ್ಲಾಸುರನನ್ನು ಕೊಂದ. ಎಲ್ಲಮ್ಮ ಓರಂಗಲ್ಲು ಪ್ರತಾಪರುದ್ರನನ್ನು ಸಂಹರಿಸಿದ ಪ್ರಸಂಗ ಮುಂತಾದ ಕತೆಗಳನ್ನು ಕಾಣಬಹುದು. ಈ ರೀತಿಯ ಒಂದೊಂದು ಪ್ರದೇಶಕ್ಕೂ ಆರೋಪಿಸಲ್ಪಡುವ ಕಥೆಗಳು ಮುಖ್ಯವಲ್ಲದಿದ್ದರೂ ತಮ್ಮ ಮಹಿಮೆಯಿಂದ ಈ ದೈವಗಳು ಜನಪ್ರಿಯವಾಗಿವೆ.

ಮೈಸೂರು ನಗರದ ಚಾಮುಂಡಿಬೆಟ್ಟದ ನಡುವೆ ಇಂಥದೊಂದು ಕಥೆಯ ಕೊಂಡಿ ಇದ್ದರೂ ಮೈಸೂರು ಅರಸರ ಆರಾಧ್ಯ ದೈವವಾಗಿಯೇ ಚಾಮುಂಡಾಂಬಿಕೆಯ ಕೀರ್ತಿ ಹೆಚ್ಚಾಗಿ ಬೆಳೆಯಿತು. ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿಯೇ ಚಾಮುಂಡಿಯ ಮಮತೆಯ ತೊಟ್ಟಿಲು ಎಂಬಂತೆ ಮೈಸೂರು ನಗರವಿದೆ. ಸಮುದ್ರ ಮಟ್ಟದಿಂದ ೩೪೮೯ ಅಡಿ ಎತ್ತರದಲ್ಲಿರುವ ಈ ಬೆಟ್ಟ ತನ್ನ ನಿಸರ್ಗ ರಮಣೀಯತೆಯಿಂದ ದೂರದಿಂದಲೇ ಪ್ರವಾಸಿಗರನ್ನು ಆಕರ್ಷಿಸುತ್ತದೆ.

ಈ ಕ್ಷೇತ್ರವನ್ನು ನಮ್ಮ ಅತ್ಯಂತ ಪ್ರಾಚೀನ ಕ್ಷೇತ್ರಗಳಲ್ಲೊಂದಾಗಿ ಪುರಾಣಗಳಲ್ಲಿ ಗುರುತಿಸಲಾಗಿದೆ. ಹತ್ತನೆಯ ಶತಮಾನದಿಂದಲೇ ಪುಣ್ಯಕ್ಷೇತ್ರವೆನಿಸಿ, ಹೊಯ್ಸಳರ ಕಾಲದ ಶಾಸನಗಳಲ್ಲಿ ಇದರ ಉಲ್ಲೇಖ ಕಂಡುಬರುತ್ತದೆ. ಇಲ್ಲಿರುವ ಅತ್ಯಂತ ಪ್ರಾಚೀನವಾದ ಮಹಾಬಲೇಶ್ವರ ದೇವಾಲಯದಿಂದ ಚಾಮುಂಡಿ ಬೆಟ್ಟದ ಈ ತೀರ್ಥಕ್ಕೆ 'ಮಹಾಬಲಾದ್ರಿ' ಎಂಬ ಹೆಸರೂ ಇದೆ. ಇದೇ ಅತ್ಯಂತ ಪ್ರಾಚೀನವಾದ ಹೆಸರು. ಹೊಯ್ಸಳರ ವಿಷ್ಣುವರ್ಧನ ಕ್ರಿ.ಶ. ೧೧೨೮ ರಲ್ಲಿ ಈ ದೇವಾಲಯಕ್ಕೆ ದತ್ತಿಯನ್ನು ಬಿಟ್ಟಂತೆ ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ. ಕ್ರಿ. ಶ. ೧೬೨೦ ರಲ್ಲಿ ವಿಜಯನಗರ ವಂಶಸ್ಥರೂ ಇಲ್ಲಿಗೆ ದತ್ತಿಯನ್ನು ಬಿಟ್ಟಿರುವುದು ಕಂಡುಬರುತ್ತದೆ. ಆದರೂ ಈ ಮಹಾಬಲೇಶ್ವರ ದೇವಾಲಯವಾಗಲೀ ಇದರ ಸಮೀಪದ ನಾರಾಯಣಸ್ವಾಮಿ ದೇವಾಲಯವಾಗಲಿ ಜನಸಾಮಾನ್ಯರನ್ನು ಅಷ್ಟಾಗಿ ಗಮನ ಸೆಳೆದಂತಿಲ್ಲ.

ದ್ರಾವಿಡ ಶೈಲಿಯ ಚಾಮುಂಡೇಶ್ವರಿ ದೇವಾಲಯವೂ ಸಾಕಷ್ಟು ಪ್ರಾಚೀನವಾದುದು. ಯಾತ್ರಾರ್ಥಿಗಳು ಹೋಗಿ ಬರಲು ಕಷ್ಟಕರವಾಗಿದ್ದ ಈ ಬೆಟ್ಟಕ್ಕೆ ಅಂದಿನ ದೊಡ್ಡ ದೇವರಾಜರು ಸಾವಿರ ಮೆಟ್ಟಿಲುಗಳನ್ನು ಮಾಡಿಸಿದರು. ಬೆಟ್ಟದ ಏಳನೂರನೆಯ ಮೆಟ್ಟಿಲ ಬಳಿ ಇದ್ದ ದೊಡ್ಡ ಬಂಡೆಯೊಂದನ್ನು ಕಡೆಸಿ ಭವ್ಯವಾದ ನಂದಿಯನ್ನು ನಿರ್ಮಿಸಿದವರು. ಈ ವಿಗ್ರಹ ಹದಿನಾರು ಅಡಿ ಎತ್ತರವಾಗಿದ್ದು ಕಲಾತ್ಮಕತೆಯ ಮೆರಗು ಪಡೆದಿದೆ.

ಚಾಮುಂಡಿ ದೇವಾಲಯವನ್ನು ಜೀರ್ಣೋದ್ಧಾರ ಮಾಡಿ ಗೋಪುರ ನಿರ್ಮಿಸಿದ ಕೀರ್ತಿ ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ಸಲ್ಲುತ್ತದೆ. ಚಾಮುಂಡಿಯ ಬೆಟ್ಟ ಗುಡಿಗೋಪುರ, ಗುಹೆ, ಕೊಳಗಳಿಗೆ ಹೆಸರಾಗಿರುವಂತೆಯೇ ಪವಿತ್ರ ನೆಲೆ ಎಂಬುದಕ್ಕೆ ಐತಿಹ್ಯಗಳು ಇವೆ. ಹೆಜ್ಜೆ ಹೆಜ್ಜೆಗೂ ಕಲ್ಲು ಕಲ್ಲಿಗೂ ಜನಪದರು ಕಥೆಗಳನ್ನು ಕಟ್ಟಿದ್ದಾರೆ. ಇಲ್ಲಿನ 'ಶಾಂತಿ ಕಲ್ಲು' ಹಾಗ

ವರು ಈ ಬೆಟ್ಟಕ್ಕೆ ಬಂದಿದ್ದರೆಂಬುದನ್ನು ಸೂಚಿಸುತ್ತದೆ. ಕುಂತಿ ಇಲ್ಲಿ ಆಡಿದ 'ಅಣ್ಣೆ ಕಲ್ಲಾಟ'ದ ನೆನಪಿಗಾಗಿ ಈ ಕಲ್ಲು ಉಳಿದಿದೆ. ಇದು ಮಾರ್ಕಂಡೇಯ ಮುನಿ ತಪಸ್ಸು ಮಾಡಿದ ಸ್ಥಳವೂ ಹೌದು ಎಂಬ ಹಿನ್ನೆಲೆ ಇದೆ. ಈ ಬೆಟ್ಟದಲ್ಲಿ ಅಡಗಿದ್ದ ಮಹಿಷಾಸುರ ತನ್ನ ಕೋಣಗಳನ್ನು ಕೂಡುತ್ತಿದ್ದ "ಕೋಣನ ಕೊಟ್ಟಿಗೆ" ಇದ್ದ ಸ್ಥಳವನ್ನೂ ಬೆಟ್ಟದ ಉತ್ತರ ಭಾಗದಲ್ಲಿ ಮಹಿಷಾಸುರನನ್ನು ಚಾಮುಂಡಿ ಕೊಂದ ಸ್ಥಳವನ್ನೂ ಜನ ಗುರುತಿಸುತ್ತಾರೆ. ಅಲ್ಲೊಂದು ಬಂಡೆ ಅದರ ಮೇಲೆ ಕಪ್ಪು ಕಲೆಗಳು ; ಕೆಲವು ಗುಳಿಗಳು, ಇವು ಮಹಿಷಾಸುರನ ರಕ್ತದ ಕಲೆಗಳು. ಈ ಬಂಡೆ "ಕೋಣನ ಆರೆ" ಬಂಡೆ ಬಂಡೆಗೂ ಮರ ಮರಕ್ಕೂ ಇಂಥ ಕತೆಗಳು ಈ ಕ್ಷೇತ್ರದ ಮಹಿಮೆಯನ್ನು ಹೆಚ್ಚಿಸಿವೆ.

ಚಾಮುಂಡಿಯ ಕ್ಷೇತ್ರ ಮೈಸೂರಿನ ಸಮೀಪದಲ್ಲಿದ್ದರೂ ಅವಳ ಮಹಿಮೆ ನಾಡಿನ ಮೇಲೆಲ್ಲಾ ಹರಡಿದೆ. ಅವಳ ಕುರಿತ ಜನಪದ ಕಾವ್ಯಗಳು ಗಣನೀಯ ಪ್ರಮಾಣದಲ್ಲಿ ಲಭ್ಯವಾಗುತ್ತವೆ. ವೃತ್ತಿಗಾಯಕರಲ್ಲಿ ನೀಲಗಾರರು, ಕಂಸಾಳೆಯವರು, ಹೆಳವರು ; ತೆಲಗು ಜಂಗಮರು, ದೊಂಬಿದಾಸರು–(ದೊಂಬಿದಾಸರು) ತಂಬೂರಿಯವರು ಮುಂತಾದವರು ಸುದೀರ್ಘ ಕಾವ್ಯಗಳನ್ನೇ ಜನಪದ ಕಾವ್ಯಗಳ ಮೇಲೆ ಹಾಡುತ್ತಾರೆ. ಹೆಳವರ ಸಂಪ್ರದಾಯದಲ್ಲಿ ಚಾಮುಂಡಿಗೆ ಅಗ್ರಸ್ಥಾನ. 'ಚಾಮುಂಡಿ ಪುರಾಣ'ವೆಂದೇ ಅವರು ಸುವಿಸ್ತಾರವಾದ ಕಾವ್ಯವನ್ನು ಹಾಡುತ್ತಾರೆ.

ಈ ವೃತ್ತಿಗಾಯಕರ ದೀರ್ಘ ಕಾವ್ಯಗಳಿಗೆ ಹೋಲಿಸಲು ಸಾಧ್ಯವಾಗದಿದ್ದರೂ ತ್ರಿಪದಿಗಳಲ್ಲಿ ಹೆಚ್ಚಾಗಿ ಚಾಮುಂಡಿಯ ಕತೆಯನ್ನು ಹಾಡುತ್ತಾರೆ. ಚಾಮುಂಡಿಯನ್ನೇ ಕುರಿತು ಹಾಡುವ ಕಾವ್ಯಗಳು ಕೆಲವಾದರೆ, ಇತರ ಕಾವ್ಯಗಳಲ್ಲೂ ಚಾಮುಂಡಿ ಒಂದಲ್ಲ ಒಂದು ರೀತಿಯಲ್ಲ ಕಾಣಿಸಿಕೊಳ್ಳುತ್ತಾಳೆ. 'ಪಿರಿಯಾಪಟ್ಟಣದ ಕಾಳಗ' 'ಮಾಗಡಿ ಕೆಂಪೇಗೌಡನ ಕತೆ' 'ಚಾಮುಂಡಿ ಸಿರಿ ಚಾಮುಂಡಿ'–ಈ ಕಾವ್ಯಗಳಲ್ಲಿ ಚಾಮುಂಡಿ ಪಾತ್ರ ಕಾಣಿಸುತ್ತಿದೆ. ಮಂಟೇಸ್ವಾಮಿಯ ಕಾವ್ಯ, ಮಲೆಮದೇಶ್ವರ ಕಾವ್ಯಗಳಲ್ಲಿಯೂ ಪ್ರಾಸಂಗಿಕವಾಗಿ ಚಾಮುಂಡಾಂಬೆಯ ಪ್ರಸ್ತಾಪ ಬರುತ್ತದೆ.

ಚಾಮುಂಡಿ ಕುರಿತು ಹಾಡುವ ಕಲಾವಿದರು ದಕ್ಷಿಣ ಕರ್ನಾಟಕದ ಮೈಸೂರು, ಮಂಡ್ಯ, ಹಾಸನ, ತುಮಕೂರು, ಬೆಂಗಳೂರು–ಈ ಜಿಲ್ಲೆಗಳಲ್ಲಿ ಹೆಚ್ಚಾಗಿ ಕಂಡು ಬರುತ್ತಾರೆ.

ಚಾಮುಂಡಿಯನ್ನು ಕುರಿತ ಕಾವ್ಯವೆಂದರೆ ನಂಜನಗೂಡಿನ ನಂಜುಂಡೇಶ್ವರ. ಅವರಿಬ್ಬರ ಪ್ರಣಯ ಕಥೆಯೇ ಚಾಮುಂಡಿಯನ್ನು ಕುರಿತ ಪ್ರಧಾನ ಕಾವ್ಯವಾಗಿದೆ. ಎಲ್ಲ ಸಾಂಪ್ರದಾಯಿಕ ಹಾಡುಗಾರರೂ ತಮ್ಮ ಕಲ್ಪನಾ ಲಹರಿಗೆ ತಕ್ಕಂತೆ ಈ ಕತೆಯನ್ನು ಕಟ್ಟುತ್ತಾ, ವಿಸ್ತರಿಸುತ್ತಾ ಹಾಡುತ್ತಾರೆ.

'ಚಾಮುಂಡಿ–ನಂಜಯ್ಯರ' ಪ್ರಣಯ ಶಿವಕಥೆಯಿಂದಲೇ ಪ್ರೇರಿತವಾದುದು. ಪಾರ್ವತಿಯನ್ನು ಮದುವೆಯಾದ ಶಿವ ಅವಳ ಜೊತೆ 'ಪಂತ' ಹೂಡಿ ಗಂಗೆಯನ್ನು ತರುವುದನ್ನು ಕಾಣುತ್ತೇವೆ. ಧರ್ಮಪತ್ನಿಯ

ಮೇಲೆ ಉಪಪತ್ನಿ ತರುವ ವಾಡಿಕೆ ಜನಪದ ಕಾವ್ಯಗಳಲ್ಲಿ ಸಾಕಷ್ಟು ದೊರೆಯುತ್ತದೆ. ಇದೇ ಆಶಯದ ಮೇಲೆ ಹಲವು ಶೈವ ಕ್ಷೇತ್ರಗಳಿಗೂ ವೈಷ್ಣವ ಕ್ಷೇತ್ರಗಳಿಗೂ ಸಂಬಂಧಪಟ್ಟ ಕತೆಗಳು ಕನ್ನಡದಲ್ಲಿ ದೊರೆಯುತ್ತವೆ. ಚುಂಚನಗಿರಿಯ ಭೈರವ–ಮಾಳವ್ವ, ಶಿವಗಂಗೆಯ ಗಂಗಾಧರ–ಹೊನ್ನಾಲದೇವಿ, ಮೈಲಾರ ಕ್ಷೇತ್ರದ ಮೈಲಾರಲಿಂಗ–ಕೋಮಲೆಗೆ ಸಂಬಂಧಪಟ್ಟ ಕತೆಗಳು ಈ ಮಾದರಿಯವಾದರೆ, ಮೇಲುಕೋಟೆಯ ಚಲುವರಾಯ–ವರನಂದಿ, ಬಿಳಿಗಿರಿರಂಗಯ್ಯ–ಕುಸುಮಾಲೆ ಇವರ ಕಥೆಗಳು ಈ ಸರಿಯವೇ. ಆದರೆ ಈ ಕಥೆಗಳಿಗಿಂತ ಅತ್ಯಂತ ವ್ಯಾಪಕವಾಗಿ ಬೆಳೆದ ಕತೆಯೆಂದರೆ – 'ನಂಜಯ್ಯ–ಚಾಮುಂಡಿ' ಯರದು, ಹಾಡಿನ ರೂಪದಲ್ಲಿ, ಕಾವ್ಯದ ರೂಪದಲ್ಲಿ, ಐತಿಹ್ಯಗಳಲ್ಲಿ ಈ ಕಥೆ ದೊರೆಯುವುದನ್ನು ಗಮನಿಸಿದರೆ ಇದರ ಜನಪ್ರಿಯತೆ ವ್ಯಕ್ತವಾಗುತ್ತದೆ.


ಸ್ವಾರಸ್ಯಪೂರ್ಣವಾದ ಈ ಕತೆ ವೃತ್ತಿ ಗಾಯಕರಲ್ಲಿ ಹೆಚ್ಚಾಗಿ ಕಂಡುಬಂದರೆ, ಸಾಮಾನ್ಯ ಗಾಯಕರೂ ಕೂಡ ಚಾಮುಂಡಿಯ ಬಗ್ಗೆ ಹಾಡುವುದನ್ನು ಕಾಣುತ್ತೇವೆ. ಚಾಮುಂಡಿಯನ್ನು ನೆನೆದು ಹಂಬಲಿಸುವ ನಂಜಯ್ಯನ–ಮನಸ್ಸಿನ ಕಳವಳ, ಕಾತರವನ್ನೂ ಚಾಮುಂಡಿಯ ಪ್ರೇಮದ ತುಡಿತವನ್ನೂ ಈ ಕಾವ್ಯ ಮನೋಜ್ಞವಾಗಿ ಚಿತ್ರಿಸುತ್ತದೆ. ಅನೇಕ ಹಾಸ್ಯಪೂರ್ಣ ಸನ್ನಿವೇಶ ಘಳಿಗೆಯಲ್ಲಿ ಕಥೆ ಆಕರ್ಷಕವಾಗಿ ಬೆಳೆದುಕೊಂಡು ಹೋಗಿದೆ. ಸ್ತ್ರೀ ಗಾಯಕರು ಹಾಡುವ ಕಾವ್ಯವಂತೂ ವರ್ಣನೆಯಲ್ಲಿ, ಕಾವ್ಯದ–ರಸಾನುಭವ ಸೌಂದರ್ಯದಲ್ಲಿ ಶಿಷ್ಟ ಕಾವ್ಯಗಳಿಗೆ ಸರಿಸಾಟಿಯೆಂಬಂತೆ ಮೂಡಿದೆ.

ಚಾಮುಂಡಿಯ ಪ್ರಣಯ ಪ್ರಪಂಚವನ್ನು ಕುರಿತ ಈ ಜನಪ್ರಿಯ ಕಾವ್ಯದ ಕಥೆಗಳ ಜೊತೆಗೆ ಅವಳ ಶೌರ್ಯ ಸಾಹಸಗಳನ್ನು ಚಿತ್ರಿಸುವ ಕತೆಗಳೂ ಬರುತ್ತವೆ. ಚಾಮುಂಡಿಯ ತಂಗಿ ಹುತ್ತನಳ್ಳಿಯ ಉರಿಕಾತಿ ಅಕ್ಕ–ತಂಗಿ ಇವರಿಬ್ಬರೂ ವೀರ ಸಾಹಸದ ಕಿಡಿಗಳು. ಉಜ್ಜಯಿನಿ ಕಾಳಿಯ ಜೊತೆಯಲ್ಲಿ ಅವಳ ಹೋರಾಟ, ಮಹಿಷಾಸುರನ ಜೊತೆಯಲ್ಲಿ ಅವಳ ಕಾಳಗ, ಪಿರಿಯಾಪಟ್ಟಣದ ಉರಿಮಸಣಿಯನ್ನು ಅವಳು ಸೆರೆಹಿಡಿಯುವ ಸನ್ನಿವೇಶ, ಮಾಗಡಿ ಕೆಂಪೇಗೌಡನನ್ನು ಸೋಲಿಸಿದ ಪ್ರಸಂಗ ಬೇರೆ ಬೇರೆ ಸಂಪ್ರದಾಯದ ಹಾಡುಗಳಲ್ಲಿ ಕಂಡುಬರುತ್ತವೆ. ದೊಂಬಿದಾಸರು ಹಾಡುವ ಮಾಗಡಿ ಕೆಂಪೇಗೌಡನ ಕತೆಯಲ್ಲಿ ಚಾಮುಂಡಿಯ ಪ್ರವೇಶವಾಗುವುದು. ಕತೆಯ ಮುಕ್ತಾಯದಲ್ಲಿ ಮಾಗಡಿ ರಂಗಧಾಮ ಅಕ್ಕ ಚಾಮುಂಡಿಯ ನೆರವನ್ನು ಪಡೆದು ಕೆಂಪೇಗೌಡನನ್ನು ಸೋಲಿಸಬೇಕಾಯಿತೆಂದು ಈ ಸಾಂಪ್ರದಾಯಿಕ ಕಥೆ ತಿಳಿಸುತ್ತದೆ.

'ಪಿರಿಯಾಪಟ್ಟಣದ ಕಾಳಗ' ದಲ್ಲಿ ಮೊದಲ ಸುತ್ತಿನಲ್ಲಿ ಸೋಲನುಭವಿಸಿದ ದಳವಾಯಿ ಅನಂತರ ಚಾಮುಂಡಿಯನ್ನು ಆಶ್ರಯಿಸುತ್ತಾನೆ. ಚಾಮುಂಡಿ ಯುದ್ಧ ರಂಗವನ್ನು ಪ್ರವೇಶಿಸಿ ಪಿರಿಯಾಪಟ್ಟಣದ ಉರಿಮಸಣಿಯ ಶೌರ್ಯ–ಪ್ರತಾಪವನ್ನು ಕುಗ್ಗಿಸಿ ಉಪಾಯಾಂತರದಿಂದ ಅವಳನ್ನು ಸೆರೆಹಿಡಿದು ತಂದು ತಂಗಿ ಉರಿಕಾತಿಯಲ್ಲಿ ಸೆರೆಹಾಕುತ್ತಾಳೆ. ಅತ್ತ ದಳವಾಯಿ ವೀರ

ರಾಜನ ಮೇಲೆ ಜಯವನ್ನು ಸಾಧಿಸುತ್ತಾನೆ. ಮಹಿಷಾಸುರನೊಡನೆ ಚಾಮುಂಡಿ ಹೋರಾಡಿದ ಪ್ರಸಂಗ ಕಂಸಾಳೆಯವರ ಕಾವ್ಯದಲ್ಲೂ ಉಜ್ಜಯಿನಿಯ ಕಾಳಿಯ ಜೊತೆಯಲ್ಲಿ ಹೋರಾಡಿದ ಪ್ರಸಂಗ ನೀಲಗಾರರ ಕಾವ್ಯಗಳಲ್ಲೂ ಕಂಡುಬರುತ್ತದೆ.

ಮೈಸೂರು ಬೆಟ್ಟದ ಚಾಮುಂಡಿಯನ್ನು ಕುರಿತ ವೈವಿಧ್ಯಮಯ ಜನಪದ ಕಾವ್ಯಗಳನ್ನು ಗಮನಿಸಿದರೆ ಆ ದೇವಿಯ ಮಹಿಮೆ, ಜನಪ್ರಿಯತೆ, ಪ್ರಭಾವಗಳು ವೇದ್ಯವಾಗುತ್ತವೆ. ನಾನು ಸಂಪ್ರದಾಯದ ಹಾಡುಗಾರರಲ್ಲಿ ಪ್ರಖ್ಯಾತವಾಗಿರುವ ಇಷ್ಟು ವಿಪುಲ ಸಾಹಿತ್ಯ ಹೊಂದಿರುವ ಚಾಮುಂಡಿಯನ್ನು ದೇವಿಯಾಗಿ, ಪ್ರಣಯಿನಿಯಾಗಿ ಉಗ್ರಸ್ವರೂಪಿಣಿಯಾಗಿ ಹಲವು ಹತ್ತು ಭಂಗಿ ಭಾವಗಳಲ್ಲಿ ಜನಪದ ಸಾಹಿತ್ಯ ಬಿತ್ತರಿಸಿ ಚಿತ್ರಿಸಿದೆ.



ವಿಶ್ವವಿಖ್ಯಾತ ಮೈಸೂರು ದಸರಾ ಜಂಬೂಸವಾರಿಯ ಒಂದು ನೋಟ

———

ಕಾಶಿಯಲ್ಲಿ ಪ್ರೊ|| ಶಿವಾನಂದರ ಕನ್ನಡ ಕಾಯಕ

ಡಾ|| ಜಿ. ಎನ್. ಉಪಾಧ್ಯ
ಉಪನ್ಯಾಸಕ, ಕನ್ನಡ ವಿಭಾಗ
ಮುಂಬಯಿ ವಿಶ್ವವಿದ್ಯಾಲಯ
ವಿದ್ಯಾನಗರಿ, ಮುಂಬಯಿ ೪೦೦ ೦೯೮

ಕನ್ನಡದ ಕಂಪನ್ನು, ಅದರ ಸಾರಸತ್ವವನ್ನು ಕಾವೇರಿ, ಗೋದಾವರಿ, ನರ್ಮದಾವನ್ನು ಮೀರಿ ದೂರದ ಗಂಗಾನದಿಯವರೆಗೆ ಹರಿಸಿ; ಗಂಗೆಯ ಮಡಿಲಲ್ಲಿ ಜಲಸಮಾಧಿಯಾದ ಪ್ರೊ|| ವಿರಕ್ತಮಠ ಶಿವಾನಂದರ ಜೀವನ ಸಾಧನೆ ಶ್ಲಾಘನೀಯವಾದುದು. ಕನ್ನಡಕ್ಕಾಗಿ ನಿರಂತರವಾಗಿ ಸಮರ್ಪಣ ಮನೋಭಾವದಿಂದ ಸೇವೆ ಸಲ್ಲಿಸಿದ ಪ್ರೊ|| ವಿ. ಶಿವಾನಂದರ ಬದುಕು ಬರೆಹದ ಬಗೆಗಿನ ಕಿರು ಲೇಖನವಿದು.

"ಪಂಡಿತರೆಂದರೆ ಹೀಗಿರುತ್ತಾರೆ ಎಂದು ನಾನು ಸಂತೋಷದಿಂದ ಹೆಸರೆತ್ತಿ ಹೇಳಬಹುದಾದವರು ಸೇಡಿಯಾಪು" ಎಂದು ಡಾ|| ಶಿವರಾಮಕಾರಂತರು ಒಂದು ಸಂದರ್ಭದಲ್ಲಿ ಸೇಡಿಯಾಪು ಅವರನ್ನು ಕೊಂಡಾಡಿದ್ದುಂಟು. ಹಾಗೆಯೇ ತಾವಾಯಿತು; ತಮ್ಮ ಲೇಖನಿಯಾಯಿತು ಎಂದುಕೊಂಡು ನಿರಂತರವಾಗಿ ಕನ್ನಡ ನುಡಿಸೇವೆಯಲ್ಲಿ ಇದ್ದು ಬಿಟ್ಟ ಪ್ರೊ|| ವಿ. ಶಿವಾನಂದ ಅವರಿಗೂ ಡಾ|| ಕಾರಂತರ ಈ ಮಾತು ಅನ್ವಯವಾಗುತ್ತದೆ. ಕನ್ನಡ ಭಾಷೆ, ಸಾಹಿತ್ಯ, ಇತಿಹಾಸ ಸಂಸ್ಕೃತಿಗಳಿಗೆ ಅನುಪಮ ಸೇವೆ ಸಲ್ಲಿಸಿದ ಶ್ರೇಷ್ಠ ವಿದ್ವಾಂಸರಲ್ಲಿ ಪ್ರೊ|| ಶಿವಾನಂದ ಅವರೂ ಒಬ್ಬರು. ತಮ್ಮ ಅವಿರತ ಸಂಶೋಧನೆ ಮೂಲಕ ಹಳಗನ್ನಡ, ನಡುಗನ್ನಡ, ಆಧುನಿಕ ಭಾಷಾ ವಿಜ್ಞಾನ ಕ್ಷೇತ್ರಕ್ಕೆ ಮೌಲಿಕ ಕೊಡುಗೆಯನ್ನಿತ್ತು ಕೀರ್ತಿಗೆ ಅವರು ಭಾಜನರಾಗಿದ್ದಾರೆ.

ಕನ್ನಡ ನಾಡಿನಲ್ಲಿ ಹುಟ್ಟಿ ಬೆಳೆದು ಹೆಸರು ಮಾಡಿ ಕನ್ನಡದ ಕಂಪನ್ನು, ಅದರ ಸಾರಸತ್ವವನ್ನು ದೂರದ ಕಾಶಿಯಲ್ಲಿ ಬೆಳಗಿ ಬಾಳುವಂತೆ, ಮಾಡಿದ ಪ್ರೊ|| ವಿ. ಶಿವಾನಂದರ ಸಾಧನೆ ಶ್ಲಾಘನೀಯವಾದುದು. ಬನಾರಸ್ ಹಿಂದೂ ವಿಶ್ವವಿದ್ಯಾಲಯದ ಕನ್ನಡ ಪೀಠದ ಮೂಲಕ ಉತ್ತರ ಭಾರತದಲ್ಲಿ ಕನ್ನಡಕ್ಕೊಂದು ವಿಶಿಷ್ಟ ಸ್ಥಾನಮಾನವನ್ನು ಕಲ್ಪಿಸಿಕೊಡಲು ಅಹರ್ನಿಶಿ ದುಡಿದು ಮಧ್ಯದಲ್ಲೇ ನಮ್ಮನ್ನಗಲಿದ್ದು ಕನ್ನಡದ ದುರದೃಷ್ಟ.

ಇವರ ಅಕಾಲಿಕ ನಿಧನದಿಂದ ಕನ್ನಡಕ್ಕೆ ಅತೀವವಾದ ನಷ್ಟವಾಗಿದೆ.

ಆರಂಭದ ಜೀವನ :

ವಿರಕ್ತಮಠ ಶಿವಾನಂದ ಅವರು ೧೯೪೩ ರಲ್ಲಿ ಜನಿಸಿದರು. ತಂದೆ ಗುರುಸ್ವಾಮಯ್ಯ. ತಾಯಿ ರಾಚಮ್ಮ. ಬಿಜಾಪುರ ಜಿಲ್ಲೆಯ ಕನಮಡಿ ಅವರ ಹುಟ್ಟೂರು. ಶಿವಾನಂದರ ಅಣ್ಣ ಶಾಂತಲಿಂಗಸ್ವಾಮಿಗಳು ಜೇವರ್ಗಿಯ ಷಣ್ಮುಖ ಶಿವಯೋಗಿ ಮಠದ ಅಧಿಕಾರಿಗಳಾದ್ದರಿಂದ ಚಿಕ್ಕಂದಿನಲ್ಲಿಯೇ ಬಾಲಕ ಶಿವಾನಂದ ಜೇವರ್ಗಿಗೆ ಬಂದು, ಹೆಚ್ಚಿನ ಶಿಕ್ಷಣಕ್ಕಾಗಿ ಕಲಬುರ್ಗಿಗೆ ಹೋಗಬೇಕಾಯಿತು. ಅಲ್ಲಿಯ ಶರಣ ಬಸವೇಶ್ವರ ಕಾಲೇಜಿನಲ್ಲಿ ಮುಂದಿನ ಓದು ಸಾಗಿತು. ಆರಂಭದಿಂದಲೂ ಓದಿನಲ್ಲಿ ಆಸಕ್ತಿ ಮೈಗೂಡಿಸಿಕೊಂಡಿದ್ದು ೧೯೬೫ ರಲ್ಲಿ ಎಂ.ಎ. ಪದವಿಯನ್ನು ಪಡೆದುಕೊಂಡರು. ಎಂ. ಎ. ಆದ ಮೇಲೆ ಧಾರವಾಡಕ್ಕೆ ಬಂದು ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದಲ್ಲಿ ಸಹಾಯಕ ಸಂಶೋಧಕರೆಂದು ಕೆಲವು ವರ್ಷ ಕೆಲಸ ಮಾಡಿದರು. ಆರ್. ಸಿ ಹಿರೇಮಠರಂತಹ ಹಿರಿಯ ವಿದ್ವಾಂಸರ ಮಾರ್ಗದರ್ಶನವೂ ಅವರಿಗೆ ಲಭ್ಯವಾಯಿತು. 'ಪ್ರೌಢದೇವರಾಯನ ಕಾಲದ ಕನ್ನಡ ಸಾಹಿತ್ಯ' ಎಂಬ ಮಹಾ ಪ್ರಬಂಧವನ್ನು ಬರೆದು ಕರ್ನಾಟಕ ವಿಶ್ವವಿದ್ಯಾಲಯದಿಂದ ಪಿಎಚ್‌ಡಿ ಪದವಿಯನ್ನು ಪಡೆದುಕೊಂಡರು. ಅನಂತರ ಹುಬ್ಬಳ್ಳಿಯ ಕಾಡಸಿದ್ಧೇಶ್ವರ ಕಾಲೇಜಿನಲ್ಲಿ ಉಪನ್ಯಾಸಕರಾಗಿ ನೇಮಕಗೊಂಡರು. ಅಲ್ಲಿಂದ ಮುಂದೆ ಗದಗಕ್ಕೆ ಹೋಗಿ ಅಲ್ಲಿಯ ಜಗದ್ಗುರು ತೋಂಟದಾರ್ಯ ಕಾಲೇಜಿನಲ್ಲಿ ಕೆಲವು ವರ್ಷ ಕೆಲಸ ಮಾಡಿದರು. ೧೯೭೪ ರಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ವಿಭಾಗದಲ್ಲಿ ಉಪನ್ಯಾಸಕರಾಗಿ ನಿಯುಕ್ತಿಗೊಂಡರು. ಇಲ್ಲಿಗೇ ಅವರ ಸಂಚಾರ ಪ್ರವೃತ್ತಿ ನಿಲ್ಲದೆ ; ಅದು ಉತ್ತರದ ಕಡೆಗೆ ಮುಖ ಮಾಡಿತು. ೧೯೮೮ ರಲ್ಲಿ ಬನಾರಸ್ ಹಿಂದೂ ವಿಶ್ವವಿದ್ಯಾಲಯದ ಕನ್ನಡ ಪೀಠದಲ್ಲಿ ಪ್ರಾಧ್ಯಾಪಕರಾಗಿ ನೇಮಕಗೊಂಡರು. ಅಲ್ಲಿ ಹದಿನಾಲ್ಕು ವರ್ಷ ಕನ್ನಡವನ್ನು ಕಟ್ಟುವ ಕೈಂಕರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಆ ಮೂಲಕ ಕನ್ನಡಕ್ಕೊಂದು ಉನ್ನತ ಸ್ಥಾನಮಾನವನ್ನು ತಂದುಕೊಟ್ಟರೆಂಬುದು ಅಭಿಮಾನದ ಸಂಗತಿ.

ಶಿವಾನಂದರ ಸಾಹಿತ್ಯ ಕೃಷಿ :

ಶಿವಾನಂದರ ಸಾಹಿತ್ಯ ಕೃಷಿಯನ್ನು ಮುಖ್ಯವಾಗಿ ನಾಲ್ಕು ನೆಲೆಗಳಲ್ಲಿ ವಿಂಗಡಿಸಿ ನೋಡಬಹುದಾಗಿದೆ: ಸಾಹಿತ್ಯ ಸಂಶೋಧನೆ ಭಾಷಾ ವಿಜ್ಞಾನ, ಸಾಂಸ್ಕೃತಿಕ ವಿಮರ್ಶೆ ಹಾಗೂ ಶಾಸನ ಮತ್ತಿತರ ಅಪೂರ್ವ ಕೃತಿಗಳ ಸಂಪಾದನೆ. ನಾಮವಿಜ್ಞಾನ ಸಮಾಜೋಭಾಷಿಕ ಅಧ್ಯಯನ ಮೊದಲಾದ ಅನ್ಯ ಶಿಸ್ತುಗಳನ್ನು ಕನ್ನಡದ ಸಂದರ್ಭದಲ್ಲಿಟ್ಟು ಅವರು ಕೈಗೊಂಡ ಸಂಶೋಧನೆ ಹಾಗೂ ಆ ಮೂಲಕ ಬೆಳಕು ಕಂಡ ಕೃತಿಗಳಿಗೆ ವಿಶೇಷ ಮಹತ್ವ ಇದೆ.

ಭಾಷಾ ವಿಜ್ಞಾನಿಯಾಗಿ :

ಶಿವಾನಂದ ಅವರು ಹತ್ತಾರು ಭಾಷೆಗಳ ಮೇಲೆ ಹಿಡಿತ ಸಾಧಿಸಿದ್ದರು. ನಿಜವಾದ ಒಬ್ಬ ಒಳ್ಳೆಯ ಭಾಷಾ ವಿಜ್ಞಾನಿಗೆ ಇರಬೇಕಾದ ಅರ್ಹತೆಯೂ ಇದೇ ಆಗಿದೆ. ಕನ್ನಡವಂತೂ ಮನೆಮಾತಾಯಿತು. ಗುಲ್ಬರ್ಗಾ ಪ್ರಾಂತದವರಾದ್ದರಿಂದ

ಹಿಂದಿಯೂ ಅವರಿಗೆ ಸಹಜವಾಗಿಯೇ ಬಂದಿತು. ಆರಂಭದಿಂದಲೇ ಜಾಗತಿಕ ಭಾಷೆಯಾದ ಇಂಗ್ಲೀಷನ್ನು ಕರಗತ ಮಾಡಿಕೊಂಡಿದ್ದರು. ಭಾಷೆಯನ್ನು ಕಲಿಯುವುದೆಂದರೆ ಇವರಿಗೆ ಎಲ್ಲಿಲ್ಲದ ಖುಷಿ. ಎರಡನೆಯ ಪಿಎಚ್‌ಡಿ ಮಾಡಲು ಮದ್ರಾಸಿಗೆ ಹೋದರು. ಅಲ್ಲಿ ತಮಿಳು ಹಾಗೂ ಮಲೆಯಾಳಂ ಭಾಷೆಗಳನ್ನು ಅಧ್ಯಯನ ಮಾಡುವ ಅವಕಾಶ ದೊರೆಯಿತು. ಕಾಶಿಯಲ್ಲಿ ಮರಾಠಿ, ನೇಪಾಳಿ, ಬಂಗಾಳಿ ಮತ್ತು ಸಂಸ್ಕೃತ ಭಾಷೆಯನ್ನು ಅಭ್ಯಾಸ ಮಾಡಿದರು. ಭಾರತದ ಉದ್ದಗಲಕ್ಕೂ ಸಾಕಷ್ಟು ಓಡಾಡಿದರು. ದ್ರಾವಿಡಭಾಷೆಗಳನ್ನು ತೌಲನಿಕವಾಗಿ ಅಧ್ಯಯನಮಾಡಿದರು. ೧೯೮೦ ರಲ್ಲಿ ಅವರು ಪೋಸ್ಟ್ ಡಾಕ್ಟರಲ್ ಸ್ಕಾಲರ್ ಶಿಪ್ ಪಡೆದು ಮದ್ರಾಸ್ ವಿಶ್ವವಿದ್ಯಾಲಯದಿಂದ ಮತ್ತೊಂದು ಪಿಎಚ್‌ಡಿಯನ್ನು ಗಳಿಕೊಂಡರು. ಆಧುನಿಕ ಭಾಷಾ ವಿಜ್ಞಾನದ ಬೆಳಕಿನಲ್ಲಿ 'ಒಕ್ಕಲುತನ ವೃತ್ತಿ ಪದಗಳು ಒಂದು ಭಾಷಿಕ ಅಧ್ಯಯನ'ಎಂಬ ವಿಷಯದ ಮೇಲೆ ವಿಶೇಷ ಅಧ್ಯಯನಮಾಡಿ ಕೃತಿ ರಚಿಸಿದರು.

ಶಿವಾನಂದರ ಹೆಸರು ಕೇಳಿದ ಒಡನೆ ಸಾಹಿತ್ಯದ ವಿದ್ಯಾರ್ಥಿಗಳಿಗೆ ನೆನಪಾಗುವುದು ಅವರು ಬರೆದ 'ದರ್ಪಣ ವಿಕಾಸ' ಹಾಗೂ 'ಶಬ್ದಮಣಿದರ್ಪಣದಲ್ಲಿ ಗ್ರಾಂಥಿಕ ವ್ಯಾವಹಾರಿಕ ಶೈಲಿಗಳು' ಎಂಬ ಕೃತಿಗಳು. ಕೇಶಿರಾಜ ಬರೆದ 'ಶಬ್ದಮಣಿ ದರ್ಪಣ' ಕೃತಿಯನ್ನು ಆಧುನಿಕ ಭಾಷಾವಿಜ್ಞಾನದ ಬೆಳಕಿನಲ್ಲಿ ಅರ್ಥೈಸಿದ ಹಿರಿಮೆಗೂ ಅವರು ಪಾತ್ರರಾಗಿದ್ದಾರೆ.

"ಕೇಶಿರಾಜನ ಶಬ್ದಮಣಿದರ್ಪಣ, ಕೇವ ಹಳಗನ್ನಡದ ಒಂದು ವ್ಯಾಕರಣ ಗ್ರಂ ವೆಂದು ಹೇಳುವುದು ಹಳೆಯಮಾತಾದೀತು. ಅದು ಆಧುನಿಕ ಭಾಷಾವಿಜ್ಞಾನದ ವಿವಿ ಆಯಾಮಗಳಿಗೆಲ್ಲ ಕಚ್ಚಾ ಸಾಮಗ್ರಿಯ ನ್ನೊದಗಿಸಲು ಸಮರ್ಥವಾದ ಅಷ್ಟೇ ಅ ಉತ್ಪಾದ್ಯಗೊಳಿಸಬಲ್ಲ ಕನ್ನಡದ ಬೃಹತ್ ಪ್ರಮಾಣದ ಒಂದು ಕಾರ್ಖಾನೆಯಂತಿದೆ. ಕೇಶಿರಾಜನು ಓರ್ವ ರಾಚನಿಕ ಭಾಷಾ ವಿಜ್ಞಾನಿ, ವಸ್ತುನಿಷ್ಠ ವರ್ಣನಾತ್ಮ ವೈಯಾಕರಣಿ, ತೌಲನಿಕ ವ್ಯಾಕರಣಗಳ ತಲೆಮಣಿ, ಇತಿಹಾಸಿಕ ಅರ್ಥವಿಜ್ಞಾನಗ ಸವ್ಯಸಾಚಿ. ಅಷ್ಟೇ ಅಲ್ಲದೆ ಸಮಾಜೋ ಭಾಷಾವಿಜ್ಞಾನದಲ್ಲಿನ ಭಾಷಿಕ ನಡೆವಳಿ ಶೈಲಿಗಳ ವೈದೃಶ್ಯಾತ್ಮಕ ಅಧ್ಯಯನ ಆಧಾರಸ್ತಂಭ ಎಂದು ಹೇಳುವುದ ಅಭಿಮಾನದ ಮಾತಾದರೂ ಅದು ಅತ್ಯುಕ್ತಿ ಯಲ್ಲವೆನ್ನಿಸುತ್ತದೆ." (ಶಬ್ದಮಣಿದರ್ಪಣ ದಲ್ಲಿ ಗ್ರಾಂಥಿಕ-ವ್ಯಾವಹಾರಿಕ ಶೈಲಿಗಳು— ಒಂದು ಸಮಾಜೋಭಾಷಿಕ ವಿಶ್ಲೇಷಣೆ— ಈ ಕೃತಿಯ ಮುನ್ನುಡಿಯಲ್ಲಿ) ಎಂಬುದನ್ನು ಕಂಡುಕೊಂಡು ಕೇಶಿರಾಜನಲ್ಲಿ ಅಪ್ಪ ಹಿಂದಿನಿಂದಲೂ ಸಾಮಾಜಿಕ ಭಾಷಾ ವಿಶ್ಲೇಷಣೆಗೆ ನೆರವಾಗಬಲ್ಲ ಅಪೂರ್ವ ಸಾಮಗ್ರಿ ಸಲೆಸಿಂತಾಗ ಸಹ ಆ ಸಾಮಗ್ರಿ ಯನ್ನು ಬಳಸಿಕೊಂಡು ಆಧುನಿಕ ಭಾಷಾ ವಿಜ್ಞಾನದ ಬೆಳವಣಿಗೆಯ ಒಂದು ಸೂತ್ರ ಅಧ್ಯಾಯವನ್ನು ತೆರೆದು ತೋರಿಸುವ ಪ್ರಯತ್ನವನ್ನು ನಮ್ಮ ವಿದ್ವಾಂಸರಾರೂ ಮಾಡದೇ ಹೋದಾಗ ಡಾ. ಪಿ. ಶಿವಾ ನಂದರು ಈ ಕೆಲಸಕ್ಕೆ ಮುಂದಾಗಿ ಕನ್ನ ಇರುವತನಕ ಕೇಶಿರಾಜ ನಮಗೆ ಏಕೆ

…ಕೀಗೆ? ಪ್ರಸ್ತುತವಾಗುತ್ತಾನೆ. ನಿಜ …ವಾಗಿಯೂ ಶಬ್ದಮಣಿದರ್ಪಣದಲ್ಲಿ ಏನಿದೆ? …ಅದರ ಅಧ್ಯಯನದ ವಿವಿಧ ಸಾಧ್ಯತೆಗಳೇ …ನೆಂಬುದನ್ನು ಮೊದಲಬಾರಿಗೆ ಕನ್ನಡಿಗರಿಗೆ …ತೋರಿಸಿಕೊಟ್ಟ ಶ್ರೇಯಸ್ಸು ಅವರಿಗೆ …ಸಲ್ಲುತ್ತದೆ.

…ದರ್ಪಣಕ್ಕೆ ಹೊಸ ದಿಕ್ಕು–ದೃಷ್ಟಿ

ಕೇಶಿರಾಜ ದರ್ಪಣದ ಸೂತ್ರ ಮತ್ತು …ಪ್ರಯೋಗಗಳಿಗೆ ಹಳಗನ್ನಡ ಕವಿಗಳ ಕಾವ್ಯ …ಭಾಷೆಯನ್ನು ಪ್ರಮಾಣವಾಗಿಟ್ಟುಕೊಂಡಿ…ದ್ದರೂ, ಈ ಕವಿ ಪ್ರಯೋಗಗಳಲ್ಲೇ …ಉಂಟಾಗಿರುವ ಕೆಲವು ಭಾಷಾ ವ್ಯತ್ಯಾಸ…ಗಳೂ ತತ್ಕಾಲದ ಭಾಷಾ ನಿರ್ವಹಣೆಯಲ್ಲಿ …ಕಂಡುಬರುತ್ತಿದ್ದ ಗ್ರಾಂಥಿಕ ಮತ್ತು …ವ್ಯಾವಹಾರಿಕ ಶೈಲಿ ಭೇದಗಳನ್ನು ಸೂಚಿಸು…ತ್ತವೆ. ಇಲ್ಲಿ ಗಮನಿಸಬೇಕಾದ ಸಂಗತಿ…ಯೆಂದರೆ, ಕಾಲಕ್ರಮಿತ ಭಾಷಾ ವ್ಯತ್ಯಾಸ…ಗಳನ್ನು ಕೇವಲ ಒಂದು ಐತಿಹಾಸಿಕ …ಅಧ್ಯಯನ ದೃಷ್ಟಿಯಿಂದ ಮಾತ್ರ ಪರಿಶೀಲಿ…ಸದೇ ತತ್ಕಾಲದ ಸಾಮಾಜಿಕ ಭಾಷಾ …ನಡವಳಿಕೆಗಳ ಹಿನ್ನೆಲೆಯಲ್ಲಿ ಸಹ ಎಂದರೆ …ಸಾಮಾಜಿಕ ಭಾಷಾ ವಿಜ್ಞಾನದ ರಚನೆಯ …ಮೇಲಿನಿಂದಲೂ ಸಹ ತಿಳಿಯುವುದು …ಅಗತ್ಯವೆನ್ನಿಸುತ್ತದೆ ಎಂಬುದನ್ನು …ಸೋದಾಹರಣವಾಗಿ ಈ ಕೃತಿಯಲ್ಲಿ ಅವರು …ತೋರಿಸಿಕೊಟ್ಟಿದ್ದಾರೆ. (ಅದೇ ಪುಟ ೪೧) …ಪಂಡಿತ ವರ್ಗದ ಪ್ರೌಢ ಇಲ್ಲವೆ ಮಾರ್ಗ, …ಜನಪದ ಸಮುದಾಯದ ದೇಸಿ ಪ್ರಯುಕ್ತ …ಶೈಲಿ ಇವೆರಡೂ ಶೈಲಿಗಳು ಏಕಕಾಲಿಕವಾಗಿ …ಸಮಾಜೋಭಾಷಿಕ ಸ್ತರಗಳಲ್ಲಿ ಅಂದಿನ …ಕಾವ್ಯಭಾಷೆಯಲ್ಲಿ ಕಾರ್ಯನಿರ್ವಹಿಸಿರುವು…ದನ್ನು ಕಾವ್ಯಾಧಾರಿತ ಪ್ರಯೋಗಗಳ ಮೇಲಿಂದ ರಚಿಸಲಾದ ಕೇಶಿರಾಜನ ಶಬ್ದಮಣಿದರ್ಪಣದಲ್ಲಿ ಒಂದು ವ್ಯಾಕರಣಾತ್ಮಕ ವ್ಯವಸ್ಥೆಯಲ್ಲಿ ಕಾಣುತ್ತೇವೆಂಬುದನ್ನು ಅವರು ಖಚಿತವಾಗಿ ಸ್ಪಷ್ಟವಾಗಿ ತೋರಿಸಿಕೊಟ್ಟಿದ್ದಾರೆ.

'ಶಬ್ದಮಣಿದರ್ಪಣ ವಿಕಾಸ' ವೂ ಕನ್ನಡದ ಪ್ರಮುಖ ಕೃತಿಗಳಲ್ಲಿ ಒಂದು. ಅವರ ವಿದ್ವತ್ತು, ಪರಿಶ್ರಮ, ಸ್ವತಂತ್ರ ಧೀಶಕ್ತಿ, ಪ್ರತಿಭೆ ಈ ಕೃತಿಗಳಲ್ಲಿ ಢಾಳಾಗಿ ಕಾಣಿಸುತ್ತವೆ. ಶಬ್ದಮಣಿದರ್ಪಣ ಕನ್ನಡ ಭಾಷೆಯ ಇತಿಹಾಸದ ಒಂದು ಮಹತ್ವದ ಘಟ್ಟ ಎಂಬ ದೃಢನಂಬಿಕೆ ಅವರದಾಗಿತ್ತು. ಈ ಕೃತಿಯನ್ನು ಸಾಮಾನ್ಯನಿಗೂ ರುಚಿಸುವಂತೆ ಮಾಡುವುದರ ಜೊತೆ ಜೊತೆಗೆ ದ್ರಾವಿಡ ಹಾಗೂ ಆರ್ಯನ್ ಭಾಷೆಗಳನ್ನು ತುಲನಾತ್ಮಕವಾಗಿಯೂ ಗಮನಿಸಿರುವುದು ಅವರ ಪ್ರತಿಭೆಗೆ ಸಾಕ್ಷಿಯಾಗಿದೆ. ಉದಾಹರಣೆ ಕನ್ನಡ ಲಿಂಗ ವ್ಯವಸ್ಥೆಯನ್ನು ಕುರಿತು ಮಾತನಾಡುತ್ತಾ "ಅಶಾಸ್ತ್ರೀಯವೂ, ಅಸಂಬದ್ಧವೂ ಆದ ಆರ್ಯ ಭಾಷೆಯ ಲಿಂಗದ ಕಲ್ಪನೆ ದ್ರಾವಿಡರಲ್ಲಿರದೆ ಸಶಾಸ್ತ್ರೀಯವೂ, ಸುಸಂಬದ್ಧವೂ ಆದ ವೈಚಾರಿಕ ವಿಭಜನೆ ಇಲ್ಲಿದೆ (ದರ್ಪಣ ವಿಕಾಸ. ಪುಟ ೧೦೯) ಎಂಬುದನ್ನು ಎತ್ತಿಹಿಡಿದಿದ್ದಾರಲ್ಲದೇ ಆರ್ಯನ್ ಭಾಷೆಗಳಲ್ಲಿನ ವಿರೋಧಾಭಾಸಗಳನ್ನು ಎತ್ತಿ ತೋರಿಸಿದ್ದಾರೆ." ಇದು ಹತ್ತಾರು ಭಾಷೆಗಳನ್ನು ಬಲ್ಲ ಶಿವಾನಂದರಂಥ ವಿದ್ವಾಂಸರಿಗೆ ಮಾತ್ರ ಸಾಧ್ಯ. ಇದೇ ರೀತಿ ಅವರು ದ್ರಾವಿಡಭಾಷೆಗಳ ಸಂಬಂಧ ಹಾಗೂ ಅವುಗಳ ಮಧ್ಯದ ಸಂಬಂಧಾಂತರಗಳನ್ನು

ಸೋದಾಹರಣವಾಗಿ ಈ ಕೃತಿಯಲ್ಲಿ ಚರ್ಚಿಸಿದ್ದಾರೆ.

ಉತ್ತರಭಾರತದಲ್ಲಿ ಚಾಲ್ತಿಯಲ್ಲಿರುವ ಅನೇಕ ದ್ರಾವಿಡಭಾಷೆಗಳಿಗೂ ಕನ್ನಡಕ್ಕೂ ನಿಕಟಸಂಬಂಧವಿದೆ ಎಂಬುದನ್ನು ಅವರು ತಮ್ಮ ಸಂಶೋಧನ ಲೇಖನಗಳಲ್ಲಿ ತೋರಿಸಿ ಕೊಟ್ಟಿದ್ದಾರೆ.

ಸಾಹಿತ್ಯ ಸಂಶೋಧನೆ

ಸಂಶೋಧನೆಯೆಂಬುದು ನಿರಂತರವಾದ ಪ್ರಕ್ರಿಯೆ ಎಂಬ ಮಾತನ್ನು ಶಿವಾನಂದರು ಚೆನ್ನಾಗಿ ಮೈಗೂಡಿಸಿಕೊಂಡಿದ್ದರು. ಆ ಕಾರ್ಯವನ್ನು ಅವರು ಬದುಕಿನುದ್ದಕ್ಕೂ ನಡೆಸಿಕೊಂಡು ಬಂದಿದ್ದರು. 'ಪ್ರೌಢ ದೇವರಾಯನ ಕಾಲದ ಕನ್ನಡ ಸಾಹಿತ್ಯ' ಅವರ ಸಂಶೋಧನ ಮಹಾಪ್ರಬಂಧ. ವಿಜಯನಗರದ ದೊರೆ ಪ್ರೌಢದೇವರಾಯನ ಕಾಲದಲ್ಲಿ ಆಗಿಹೋದ; ನಮ್ಮ ಸಾಹಿತ್ಯ ಚರಿತ್ರೆಯಲ್ಲಿ ದಾಖಲಾಗಿರದ ಅನೇಕ ಕವಿಗಳು ಹಾಗೂ ಅವರ ಸಾಧನೆಯನ್ನು ಪ್ರಸ್ತುತ ಮಹಾಪ್ರಬಂಧದಲ್ಲಿ ಕನ್ನಡಿಗರಿಗೆ ಪರಿಚಯಿಸಿದ್ದಾರೆ. ಪ್ರೌಢದೇವರಾಯನ ಕಾಲದ ಕನ್ನಡ ಸಾಹಿತ್ಯ ಹೆಚ್ಚು ವೈವಿಧ್ಯ ಪೂರ್ಣವಾಗಿದೆ. ಕಾಲಕ್ಕೆ ತಕ್ಕಂತೆ ದೇಸೀ ನಿಷ್ಠತೆ, ಷಟ್ಪದಿ ಪ್ರಾಚುರ್ಯ, ಜನಪ್ರಿಯತೆಗಳ ದೃಷ್ಟಿಯಿಂದ ಹಳಗನ್ನಡವು ಮಾರ್ಗದಿಂದ ಭಿನ್ನವಾದ ಕೆಲವು ವಿಶಿಷ್ಟ ಲಕ್ಷಣಗಳನ್ನು ತನ್ನೊಡನೆ ಮೈಗೂಡಿಸಿ ಕೊಂಡಿದೆ. ವಸ್ತು, ಉದ್ದೇಶ ಶೈಲಿಯಲ್ಲಿ ತನ್ನದೇ ಆದ ಹೊಸಕಾಂತಿಯನ್ನು ಪಡೆದು ಸತ್ವಗುಣಸಂಪನ್ನವಾಗಿದೆ (ಅದೇ ಪುಟ ೫೦೩) ಎಂಬ ಸ್ಪಷ್ಟ ನಿರ್ಧಾರಕ್ಕೆ ಬಂದಿದ್ದಾರಲ್ಲದೇ ಕಾಲಗರ್ಭದ ನಿಕ್ಷೇಪಗಳನ್ನು ಅಗೆದುತೆಗೆದು ಅನೇಕ ಕವಿಗಳನ್ನು ಅವರ ಸಾಧನೆಯನ್ನು ಆಧಾರಸಮೇತವಾಗಿ ತಿಳಿಸಿ ಕೊಟ್ಟಿದ್ದಾರೆ. ಇದೇ ಬಗೆಯ ಕಾರ್ಯವನ್ನು ಅವರು ತಮ್ಮ ಮತ್ತೊಂದು ಕೃತಿ ಶತಮಾನದ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿಯೂ ಮಾಡಿದ್ದಾರೆ.

ಗ್ರಂಥ ಸಂಪಾದನೆ ಹಾಗೂ ಇನ್ನಿತರ ದಾಖಲೆಗಳ ಸಂಗ್ರಹ

ಗ್ರಂಥ ಸಂಪಾದನ ಕ್ಷೇತ್ರದಲ್ಲಿಯೂ ಅವರು ವಿಶೇಷ ಆಸಕ್ತಿಯನ್ನು ಬೆಳೆಸಿ ಕೊಂಡಿದ್ದರು. ಯು.ಜಿ.ಸಿ.ಯ ಕೆಲವು ಮೇಜರ್ ರಿಸರ್ಚ್ ಪ್ರಾಜೆಕ್ಟ್‌ಗಳಲ್ಲಿಯೂ ಕೆಲಸ ಮಾಡಿದರು.

ಹತ್ತೊಂಭತ್ತನೆಯ ಶತಮಾನದ ಆದಿಯಲ್ಲಿ ಪ್ರಕಟವಾದ ಅನೇಕ ಅಪೂರ್ವಕೃತಿಗಳನ್ನು ಸಂಪಾದಿಸಿ ಪ್ರಕಟಿಸಲು ಮುಂದಾದರು. ಈ ಯೋಜನೆಯ ಫಲವೇ ವಿಲಿಯಮ್ ಕ್ಯಾರಿ ಬರೆದು ಪ್ರಕಟಿಸಿದ ಮೊತ್ತಮೊದಲ ಮುದ್ರಿತ ಆಧುನಿಕ ಕನ್ನಡ ವ್ಯಾಕರಣ ಕೃತಿಯನ್ನು ೧೮೭೭ ಮತ್ತೆ ಕನ್ನಡಿಗರು ನೋಡುವಂತೆ ಮಾಡಿದ ಶ್ರೇಯಸ್ಸು ಅವರಿಗೆ ಸಲ್ಲುತ್ತದೆ. ಈ ಕೃತಿ ಬನಾರಸ್ ಹಿಂದೂ ವಿಶ್ವವಿದ್ಯಾಲಯದ ಕನ್ನಡ ಪೀಠದ ಮೂಲಕ ಪ್ರಕಟಣೆಕಂಡು ಕನ್ನಡಿಗರ ಕೈಸೇರಿದುದು ಅವರ ಸಾಹಸ ಪ್ರವೃತ್ತಿಗೆ ಉತ್ತಮ ನಿದರ್ಶನ.

ಶಿವಾನಂದರ ಪ್ರಮುಖ ಕೃತಿಗಳಲ್ಲಿ 'ಉತ್ತರಭಾರತದ ಕನ್ನಡ ಹಸ್ತಪ್ರತಿಗಳು ಇತರ ದಾಖಲೆಗಳ ಸೂಚಿ'ಯೂ ಒಂದು. ಉತ್ತರಭಾರತದ ವಿವಿಧ ಗ್ರಂಥಭಂಡಾರ

ಗಳಲ್ಲಿರುವ ಕನ್ನಡ ಹಸ್ತಪತ್ರಿಗಳ ವಿವರ ಈ ಕೃತಿಯಲ್ಲಿ ದಾಖಲಾಗಿದೆ. ಈ ಕೃತಿಯನ್ನು ನೋಡಿದರೆ ಇಷ್ಟು ದೊಡ್ಡ ಪ್ರಮಾಣದಲ್ಲಿ ಕನ್ನಡಕ್ಕೆ ಸಂಬಂಧಿಸಿದ ಅಪೂರ್ವ ದಾಖಲೆಗಳು ಉತ್ತರದಲ್ಲಿರುವುದು ಗೊತ್ತಾಗುತ್ತದೆ. ಡಾ|| ಶಿವಾನಂದರು ಈ ಕೃತಿಯಲ್ಲಿ ದಾಖಲಿಸಿದ ಈ ಹಸ್ತಪ್ರತಿಗಳನ್ನು ಕನ್ನಡ ವಿಶ್ವವಿದ್ಯಾಲಯ ಹಂಪಿ ಅಥವಾ ಕನ್ನಡ ಸಾಹಿತ್ಯ ಪರಿಷತ್ತು ಒಂದೆಡೆ ಸಂಗ್ರಹಿಸುವ ಕೆಲಸವನ್ನು ತುರ್ತಾಗಿ ಮಾಡಬೇಕಾದ ಅಗತ್ಯವಿದೆ. ಕಾಶಿ (ಯು. ಪಿ) ಆರ್‍ಹಾ (ಬಿಹಾರ) ಮತ್ತು ಕಲ್ಕತ್ತ (ಪಶ್ಚಿಮ ಬಂಗಾಳ) ಮೊದಲಾದ ಕಡೆ ದೊರಕಿದ ಈ ಹಸ್ತಪ್ರತಿಗಳು, ದಾಖಲೆಗಳು ಕರ್ನಾಟಕ ಇತಿಹಾಸ ಮತ್ತು ಸಾಂಸ್ಕೃತಿಕ ಅಧ್ಯಯನದ ದೃಷ್ಟಿಯಿಂದ ಮಹತ್ವದ್ದಾಗಿವೆ. ಕನ್ನಡ ಸಂಶೋಧಕರಿಗೆ ಇವು ಉತ್ತಮ ಆಕರಗಳೂ ಆಗಬಲ್ಲವು. ಶಾಸನಗಳನ್ನು ಸಂಪಾದಿಸಿ ಪ್ರಕಟಿಸುವುದರಲ್ಲಿಯೂ ವಿಶೇಷ ಆಸ್ಥೆ ವಹಿಸಿದರು. ಕಲಬುರ್ಗಿ ಜಿಲ್ಲೆಯ ಶಿಲಾಶಾಸನಗಳು ಎಂಬ ಕಿರುಕೃತಿಯನ್ನು ೧೯೭೭ ರಲ್ಲೇ ಸಂಪಾದಿಸಿ ಪ್ರಕಟಿಸಿದ ಅವರು ೧೯೯೩ರಲ್ಲಿ ಹೈದರಾಬಾದು ಕರ್ನಾಟಕದ ಕನ್ನಡ ಶಿಲಾಶಾಸನಗಳು ಎಂಬ ಗ್ರಂಥವನ್ನು ಬನಾರಸ್ ವಿ.ವಿ. ಕನ್ನಡ ಪೀಠದ ಪ್ರಕಟಣೆಯಾಗಿ ಹೊರ ತಂದರು. ನಮ್ಮ ಅಕ್ಕ ಪಕ್ಕದ ವಿಶ್ವವಿದ್ಯಾಲಯದ ಕನ್ನಡ ವಿಭಾಗಗಳು ಮಾಡಬೇಕಾದ ಕಾರ್ಯವನ್ನು ಶಿವಾನಂದ ಅವರು ಬನಾರಸ್‌ನಲ್ಲಿದ್ದು ಮಾಡಿದರು ಎಂಬುದು ಉಲ್ಲೇಖಾರ್ಹ. ಕನ್ನಡದ ಬಗೆಗೆ ಕೆಲಸ ಮಾಡಬೇಕೆಂಬವರಿಗೆ ಕಾಶಿಯೇನು? ಚಿಕಾಗೋಯೇನು? ಎಂಬ ನಿಶ್ಚಿತ ಧೋರಣೆ ಅವರದಾಗಿತ್ತು. ಕಾಶಿಯಲ್ಲಿ ನೇಪಾಳಿ ಭಾಷೆಯನ್ನು ಕಲಿತದ್ದು ಮಾತ್ರವಲ್ಲ. ಬಸವಣ್ಣನವರ ವಚನಗಳನ್ನು ನೇಪಾಲಿಗೆ ಅನುವಾದಿಸಿ ಪ್ರಕಟಣೆಗೆ ಕಳುಹಿಸಿದ್ದರಂತೆ! ಶಿವಾನಂದರ ಕಾರ್ಯ ತತ್ಪರತೆ, ಆಸಕ್ತಿ, ಅವಿರತ ಪ್ರಯತ್ನ ಯಾರನ್ನೂ ದಂಗುಬಡಿಸುವಂಥದ್ದು. ಸಂಶೋಧನೆಗಾಗಿ ತಮ್ಮ ಬದುಕನ್ನೇ ಮುಡುಪಾಗಿಟ್ಟ ಇಂಥ ಪ್ರಾಂಜಲ ಮನಸ್ಸಿನ ವಿದ್ವಾಂಸರನ್ನು ನಾವಿಂದು ಕಾಣಲು ಸಾಧ್ಯವಿಲ್ಲ.

ಶಿವಾನಂದರು ಮಿತಭಾಷಿಗಳಾಗಿ, ಸರಳ ಸಜ್ಜನಿಕೆಗೆ ಹೆಸರಾಗಿದ್ದರು. "ಸರಳಜೀವನ ಗಹನಚಿಂತನ" ಎಂಬುದನ್ನು ಅವರು ಮೈಗೂಡಿಸಿಕೊಂಡಿದ್ದರು. ಕನ್ನಡ ಹಾಗೂ ಇಂಗ್ಲಿಷ್ ಭಾಷೆಯಲ್ಲಿ ನಲವತ್ತಕ್ಕಿಂತಲೂ ಅಧಿಕ ಕೃತಿಗಳನ್ನು ಪ್ರಕಟಿಸಿದ್ದರು. ಅವರು ಬರೆದ ನೂರಾರು ವಿದ್ವತ್ಪೂರ್ಣ ಸಂಶೋಧನ ಲೇಖನಗಳು ನಾಡಿನಾದ್ಯಂತ ವಿವಿಧ ಅಭಿನಂದನ ಗ್ರಂಥಗಳಲ್ಲಿ, ನಿಯತ ಕಾಲಿಕಗಳಲ್ಲಿ ಅಚ್ಚಾಗಿವೆ. ಅವೆಲ್ಲವನ್ನು ಸಂಗ್ರಹಿಸಿ ಒಂದೆಡೆಯಲ್ಲಿ ಪ್ರಕಟಿಸಬೇಕಾದುದು ಅಗತ್ಯದ ಸಂಗತಿ. ಕನ್ನಡ ಭಾಷೆ ಸಾಹಿತ್ಯ ಸಂಸ್ಕೃತಿಯ ದೃಷ್ಟಿಯಿಂದ ಈ ಲೇಖನಗಳಿಗೆ ವಿಶೇಷ ಸ್ಥಾನಮಾನವಿದೆ. ಉದಾಹರಣೆಗೆ ಡಾ|| ಎಂ. ಎಂ. ಕಲಬುರ್ಗಿ ಅವರ ಅಭಿನಂದನ ಗ್ರಂಥ 'ಮಹಾಮಾರ್ಗ' ದಲ್ಲಿ ಶಿವಾನಂದರು ಬರೆದ 'ವ್ಯಾಕರಣ' ಎಂಬ ಲೇಖನ ಕನ್ನಡ ವ್ಯಾಕರಣ ಪರಂಪರೆಯ ಮೌಲ್ಯಮಾಪನವೂ ಆಗಿದೆ. ಹಾಗೆಯೇ ಪ್ರಬುದ್ಧ ಕರ್ನಾಟಕದಲ್ಲಿ

ಪ್ರಕಟಣೆಕಂಡ 'ಲಕ್ಕಣದಂಡೇಶನ ಶಿವತತ್ವ ಚಿಂತಾಮಣಿಯಲ್ಲಿ ಸ್ಥಳನಾಮಗಳ ವಿಚಾರ' ಎಂಬ ಲೇಖನವೂ ಕನ್ನಡನಾಮ ವಿಜ್ಞಾನ ಕ್ಷೇತ್ರಕ್ಕೆ ಉಲ್ಲೇಖನೀಯ ಕೊಡುಗೆಯಾಗಿದೆ.

ಶಿವಾನಂದರು ಏನೆಲ್ಲ ಕನಸುಗಳನ್ನು ಕಟ್ಟಿಕೊಂಡು ದೂರದ ಕಾಶಿಯಲ್ಲಿ ಕನ್ನಡ ಕಾಯಕವನ್ನು ಸಮರ್ಥವಾಗಿ ನಡೆಸಿಕೊಂಡು ಬಂದಿದ್ದರು. ಅನೇಕ ಹೊಸ ಯೋಜನೆಗಳನ್ನು ಕೈಗೆತ್ತಿಕೊಂಡಿದ್ದರು. ಈ ನಡುವೆಯೇ ಸಾವು ಸಿಡಿಲಂತೆ ಬಂದೆರಗಿತ್ತು. ೨೦ ಆಗಸ್ಟ್ ೧೯೬೯ರಂದು ನಿಧನರಾದಾಗ ಅವರಿಗೆ ೫೮ ವರ್ಷ ಮಾತ್ರವಾಗಿತ್ತು. ಈ ನುಡಿಸೇವಕನ ನಿಧನದಿಂದ ಕನ್ನಡ ನಿಜವಾಗಿಯೂ ಬಡವಾಗಿದೆ. ಇಂಥ ವಿದ್ವಾಂಸರೊಬ್ಬರು ಹುಟ್ಟಿಬಂದುದು ಕನ್ನಡದ, ಕನ್ನಡಿಗರ ಸೌಭಾಗ್ಯವೆಂದೇ ಹೇಳಬೇಕು.



ಕುರಿಯು ತೋಳವನ್ನು ನಂಬುವುದಕ್ಕಿಂತ, ತೋಳದ ಹತ್ತಿರ ಹೋಗದಂತೆ ಎಚ್ಚರವಾಗಿರುವುದೇ ಲೇಸು.

—ಗಾಂಧೀಜಿ

ಕರ್ನಾಟಕದ ಉದ್ಯಮಗಳು

ಡಾ|| ಸ. ಜ. ನಾಗಲೋಟಿಮಠ

ವೈದ್ಯಕೀಯ ನಿರ್ದೇಶಕರು

ಬ. ವಿ. ವ. ಸಂಘ

ಬಾಗಲಕೋಟೆ ೫೮೭೧೦೧

ಹೃದಯದಲ್ಲಿ ಕಳಕಳಿಯೂ ಮಾತಿನಲ್ಲಿ ನಲ್ಮೆಯೂ ಇದ್ದಾಗ ಎಂಥ ಸಂದಿಗ್ಧ ಸಂದರ್ಭವೂ ಸೃಜನಶೀಲತೆಗೆ ಹೇತುವಾಗುವುದು.

ಸುಮಾರು ೧೫ ವರ್ಷಗಳ ಹಿಂದೆ ನಾನು ಸುರತ್ ಶಹರಿಗೆ ಹೋಗಿದ್ದೆ. ಅಲ್ಲಿ ಒಂದು ದೊಡ್ಡ ಮೆಡಿಕಲ್ ಕಾಲೇಜು ಇದೆ. ಕಾಲೇಜಿನಲ್ಲಿ ಹಲವಾರು ಸ್ನಾತಕೋತ್ತರ ಭಾಗಗಳನ್ನು ಪ್ರಾರಂಭಿಸಿದ್ದರು. ಅವನ್ನು ಪರೀಕ್ಷಿಸಿ ಅವುಗಳಿಗೆ ಮೆಡಿಕಲ್ ಕೌನ್ಸಿಲ್ಲಿನ ಮಾನ್ಯತೆ ಕೊಡಬಹುದೇ ಹೇಗೆ? ಎಂಬುದನ್ನು ನಿರ್ಧರಿಸಲು ನಿಯಮಿಸಲ್ಪಟ್ಟಿದ್ದೆ. ಹೋಗಿ ಇಡೀ ಕಾಲೇಜು, ಆಸ್ಪತ್ರೆಗಳನ್ನು ಸಂದರ್ಶಿಸಿದೆ. ವರದಿ ಒಪ್ಪಿಸಲು ಟಿಪ್ಪಣಿಗಳನ್ನು ಮಾಡಿಕೊಂಡೆ. ಅಲ್ಲಿಯ ಪ್ರಾಧ್ಯಾಪಕ ಮಿತ್ರರನ್ನು ಕಂಡು ಚರ್ಚಿಸಿದೆ. ಎಲ್ಲವೂ ಸಾಂಗವಾಗಿ ನಡೆಯಿತು.

ಅಂದು ರಾತ್ರಿ ಕಾಲೇಜಿನ ಅಧ್ಯಾಪಕರೆಲ್ಲ ಸೇರಿ ಒಂದು ಔತಣಕೂಟ ಏರ್ಪಡಿಸಿದರು. ಸಾಮಾನ್ಯವಾಗಿ ನಡೆಯುವ ಸ್ವಾಗತ, ಪರಿಚಯಗಳು ನಡೆದವು ನನ್ನ ಪರಿಚಯ ಮಾಡಿಕೊಡುವುದು ಕಾಲೇಜಿನ ಪ್ರಿನ್ಸಿಪಾಲರಿಗೆ ಬಂದಿತು. ನನ್ನ ಬಗ್ಗೆ ಒಳ್ಳೆಯ ಅಭಿಪ್ರಾಯ ವ್ಯಕ್ತಪಡಿಸಿದರು. ನನ್ನ ಸಂಶೋಧನೆ ಮ್ಯೂಸಿಯಮ್‌ಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಮಾತಾಡುತ್ತ ಅವರು ಹೇಳಿದರು "ಇಂದಿನ ನಮ್ಮ ಅತಿಥಿಗಳು ಕರ್ನಾಟಕ ರಾಜ್ಯದವರು. ಕರ್ನಾಟಕ ರಾಜ್ಯ ಅತಿ ಹೆಚ್ಚು ಮೆಡಿಕಲ್ ಕಾಲೇಜುಗಳನ್ನು ಪಡೆದಿದೆ. ಆ ರಾಜ್ಯದಲ್ಲಿ ಮೆಡಿಕಲ್ ಕಾಲೇಜುಗಳು ನಾಯಿಕೊಡೆಗಳಂತೆ ಹುಟ್ಟುತ್ತವೆ. ಅದು ಯಾಕೆ ಹಾಗೆ ಎಂಬುದು ತಿಳಿಯುತ್ತಿಲ್ಲ.... ಎಂದರು. ನನಗಂತೂ ದೊಡ್ಡ ಅಪಮಾನ ಆದಂತೆ ಆಯಿತು. ಯಾಕೆ ಆ ಮನುಷ್ಯ ಹಾಗೆ ಮಾತನಾಡಿದ ಎಂಬುದು ತಿಳಿಯಲಿಲ್ಲ. ಬೇರೆ ರಾಜ್ಯದವರು ನಮ್ಮ ರಾಜ್ಯದ ಮೇಲೆ ಇಂಥ ಅಸೂಯೆ ಮಾಡುತ್ತಾರೆಂಬುದು ತಿಳಿದಿತ್ತು. ಆದರೆ ನನ್ನೆದುರಿಗೆ ಈ ರೀತಿ ಮಾತಾಡಬಹುದೆಂದು ಯೋಚಿಸಿರಲಿಲ್ಲ. ಆ ಪ್ರಶ್ನೆಗೆ ನಾನು

ಉತ್ತರಿಸಲೇ ಬೇಕಾಗಿತ್ತು. ಇಲ್ಲದೇ ಹೋದರೆ ಎಲ್ಲ ಜನರಿಗೂ ಕರ್ನಾಟಕ ವಿನಾಕಾರಣ ಮೆಡಿಕಲ್ ಕಾಲೇಜು ಪ್ರಾರಂಭಿಸುತ್ತದೆ ಎಂದಾಗುವುದು. ಉತ್ತರ ಹುಡುಕಲು ಚಡಪಡಿಸುತ್ತಿದ್ದೆ. ಆದರೆ ಏನು ಹೇಳುವುದು? ನಮ್ಮ ರಾಜ್ಯದಲ್ಲಿ ಜಾಸ್ತಿ ಮೆಡಿಕಲ್ ಕಾಲೇಜುಗಳು ಇರುವುದು ಸತ್ಯ. ಕೆಲವು ಹುಟ್ಟಿದ ಕಾರಣಗಳೇ ಬೇರೆ. ತಲೆಯಲ್ಲಿ ಈ ಗೊಂದಲ ನಡೆಯುತ್ತಿರುವಾಗಲೇ ಅತಿಥಿಗಳ ಉಪನ್ಯಾಸ ಎಂದು ಕರೆದುಬಿಟ್ಟರು.

ಧ್ವನಿವರ್ಧಕದ ಮುಂದೆ ನಿಂತು ಕಾಲೇಜಿನ ಜನರಿಗೆಲ್ಲ ಧನ್ಯವಾದ ಹೇಳಿದೆ. ಅವರ ಕಾಲೇಜಿನಲ್ಲಿಯ ವಿಶೇಷತೆಗಳನ್ನು ಹಾಗೂ ಕೊರತೆಗಳನ್ನು ವಿವರಿಸಿದೆ. ಮಾತನಾಡುತ್ತಲೇ ನಿಂತಾಗ ಮನಸ್ಸಿನಲ್ಲಿ ಒಂದು ವಿಚಾರ ಹೊಳೆಯಿತು. ತತ್‌ಕ್ಷಣ ನನ್ನನ್ನು ಪರಿಚಯಿಸಿದ ವ್ಯಕ್ತಿಯನ್ನು ಕೇಳಿದೆ "ಸುರತ್ ಶಹರ ಯಾವ ಕಾರಣಕ್ಕೆ ಸುಪ್ರಸಿದ್ಧವಿದೆ?" ಅವರು ಹೆಮ್ಮೆಯಿಂದ ಹೇಳಿದರು "ಓಹೋ ಬಟ್ಟೆಗಳಿಗಾಗಿ ಸುರತ್ ತುಂಬ ಹೆಸರುವಾಸಿ" ಅಂದರು.

ನಾನು—"ಎಷ್ಟು ಬಟ್ಟೆಯ ಗಿರಣಿ ನಿಮ್ಮಲ್ಲಿ ಇವೆ?"

ಅವರು—"ಅಂದಾಜಿನಂತೆ ೨೬೦ಕ್ಕಿಂತಾ ಜಾಸ್ತಿ"

ನಾನು—"ಅದು ಯಾಕೆ?"

ಅವರು "ಅವು ಬಟ್ಟೆ ಉತ್ಪಾದಿಸುವಲ್ಲಿ ನಿಪುಣರು"

"ನಮ್ಮ ಜನರ ಚಾಣಾಕ್ಷತೆ ಉಳಿದವರಿಗಿಲ್ಲ. ಕಾರಣವೇ ಇಲ್ಲಿ ಬಟ್ಟೆ ಗಿರಣಿಗಳು ಇಷ್ಟು ಸಮೃದ್ಧವಾಗಿ ಬೆಳೆಯುವುವು."

ಅವರ ಮಾತುಗಳನ್ನು ಕೇಳಿ ನನಗಂತೂ ಬಹಳ ಸಂತೋಷವಾಯಿತು. ಅವರನ್ನು ನೋಡಿ ಒಂದು ಮುಗುಳು ನಗೆಯನ್ನು ಕೊಟ್ಟೆ. ಅನಂತರ ಮರಳಿ ನನ್ನ ಭಾಷಣ ಪ್ರಾರಂಭಿಸಿದೆ. "ಸ್ನೇಹಿತರೆ ನನಗಂತೂ ನಿಮ್ಮ ಶಹರದ ಮೇಲೆ ಅಭಿಮಾನ. ನಿಮ್ಮ ಜನರು ಬಟ್ಟೆ ಉತ್ಪಾದಿಸುವಲ್ಲಿ ಇಷ್ಟು ಮುಂದು ವರಿದಿದ್ದಾರೆಂದರೆ ಇಲ್ಲಿಯ ಬಟ್ಟೆ ಬೇರೆ ದೇಶಗಳಿಗೆ ರಫ್ತು ಆಗುತ್ತದೆ. ಭಾರತ ತಾನು ಏನು ಮಾಡಲು ಶಕ್ಯ ಎಂಬುದನ್ನು ಜಗತ್ತಿಗೆ ತೋರಿಸಿದೆ" ಎಂದೆ. ಅವರೆಲ್ಲ ಖುಷಿಪಟ್ಟರು.

ಅನಂತರ ಪ್ರಾರಂಭಿಸಿದೆ. "ನಾನು ನಿಮ್ಮ ಪ್ರಿನ್ಸಿಪಾಲರನ್ನು ಮೆಚ್ಚಿದ್ದೇನೆ. ಅವರು ನನ್ನ ಬಗ್ಗೆ ಬಹಳೇ ಒಳ್ಳೆಯ ಮಾತುಗಳನ್ನು ಆಡಿದರು. ನನ್ನ ಪರಿಚಯ ಮಾಡುವಾಗ ಅವರು ಒಂದು ಮಾತು ಹೇಳಿದರು. ಬಹುಶಃ ತಮಗೆ ಅವರ ಮಾತು ನೆನಪಿರಲು ಸಾಕು. ನನಗೊಂದು ಪ್ರಶ್ನೆ ಮಾಡಿದರು. 'ಕರ್ನಾಟಕದಲ್ಲಿ ಅಷ್ಟೊಂದು ಮೆಡಿಕಲ್ ಕಾಲೇಜು ಯಾಕೆ ಹುಟ್ಟುತ್ತಿವೆ? ಎಂಬುದು ಆ ಪ್ರಶ್ನೆ. ಅದನ್ನು ಉತ್ತರಿಸದಿದ್ದರೆ ನನ್ನ ಮಾತು ಅಪೂರ್ಣ ಎನಿಸುವವು. ನಿಮ್ಮ ಜನರು ಬಟ್ಟೆಯನ್ನು ಉತ್ಪಾದಿಸುವಲ್ಲಿ ಹೇಗೆ ಪರಿಣಿತರೋ ಹಾಗೆ ಕರ್ನಾಟಕದ ಜನರು ವಿದ್ಯೆಯನ್ನು ಕೊಡುವಲ್ಲಿ ಪರಿಣಿತರು. ಗುಜರಾತಿಗಳು ಒಳ್ಳೆಯ ಬಟ್ಟೆ ಗಿರಣಿಗಳನ್ನು ಸ್ಥಾಪಿಸಿ ಲಾಭದಾಯಕವಾಗುವಂತೆ ನಡೆಸುತ್ತಾರೆ. ಹಾಗೆಯೇ ನಮ್ಮವರು ಒಳ್ಳೆಯ ಶಿಕ್ಷಣ ಸಂಸ್ಥೆಗಳನ್ನು ಹುಟ್ಟಿಸಿ ಉತ್ತಮ ಶಿಕ್ಷಣ ಕೊಡುತ್ತಾರೆ.

ನಿಮಗೆ ಕೇವಲ ಮೆಡಿಕಲ್ ಕಾಲೇಜು ಕಂಡಿರಬೇಕು. ಆದರೆ ನಮ್ಮಲ್ಲಿ ಎಲ್ಲ ಕಾಲೇಜುಗಳೂ ಜಾಸ್ತಿ. ಉದಾಹರಣೆಗೆ ಇಂಜಿನಿಯರಿಂಗ್ ಕಾಲೇಜ್, ಡೆಂಟಲ್ ಕಾಲೇಜ್, ನರ್ಸಿಂಗ್ ಕಾಲೇಜ್, ಮ್ಯಾನೇಜ್‌ಮೆಂಟ್ ಕಾಲೇಜ್, ಕಾನೂನು ಕಾಲೇಜ್, ಕೃಷಿ ಕಾಲೇಜ್, ಪಶು ಶಾಸ್ತ್ರ ಕಾಲೇಜ್ ಇತ್ಯಾದಿ. ಕರ್ನಾಟಕ ದವರು ಬಟ್ಟೆ ಉತ್ಪಾದಿಸುವಲ್ಲಿ ನಿಮ್ಮನ್ನು ಮೀರಲು ಸಾಧ್ಯವಾಗದು. ಹಾಗೆಯೇ ನಿಮಗೆ ಶಿಕ್ಷಣ ರಂಗದಲ್ಲಿ ನಮ್ಮನ್ನು ಮೀರಿ ಸಲು ಕಷ್ಟ" ಎಂದೆ. ನನ್ನ ಉತ್ತರವನ್ನು ಕೇಳಿ ಅಲ್ಲಿಯ ಪ್ರಿನ್ಸಿಪಾಲರು ಮೇಲೆ ನೋಡುತ್ತ ಕುಳಿತರು.

ನನ್ನ ಮಾತು ಮುಂದುವರಿಸಿ ಹೇಳಿದೆ. "ಕರ್ನಾಟಕದವರು ನಮ್ಮ ದೇಶಕ್ಕೆ ಮೂರು ಮಹತ್ವದ ಉದ್ಯಮಗಳನ್ನು ಕೊಟ್ಟಿದ್ದಾರೆ. ಅವುಗಳಲ್ಲಿ ಬಹಳ ಮಹತ್ವದ ಉದ್ಯಮವೆಂದರೆ ಶಿಕ್ಷಣ ಪ್ರಸಾರ. ಇದರ ಪ್ರಥಮ ಹರಿಕಾರರೆಂದರೆ ಟಿ.ಎಮ್.ಎ. ಪೈಗಳು. ಅವರಿಂದ ಕರ್ನಾಟಕ ಜಗತ್ತಿಗೇ ವಿದ್ಯಾಕೇಂದ್ರವಾಗಿದೆ. 'ಖರ್ಚು ಮಾಡಿ ಕಲಿ' ಎಂಬುದು ಇಂದಿನ ಜಗತ್ತಿನ ಘೋಷಣೆಯಾಗಿದೆ. ಇಂಗ್ಲೆಂಡಿಗೆ ಹೋಗಿ, ಗ್ಲಾಸ್ಗೋ, ಎಡಿನ್‌ಬರೋ ಮುಂತಾದ ಊರುಗಳಿಗೆ ಹೋಗಿ ಖರ್ಚು ಮಾಡಿ ಕಲಿತು ಬರುವುದಕ್ಕಿಂತ–ನಮ್ಮ ದೇಶ ದಲ್ಲಿಯೇ ಕಲಿಯುವುದು ಸುಲಭ ಹಾಗೂ ಉತ್ತಮ. ನಮ್ಮ ಹಣ ಹೊರದೇಶಗಳಿಗೆ ಹರಿದು ಹೋಗದೇ ನಮ್ಮಲ್ಲಿಯೇ ಉಳಿ ಯುವುದು. ದೇಶದ ಪ್ರಗತಿ ಆಗುವುದು.

"ಎರಡನೆಯ ಉದ್ಯಮವೆಂದರೆ ಬ್ಯಾಂಕಿಂಗ್ ಉದ್ಯಮ. ಇದನ್ನೂ ಪ್ರಾರಂಭಿಸಿದವರು ಟಿ. ಎಮ್. ಎ. ಪೈಗಳ ಮನೆಯ ಜನರು. ಇಂದು ದೇಶದಲ್ಲೆಲ್ಲ ಸಿಂಡಿಕೇಟ್, ಕೆನರಾ, ಕಾರ್ಪೊರೇಶನ್ ಮುಂತಾದ ಬ್ಯಾಂಕುಗಳು ಅಗಾಧವಾಗಿ ಬೆಳೆದಿವೆ. ಜನರ ಸೇವೆಯನ್ನು ಮಾಡುತ್ತ ಲಿವೆ.

"ಮೂರನೆಯ ಉದ್ಯಮವೆಂದರೆ ಮಧ್ಯಮ ವರ್ಗದ ಜನರಿಗೆ ಹೊಟೇಲುಗಳ ಸ್ಥಾಪನೆ. ಉಡುಪಿ ಹೊಟೇಲ್, ಕೃಷ್ಣ ಕೆಫೆಗಳು ಇಡೀ ದಕ್ಷಿಣ ಹಿಂದೂಸ್ತಾನ ವನ್ನು ಆಕ್ರಮಿಸಿವೆ. ಅಷ್ಟೇ ಏಕೆ ಪರದೇಶ ಗಳಲ್ಲೂ ಅವು ಹೆಸರು ಮಾಡಿವೆ.

"ನನ್ನ ಆತ್ಮೀಯ ಸ್ನೇಹಿತರೂ, ನಿಮ್ಮ ಕಾಲೇಜಿನ ಪ್ರಾಚಾರ್ಯರು ಕೇಳಿದ ಪ್ರಶ್ನೆಗೆ ಉತ್ತರ ದೊರಕಿರಬಹುದೆಂದು ಭಾವಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುವೆ."

ಒಟ್ಟಿನಲ್ಲಿ ಸಂದಿಗ್ಧ ಪರಿಸ್ಥಿತಿ ಕಳೆದು ಹೋಯಿತು. ಸುರತ್‌ನಿಂದ ಮುಖ ಎತ್ತಿ ಕರ್ನಾಟಕಕ್ಕೆ ಮರಳಿದೆನು.

ವಾಸನೆಯ ಪ್ರಪಂಚದಲ್ಲಿ

ಗೀತಾನಾಸತ್ಯ
೨೯, ೫ ನೇ ರಸ್ತೆ ಕೊನೆ
ಸಂಜಯ ನಗರ
ಬೆಂಗಳೂರು-೯೪

ನಾವು ಉಸಿರಾಡುವಷ್ಟೇ ವಾಸನೆ ಗ್ರಹಿಸುವ ಪ್ರಕ್ರಿಯೆ ಅನಿವಾರ್ಯ. ಸ್ವಾಭಾವಿಕ ಗಂಧದ ಬಳಕೆ, ಗಂಧ ಘ್ರಾಣದ ಬಳಕೆ ಎಂಬ ವಿಷಯಗಳನ್ನು ಮಾನವ ಅತಿ ಹಿಂದಿನಿಂದ ಬಲ್ಲವನಾಗಿದ್ದಾನೆ. ವಾಸನಾ ಪ್ರಪಂಚದ ಕೆಲವು ಮಾಹಿತಿ ಇಲ್ಲಿದೆ.

ಕ್ಲಿಯೋಪಾತ್ರಳು ತನ್ನ ಪ್ರಿಯಕರ ಮಾರ್ಕ್ ಆಂಟನಿಯನ್ನು ಪ್ರತಿ ಬಾರಿ ಗುಲಾಬಿ ಪಕಳೆಗಳ ರಾಶಿಯೊಳಗೆ ಸಂಧಿಸುತ್ತಿದ್ದಳೆಂದು ಪ್ರತೀತಿ. ಅಂದಿನಿಂದಲೂ ಗಂಧ ದ್ರವ್ಯಗಳನ್ನು ಪರಸ್ಪರ ಆಕರ್ಷಣೆಗೆ ಜನರು ಬಳಸುತ್ತಿದ್ದಾರೆ. ಆಕರ್ಷಣೆ ಎಲ್ಲರಲ್ಲೂ ಅಪೇಕ್ಷಿತೋ ಇಲ್ಲವೋ. ಪರಸ್ಪರ ಅಸಹ್ಯ ಹುಟ್ಟಿಸುವ ವಾಸನೆ ಮರೆಮಾಚುವವರಲ್ಲಂತೂ ಸುಗಂಧ ವಸ್ತುಗಳ ಪಾತ್ರ ಹಿರಿದು. ಪ್ರತಿ ವರ್ಷ ಜನರು ಬಿಲಿಯ ಗಟ್ಟಲೆ ಹಣವನ್ನು ಸುಗಂಧ ಬೀರುವ ಅತ್ತರು, ಪ್ರಸಾಧನ ಸಾಮಗ್ರಿಗಳಿಗೆ ವ್ಯಯಿಸುತ್ತಾರೆ. ಕಾಮನೆಗಳನ್ನು ಕೆರಳಿಸಲು, ಮನಸ್ಸನ್ನು ಉಲ್ಲಸಿತಗೊಳಿಸಲು ಇವು ಸಹಕಾರಿ.

ಐದು ಇಂದ್ರಿಯಗಳ ಪೈಕಿ ಘ್ರಾಣೇಂದ್ರಿಯವೇ ಪ್ರಧಾನ, ಎಲ್ಲದರ ಮೂಲ ಎಂಬ ತಿಳುವಳಿಕೆ ಹಿಂದೆ ಇತ್ತು. ಆ ಸಿದ್ಧಾಂತವನ್ನು ಹೆಲೆನ್ ಕೆಲ್ಲರ್ ಬೆಂಬಲಿಸಿದಳು. ಮನಸ್ಸಿನ ಭಾವನೆಗಳನ್ನು ಮುದುಡಿಸುವ, ಕೆರಳಿಸುವ ಶಕ್ತಿ ಘ್ರಾಣೇಂದ್ರಿಯಕ್ಕಿದೆ ಎಂಬುದು ಸಿದ್ಧವಾಯಿತು. ಮನಸ್ಸು ಮಾತ್ರ ಅಲ್ಲ. ದೇಹದ ಮೇಲೆಯೂ ಸಹ ಈ ಇಂದ್ರಿಯ ಪ್ರಭಾವ ಗಾಢವಾಗಿದೆ ಎಂಬುದು ರುಜುವಾತಾಗಿದೆ. ಈ ಸತ್ಯ ಹಿಂದಿರುವುದಕ್ಕಿಂತ ಈಗ ನಿಚ್ಚಳ.

ಚಿಕಾಗೋದಲ್ಲಿರುವ 'ವಾಸನೆ, ರುಚಿ ಚಿಕಿತ್ಸಾಲಯ ಮತ್ತು ಸಂಶೋಧನೆ ಕೇಂದ್ರ'ದ ಮುಖ್ಯಸ್ಥ ಅಲನ್ ಹರ್ಷ ಹೇಳುವಂತೆ ಮೂಗಿನ ತುದಿಯಲ್ಲೊಂದು

ಆಧಾರ: ೧೯೮೭ರ ನವೆಂಬರ್ ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾದ ಲೂಯಿಸ್ ಥಾಮಸ್ ಅವರ 'ದಿ ಆರ್ಟ್ ಸ್ಮೆಲ್' ಲೇಖನ.

ಅದೃಶ್ಯ ಬ್ರಹ್ಮಾಂಡವೇ ಅಡಗಿದೆ! ವಾಸನಾ ಪ್ರಪಂಚದ ಪ್ರಸಿದ್ಧ, ಬಹುಚರ್ಚಿತ ಸಂಶೋಧನೆ ಅಮೆರಿಕದಲ್ಲೀಗ ನಡೆಯುತ್ತಿದೆ. ಸಂಶೋಧನಕಾರರ ಹೆಸರು ಮಾಗೆಲ್ಲನ್

ಕೆಲವು ಮಾದರಿ ಮಾಹಿತಿ ಹೀಗಿವೆ! ಹಸಿರು ಸೇಬಿನ ವಾಸನೆ ಗ್ರಹಿಸಿದರೆ ಮೈಗ್ರೇನ್ ನೋವು ಶಮನ. ಮಿಶ್ರ ಜಾತಿಯ ಹೂಗಂಧ ಗ್ರಹಿಸಿದರೆ ಟೆನಿಸ್ ಬೂಟು ಕೊಳ್ಳುವ ಹವ್ಯಾಸದಿಂದ ವಿಮುಖತೆ. ಬಾಳೆಹಣ್ಣು ಮತ್ತು ಹಸಿರು ಸೇಬಿನ ಗಂಧ ಗ್ರಹಣದಿಂದ ಶರೀರ ತೂಕದಲ್ಲಿ ಇಳಿತ! ಹರ್ಷ್‌ರವರು ನಡೆಸಿದ ಚಿಕಿತ್ಸಾ ಪ್ರಯೋಗ ವಿವರ ಇಂತಿದೆ. ೩೧ ಪುರುಷರನ್ನು ೪೬ ಬಗೆಯ ವಾಸನೆಗೊಡ್ಡಲಾಯಿತು. ಸಿಹಿಗುಂಬಳ ಮತ್ತು ಲ್ಯಾವೆಂಡರ್ ವಾಸನೆ ಗ್ರಹಿಸಿದಾಗ ಅವರ ಲೈಂಗಿಕ ಸಾಮರ್ಥ್ಯದಲ್ಲಿ ೪೦ ಶೇಕಡಾ ಹೆಚ್ಚಳ. ಕ್ರಾನ್ ಬೆರಿ ಹಣ್ಣಿನ ವಾಸನೆ ಗ್ರಹಿಸಿದಾಗ ಇಳಿತ. ಫಿಲಿಡೆಲ್ಫಿಯಾದ ರಾಸಾಯನಿಕ ಗಂಧ ಶೋಧನಾಲಯವು ಒಂದು ವಿಶೇಷ ಸಂಗತಿಯನ್ನು ಹೊರಗೆಡಹಿದೆ. ತಾಯಿಯ ಉದರದಲ್ಲಿರುವ ಮಗುವು ಹೊರ ಪ್ರಪಂಚದ ವಾಸನೆಗೆ ಪ್ರತಿಸ್ಪಂದಿಸುತ್ತದೆ. ಇಷ್ಟ, ಅನಿಷ್ಟ ಗಂಧ ಒಗ್ಗಿಸುವ ತರಬೇತಿಯನ್ನು ಮಗುವಿಗೆ ನೀಡಲು ಸಾಧ್ಯ. ಉದಾಹರಣೆಗೆ ಬೆಳ್ಳುಳ್ಳಿ ಒಗ್ಗುವಿಕೆ.

ಮೂಗು ಮೂಸುವ ಪರಿ :

ಮೂಗಿನ ಹಿಂಬದಿಯಲ್ಲಿ ಗಂಧ ಭಿತ್ತಿಯಿದೆ. ರೂಪಾಯಿಯ ಅಂಚೆ ಚೀಟಿ ಗಾತ್ರಕ್ಕೂ ಕಿರಿದಿರುವ ಈ ಭಿತ್ತಿಯಲ್ಲಿ ಮಿಲಿಯಗಟ್ಟಲೆ ವಾಸನಾ ಕೋಶ ಮನೆ ಮಾಡಿವೆ. ಜಾಲದಂತಹ ರಚನೆಯುಳ್ಳ ಕೋಶದ ಒಂದು ತುದಿಯು ಶ್ಲೈಷ್ಮಿಕಾವರಣದಿಂದ ಆವೃತ. ವಾಸನೆ ಕೋಶವು ಅದೆಂತು ಗಂಧಗ್ರಹಣ ಮಾಡುವುದೆಂಬ ಸಂಗತಿ ಮಾತ್ರ ಇನ್ನೂ ಅನೂಹ್ಯ ಹಾಗೂ ಅಗೋಚರ. ನಾವು ಮೂಸಬಲ್ಲ ವಸ್ತುವು ಅಂಥ ಸೂಕ್ಷ್ಮ ಹಾಗೂ ಗಾಳಿಯೊಂದಿಗೆ ತೇಲಬಲ್ಲ ಕಣವಿರುವಂತೆ ಹೊಂದಿರಬೇಕು. ಕನ್ನಡಿಯನ್ನು, ಅಮೃತಶಿಲೆಯನ್ನು ನಾವು ಮೂಸಿ ವಾಸನೆ ತಿಳಿಯಲಾದೀತೇ? ಗಾಳಿಯಲ್ಲಿ ತೇಲುವ ವಾಸನೆಯ ಕಿರಿದಂಶ ಮೂಗಿನೊಳಹೊಕ್ಕು ಬಿರುಗಾಳಿಯಂತಹ ತೀವ್ರ ಪ್ರಕ್ರಿಯೆಗೆ ನಾಂದಿ. ಗಂಧಭಿತ್ತಿಯ ಕಣಗಳು ಎಚ್ಚೆತ್ತು ಮಿದುಳಿಗೆ ಸಂವೇದನೆ ರವಾನೆ. ಮಸ್ತಿಷ್ಕದಲ್ಲಿ ಮಿದುಳಿನ ಮತ್ತೊಂದು ಮೂಲೆಯಿಂದ ವಾಸನೆಯ ಬಗೆ, ವಿವರಗಳ ನಿಖರ ಮಾಹಿತಿ ಸಿದ್ಧ. ಸುಗಂಧವೋ, ದುರ್ಗಂಧವೋ. ಮೂಗು ತೆರೆಯಬೇಕೋ ಮುಚ್ಚಬೇಕೋ ನಿರ್ಧಾರ ಉಳಿದ ಅವಯವಕ್ಕೆ.

ಗಂಧಶಕ್ತಿಯು ಭೂತಕಾಲದ ಅನೇಕ ನೆನಪುಗಳನ್ನು ಗರಿಗೆದರಿಸಬಲ್ಲುದು. ಹಿಂದೆ ಅಂಥಹುದೇ ಸುಗಂಧ ಅನುಭವಿಸಿದ ಗಳಿಗೆ, ಸನ್ನಿವೇಶದ ಸಕಲ ನೆನಪಿನ ತರಂಗ ಚಿತ್ರ ಭಿತ್ತಿಯಲ್ಲಿ ಮೂಡಬಲ್ಲುದು. ರುಡ್‌ಯಾರ್ಡ್ ಕಿಪ್ಲಿಂಗ್‌ರ ಮಾತೊಂದು ಹೀಗಿದೆ. "ಧ್ವನಿಯ, ದೃಶ್ಯದ ನೆನಪುಗಳಿಗಿಂತ ಸುಗಂಧ ನೆನಪು ಬಲು ಪ್ರಬಲ. ಹೃದಯದಲ್ಲಿ ತಲ್ಲೋಲ ಕಲ್ಲೋಲವಾಗುವ ಸನ್ನಿವೇಶವನ್ನೊಡ್ಡಬಲ್ಲುದು!"

ಸುಮಾರು ೧೦ ಸಾವಿರ ಬಗೆಯ ವಾಸನೆ ವೈವಿಧ್ಯವನ್ನು ನಾವು ಗುರುತಿಸಬಲ್ಲೆವು.

ನಾಯಿಗಳಲ್ಲಿ ಈ ಶಕ್ತಿ ಬಲು ಪ್ರಬಲ. ಚರ್ಮದ ಒಣ ಹುರುಪೆ, ಕಾಲುಚೀಲದ ವಾಸನೆಯಂಥ ಸೂಕ್ಷ್ಮ ಸಂಗತಿಗಳ ಜಾಡು ಹಿಡಿದು ನಾಯಿಗಳು ವಾಸನೆಯ ಜವಾಬುದಾರ ಮನುಷ್ಯನನ್ನು ಪತ್ತೆ ಮಾಡಬಲ್ಲವು.

ಮದ್ಯದಲ್ಲಿ ರುಚಿಯಷ್ಟೇ ವಾಸನೆಗೆ ಪ್ರಾಧಾನ್ಯತೆ ಇದೆ. ಫ್ರೆಂಚ್ ಮದ್ಯರುಚಿ ಪರೀಕ್ಷಕನೊಬ್ಬ ೧೧ ಬಗೆಯ ಮದ್ಯ ವಾಸನೆ ಗುರುತಿಸಬಲ್ಲನಂತೆ. ರುಚಿ ಮತ್ತು ವಾಸನೆ ಎಂಬವು ಒಂದೇ ನಾಣ್ಯದ ದ್ವಿಮುಖವಿದ್ದಂತೆ. ಭಾರೀ ರುಚಿ ಎಂಬ ಖಾದ್ಯಕ್ಕೆ ರುಚಿಯಷ್ಟೇ ವಾಸನೆ, ಸೊಗಡು ಇದ್ದರಷ್ಟೇ ಸೊಗಯಿಸಿತು. ತಿಂದ ಆಹಾರದ ರುಚಿಯೊಂದಿಗೆ ವಾಸನೆ ಗ್ರಹಿಸಲು ಗಂಟಲಿನ ಹಿಂಬದಿಯ ಗವಾಕ್ಷಿಯೊಂದಿದೆ. ಅಲ್ಲಿಂದ ಆಹಾರದ ವಾಸನೆಯು ಮೂಗಿನ ಹಿಂಬದಿಗೆ ಬಡಿಯುತ್ತದೆ. ಹೀಗಾಗಿ ಮೂಗು ಮುಚ್ಚಿ ತಿಂದರೂ ಗಂಧ ಗ್ರಹಣ ಸಾಧ್ಯ.

ಘ್ರಾಣ ಮತ್ತು ರುಚಿ :

ಜಿ. ಕೆ. ಬ್ಯೂಚಾಂಪ್ ಹೇಳುತ್ತಾರೆ– 'ರುಚಿ ತಿಳಿಯಲು ವಾಸನೆ ಅರಿಯಲೇಬೇಕು'. ಮೂಗು ಕಟ್ಟಿದಾಗ ತಿನ್ನುವ ಆಹಾರವೆಲ್ಲ ನೀರಸ. ಉರಿಯೂತಕ್ಕೊಳಗಾದ ಮೂಗಿನ ಭಿತ್ತಿಯಲ್ಲಿ ವಾಸನೆ ಗ್ರಹಣ ಕಷ್ಟಸಾಧ್ಯ. ಮೂಸಲಸಾಧ್ಯವಿರುವ ಸ್ಥಿತಿ ಎನೋಸ್ಮಿಯಾ. ತಲೆಗೆ ಬೀಳುವ ಏಟಿನಿಂದ ಈ ಸ್ಥಿತಿ ಉಂಟಾಗಬಹುದು. ಇದು ಕೆಲವು ಬಾರಿ ಅಪಾಯಕಾರಿ. ೩ ಮಹಡಿಯಿಂದ ಕೆಳಬಿದ್ದ ಸ್ಮಿತ್ ಎಂಬಾತನಿಗೆ ಗ್ಯಾಸ್ ಸೋರುವ, ಹೊಗೆ, ಸೀದ ವಾಸನೆ ತಿಳಿಯಲಾಗದ ಪರಿಸ್ಥಿತಿ, ಆತನನ್ನು ಪ್ರಶ್ನಿಸಿದಾಗ ಅಡುಗೆ ಹಾಗೂ ಹೆಂಗಸರ ಅತ್ತರಿನ ವಾಸನೆ ನಾನು ಬಹುವಾಗಿ ಕಳೆದುಕೊಂಡಿರುವೆ ಎನ್ನುತ್ತಾನೆ. ವಾಸನೆಯು ಬದುಕಿನ ಎಲ್ಲ ಸ್ತರಗಳಲ್ಲಿ ಅನಿವಾರ್ಯ. ಈಜಿಪ್ಟ್ ಮತ್ತು ಭಾರತದಲ್ಲಿ ಬಳಕೆಯಲ್ಲಿರುವ 'ಸುಗಂಧ ಚಿಕಿತ್ಸೆ' ಈಗೀಗ ಜನಪ್ರಿಯ. ಕೋಣೆಯೊಳಗೆ, ಸ್ನಾನದ ನೀರಿಗೆ ದಟ್ಟ ವಾಸನೆ ಬೀರುವ ವಸ್ತು ಬಳಸುವ ಚಿಕಿತ್ಸೆಯದು. ಗುಲಾಬಿ ಎಣ್ಣೆಯು ವೈರಾಣುರೋಗ ನಿರೋಧಿ. ನರ ಉದ್ರೇಕ ಶಾಮಕ. ಲೈಂಗಿಕ ಆಸಕ್ತಿ ಉದ್ರೇಕಕಾರಿ. ಟೀ ಎಣ್ಣೆಯಿಂದ ಗಾಯ ಮಾಯುತ್ತದೆ. ಸಬ್ಬಸಿಗೆ ವಾಸನೆಯಿಂದ ಚರ್ಮಕ್ಕೆ ಆರೋಗ್ಯ.

ಮಾರಾಟಕ್ಕೆ ಲಭ್ಯವಾಗುವ ವಾಸನೆ :

ವಿದೇಶೀ ಅತ್ತರುಗಳಿಗೆ ದುಬಾರಿ ಬೆಲೆ. ಶಕ್ತಿ ಉತ್ತೇಜನಕೆ, ಲಹರಿ ಸುಧಾರಿಸಲು, ಜಾಗೃತಾವಸ್ಥೆಯಲ್ಲಿರಲು ಬಗೆಬಗೆಯ ಎಣ್ಣೆ, ಅತ್ತರು ಮಾರುಕಟ್ಟೆಯಲ್ಲಿ ಮಾರಾಟವಾಗುತ್ತವೆ. ಚಿಕಿತ್ಸೆಗೊಳಗಾಗುವ ಅರ್ಬುದ ರೋಗಿಗಳ ಚಿತ್ತ ಪ್ರಕ್ಷುಬ್ಧತೆ ಹೋಗಲಾಡಿಸಲು ವ್ಯಾನಿಲ್ಲಾ ವಾಸನೆ ಸಹಕಾರಿ ಎಂಬುದನ್ನು ನ್ಯೂಯಾರ್ಕಿನ ಅರ್ಬುದ ಚಿಕಿತ್ಸಾಲಯದಲ್ಲಿ ಪತ್ತೆ ಹಚ್ಚಿದ್ದಾರೆ. ವಾಸನಾ ಪ್ರಪಂಚದ ಕ್ರಾಂತಿ ಹೀಗೆ ಸಾಗುತ್ತಲೇ ಇದೆ. ನಮ್ಮನ್ನು ನಿದ್ದೆಯಿಂದ ಬಡಿದೆಬ್ಬಿಸುವ, ಕಛೇರಿಯನ್ನು ಉಲ್ಲಸಿತಗೊಳಿಸುತ್ತಲೇ ಇರುವ ಗಂಧ ವಸ್ತುಗಳು ಇನ್ನು ಮುಂದೆ ಮಾರುಕಟ್ಟೆಗೆ ಬರಬಹುದು. ಒಂದು ಸಂಗತಿ ಮಾತ್ರ ಸತ್ಯ. ನಾವು ಉಸಿರಾಡುತ್ತಿರುವಷ್ಟು ದಿನ ವಾಸನೆ ಗ್ರಹಿಸಲೇಬೇಕಾದ ಅನಿವಾರ್ಯತೆ ಇದೆ. ಅನುಭವಿಸೋಣ, ಅಲ್ಲವೇ.

ಒಬ್ಬ ಬಾಲ ವಿಜ್ಞಾನಿಯ ರೋಮಾಂಚಕ ಕಥೆ

ಡಾ|| ಎಂ. ಎಸ್. ಎಸ್. ಮೂರ್ತಿ
ಬಿ-೧೦೪ ಟೆರೇಸ್ ಗಾರ್ಡನ್ ಅಪಾರ್ಟ್‌ಮೆಂಟ್ಸ್
ಎರಡನೇ ಮುಖ್ಯರಸ್ತೆ, ಬನಶಂಕರಿ,
ಬೆಂಗಳೂರು-೫೬೦೦೮೫

ಅಮೆರಿಕಾದ ಡೆಟ್ರಾಯಿಟ್ ನಗರದಿಂದ ಸುಮಾರು ೪೦ ಕಿ. ಮೀ. ದೂರದಲ್ಲಿ ಒಂದು ಸಣ್ಣ ಊರು. ಅದರ ಹೆಸರು ಗೊಲ್ಫ್ ಮೇನರ್. ಗೋಲ್ಫ್ ಮೇನರ್ ಒಂದು ಶಾಂತವಾದ ನೆರೆಹೊರೆ. ಅಲ್ಲಿನ ವಿಶೇಷ ಸಂಗತಿ ಎಂದರೆ ದಿನ ನಿತ್ಯ ಬರುವ ಐಸ್‌ಕ್ರೀಮ್ ಲಾರಿ. ಅದು ಬಿಟ್ಟರೆ ಇನ್ನೆಲ್ಲಾ ಸರ್ವೇಸಾಮಾನ್ಯ. ಆದರೆ ಜೂನ್ ೨೬, ೧೯೯೫ರಂದು ಮಾತ್ರ ಒಂದು ವಿಶೇಷ ದಿನವಾಗಿತ್ತು. ಅಂದು ಆರು ಜನ ಅಪರಿಚಿತರು ಗಲ್ಫ್ ಮೇನರ್‌ಗೆ ಬಂದರು. ಅವರು ಅಮೆರಿಕಾದ ಪರಿಸರ ರಕ್ಷಣಾ ಕಾರ್ಯಾಲಯದ (ಎನ್ವಿರಾನ್ ಮೆಂಟಲ್ ಪ್ರೊಟೆಕ್ಷನ್ ಏಜೆನ್ಸಿ) ಸಿಬ್ಬಂದಿಗಳು. ಅವರಲ್ಲಿ ಮೂವರು, ವ್ಯೋಮಯಾನವರಂತೆ, ಉಸಿರಾಡುವ ಯಂತ್ರ (ರೆಸ್ಪಿರೇಟರ್) ಅಳವಡಿಸಿದ ವಿಚಿತ್ರವಾದ ಉಡುಪನ್ನು ಧರಿಸಿದ್ದರು. ವಿದ್ಯುತ್ ಗರಗಸದಿಂದ, ಒಂದು ಮನೆಯ ಶೆಡ್ಡನ್ನು ಒಡೆದು, ಕತ್ತರಿಸಿ, ತುಂಡುಗಳನ್ನು ದೈತ್ಯಾಕಾರದ ಪೀಪಾಯಿಗಳಿಗೆ ಜೋಪಾನವಾಗಿ ತುಂಬುತ್ತಿದ್ದರು. ಪೀಪಾಯಿಗಳ ಮೇಲೆ ದೊಡ್ಡ ದೊಡ್ಡ ಆಕೃತಿಯಲ್ಲಿ, ಹಳದಿ–ಕಪ್ಪಿನ ಚಿಹ್ನೆಗಳು. ಕೆಳಗೆ "ವಿಕಿರಣ ವಸ್ತು-ಎಚ್ಚರಿಕೆ" ಎಂದು ಬರೆದಿತ್ತು. ಅವರ ಹೇಳಿಕೆಯ ಪ್ರಕಾರ ಊರಿನಲ್ಲಿ ೪೦,೦೦೦ ಜನಗಳಿಗೆ ವಿಕಿರಣ ಪ್ರಭಾವವಾಗುವ ಸಾಧ್ಯತೆ ಇತ್ತು.

ತಾತ ಕೊಟ್ಟ ಉಡುಗೊರೆ

ಇದಕ್ಕೆಲ್ಲ ಕಾರಣ, ಆ ಊರಿನ ಉತ್ಸಾಹಿ ಬಾಲಕ ಡೇವಿಡ್ ಹ್ಯಾನ್. ಡೇವಿಡ್ ಹ್ಯಾನ್, ಊರಿನ ಇತರ ಮಕ್ಕಳಂತೆ ಫುಟ್‌ಬಾಲ್, ಬೇಸ್‌ಬಾಲ್ ಆಡಿಕೊಂಡು, ಶಾಲೆಗೆ ಹೋಗುತ್ತಿದ್ದ. ಅವನ ಬಾಲ್ಯದಲ್ಲಿ ಇನ್ನೇನು ವಿಶೇಷ ಕಂಡಿರಲಿಲ್ಲ. ಡೇವಿಡ್‌ನ ಹತ್ತನೇ ವರ್ಷದ ಹುಟ್ಟು ಹಬ್ಬದಂದು ಅವನ ತಾತ "ದಿ ಗೋಲ್ಡನ್ ಬುಕ್ ಆಫ್ ಕೆಮಿಸ್ಟ್ರಿ ಎಕ್ಸ್‌ಪೆರಿಮೆಂಟ್ಸ್" ಎಂಬ ಪುಸ್ತಕವನ್ನು ಉಡುಗೊರೆ ಕೊಟ್ಟರು. ಅದು ಡೇವಿಡ್‌ನ ಜೀವನಕ್ಕೇ ಒಂದು ಹೊಸ ತಿರುವು ತಂದಿತು. ಮನೆಗೆ ಸೇರಿದ್ದ ಒಂದು ಶೆಡ್ ಅವನ ಪ್ರಯೋಗಶಾಲೆಯಾಯಿತು.

ಕೆಲವೇ ದಿನಗಳಲ್ಲಿ, ಡೇವಿಡ್, ಪುಸ್ತಕದಲ್ಲಿ ವಿವರಿಸಿದ್ದ ಎಲ್ಲ ಪ್ರಯೋಗಗಳನ್ನು ಮಾಡಿ ನೋಡಿದ. ತನ್ನ ೧೨ನೇ ವರ್ಷದ ವೇಳೆಗೆ ತಂದೆಯ ಕಾಲೇಜು ರಸಾಯನ ಶಾಸ್ತ್ರದ ಪಠ್ಯಪುಸ್ತಕವನ್ನು ಓದಿ, ಜೀರ್ಣಿಸಿಕೊಂಡಿದ್ದ. ಹದಿನಾಲ್ಕನೇ ವಯಸ್ಸಿನಲ್ಲಿ ನೈಟ್ರೋಗ್ಲಿಸರಿನ್ ಎಂಬ ರಾಸಾಯನಿಕವನ್ನು ತಾನೇ ತಯಾರಿಸಿದ. ಒಮ್ಮೆ ಅದನ್ನು ಹದಮಾಡುತ್ತಿದ್ದಾಗ ಸ್ಫೋಟಗೊಂಡಿತು. ತಾಯಿ, ಧಾವಿಸಿ ಬಂದು ನೋಡಿದರೆ ಹುಡುಗ ಅರಿವು ತಪ್ಪಿ ನೆಲದ ಮೇಲೆ ಬಿದ್ದಿದ್ದಾನೆ. ತತ್‌ಕ್ಷಣ ವೈದ್ಯರನ್ನು ಕರೆಯಿಸಿ, ಶುಶ್ರೂಷೆ ಮಾಡಿಸಲಾಯಿತು. ಡೇವಿಡ್ ಎಚ್ಚರಗೊಂಡ. ಆದರೆ, ವಿಜ್ಞಾನದ ಜೊತೆಗೆ ಅವನ ಪ್ರಣಯಕ್ಕೆ ಇದರಿಂದ ಧಕ್ಕೆ ಬರಲಿಲ್ಲ.

ವಿಕಿರಣದೊಡನೆ ಸರಸ

ಅವನ ಉತ್ಸಾಹಕ್ಕೆ ಸರಿಯಾದ ಮಾರ್ಗ ಸೃಷ್ಟಿಸಬೇಕೆಂದು, ಡೇವಿಡ್‌ನ ತಂದೆ ಅವನನ್ನು ಸ್ಕೌಟ್‌ಗೆ ಸೇರಿಸಿದರು. ಅಲ್ಲಿ, ಡೇವಿಡ್ ಪರಮಾಣು ಶಕ್ತಿಯ ಬಗ್ಗೆ ವಿಶೇಷ ಆಸಕ್ತಿ ತೋರಿಸಿದ. ವರ್ಷದಲ್ಲಿ ಅವನಿಗೆ, ತಾನೇ ಒಂದು ಪರಮಾಣು ಕ್ರಿಯಾಕಾರಿಯನ್ನು ನ್ಯೂಕ್ಲಿಯರ್ ರಿಯಾಕ್ಟರ್ ರಚಿಸಬೇಕೆಂಬ ಮಹತ್ವಾಕಾಂಕ್ಷೆ ಉಂಟಾಯಿತು. ಮೊದಲು, ಅದರ ಬಗ್ಗೆ ವಿಷಯ ಸಂಗ್ರಹಣೆಯಾಗಬೇಕಾಗಿತ್ತು. ಹದಿನೈದು ವರ್ಷದ ಬಾಲಕನಿಗೆ ವಿಕಿರಣ ಪಟುತ್ವತೆ (ರೇಡಿಯೋಆಕ್ಟಿವಿಟಿ) ಪರಮಾಣು ಕ್ರಿಯಾಕಾರಿ ಇವುಗಳ ಬಗ್ಗೆ ವಿಶದವಾದ ಮಾಹಿತಿ ಸುಲಭವಾಗಿ ಲಭ್ಯವಾಗುವಂತಿರಲಿಲ್ಲ. ಆದ್ದರಿಂದ, ತಾನೊಬ್ಬ, ಪ್ರೌಢಶಾಲೆಯ ಭೌತಶಾಸ್ತ್ರ ಪ್ರಾಧ್ಯಾಪಕನೆಂದು ಕಲ್ಪಿಸಿಕೊಂಡು ಸರ್ಕಾರದ ಊರ್ಜ ಇಲಾಖೆಗೆ ಹಾಗೆ ಪತ್ರ ಬರೆದ. ಅವರಿಂದ ವಿಕಿರಣ ಧಾತುಗಳನ್ನು ತಯಾರಿಸುವ, ಬೇರ್ಪಡಿಸುವ ಕ್ರಮಗಳು, ಪರಮಾಣು ಕ್ರಿಯಾಕಾರಿಯಲ್ಲಿ ನಡೆಯುವ ವಿದಲನ ಕ್ರಿಯೆ, ಅದಕ್ಕೆ ಬೇಕಾಗುವ ಇಂಧನ, ನ್ಯೂಟ್ರಾನ್ ಉತ್ಪತ್ತಿ ಮಾಡುವ ಸಾಧನ ಇವೆಲ್ಲದರ ಬಗ್ಗೆ ಸಾಕಷ್ಟು ಮಾಹಿತಿಗಳಿಸಿದ.

ಮೊದಲು ನ್ಯೂಟ್ರಾನ್ ಉತ್ಪತ್ತಿ ಮಾಡುವ "ಗನ್" ಒಂದನ್ನು ತಯಾರಿಸಲು ಯೋಚಿಸಿದ. ಆದಕ್ಕೆ ಆಲ್ಫ ಕಿರಣಗಳನ್ನು ಹೊರಸೂಸುವ ವಿಕಿರಣ ಧಾತುವಿನ ಆವಶ್ಯಕತೆ ಇತ್ತು, ವಿಕಿರಣ ವಸ್ತುಗಳನ್ನು ಅಂಗಡಿಯಲ್ಲಿ ಕೊಳ್ಳುವಂತಿರಲಿಲ್ಲ. ಅದಕ್ಕೆ ವಿಶೇಷತರವಾದ ಪರವಾನಗಿ ಬೇಕು. ಹದಿನೈದು ವರ್ಷದ ಈ ಉತ್ಸಾಹಿ ಬಾಲಕನಿಗೆ ಅದು ದೊರಕುವ ಸಾಧ್ಯತೆ ಇರಲಿಲ್ಲ. ಅದಕ್ಕೆ ಡೇವಿಡ್ ಒಂದು ಯೋಜನೆ ಹಾಕಿದ. ದೊಡ್ಡ ದೊಡ್ಡ ಕಟ್ಟಡಗಳಲ್ಲಿ, ಅಗ್ನಿಶಾಮಕ ಧೂಮ ಸಂಸೋಚಕಗಳನ್ನು (ಸ್ಮೋಕ್ ಡಿಟೆಕ್ಟರ್) ಅಳವಡಿಸಿರುತ್ತಾರೆ. ಈ ಉಪಕರಣಗಳಲ್ಲಿ ಅಮೆರೀಷಿಯಮ್-೨೪೧ ಎಂಬ ವಿಕಿರಣಪಟು ಧಾತುವನ್ನು ಬಳಸುತ್ತಾರೆ. ಅದು ಆಲ್ಫ ಕಿರಣಗಳನ್ನು ಹೊರಸೂಸುತ್ತದೆ. ಈ ಉಪಕರಣಗಳನ್ನು ಉತ್ಪಾದಿಸುವ ಕಾರಖಾನೆಗಳಿಗೆ ಪತ್ರ ಬರೆದ-ಶಾಲೆಯ ನಿಯೋಜನೆಗಾಗಿ ಬಹು ಸಂಖ್ಯೆಯಲ್ಲಿ ಧೂಮ ಸಂಸೂಚಕಗಳು ಬೇಕಾಗಿವೆ ಎಂದು.

...ವರಿಂದ ಡಾಲರಿಗೆ ಒಂದರಂತೆ ನೂರಾರು ...ರಿಂದ, ಮುರಿದ ಧೂಮ ಸಂಸೂಚಕ ...ಳನ್ನು ಖರೀದಿಸಿದ. ಆದರೆ, ಅದರಲ್ಲಿ ...ಮೆರೀಸಿಯಮ್-೨೪೧ ಎಲ್ಲಿ ಅಡಗಿರುತ್ತ ...ದೆಂದು ತಿಳಿದಿರಲಿಲ್ಲ. ಅದಕ್ಕಾಗಿ ಒಂದು ...ಲೆಕ್ಟ್ರಾನಿಕ್ಸ್ ಕಂಪನಿಗೆ ಹೋಗಿ ಮಾಹಿತಿ ...ಸಂಪಾದಿಸಿದ. ಅನಂತರ, ಒಂದೊಂದೇ ...ಧೂಮ ಸಂಸೂಚಕವನ್ನು ಬಿಚ್ಚಿ, ...ಎಮ್-೨೪೧ ತೆಗೆದು ಸೀಸದ ಉರುಳೆ ...ರುಲ್ಲಿ ಕಲೆ ಹಾಕಿದ. ಉರುಳೆಯ ಪಕ್ಕ ...ದಲ್ಲಿ ಸಣ್ಣ ರಂಧ್ರ ಕೊರೆದು ಆಲ್ಫ ಕಣ ...ಗಳು ಹೊರಬರಲು ಅವಕಾಶ ಮಾಡಿ, ...ಅದರ ಮುಂದೆ ತೆಳುವಾದ ಅಲ್ಯುಮಿನಿ-...ಯಮ್ ಹಾಳೆಯನ್ನು ಅಡ್ಡ ಇಟ್ಟ. ಅಲ್ಯು-...ಮಿನಿಯಮ್ ಪರಮಾಣುವು, ಆಲ್ಫ ಕಿರಣ ...ವನ್ನು ಹೀರಿ ತನ್ನಲ್ಲಿರುವ ನ್ಯೂಟ್ರಾನನ್ನು ...ಹೊರಹಾಕುತ್ತದೆ. ಹೀಗೆ ತಯಾರಾಯಿತು, ...ಡೇವಿಡ್‌ನ ನ್ಯೂಟ್ರಾನ್‌ಗನ್. ಇದೇ ...ರೀತಿಯ ಪ್ರಯೋಗದಿಂದ, ಅರುವತ್ತು ...ವರ್ಷಗಳ ಹಿಂದೆ, ಬ್ರಿಟನ್ನಿನ ವಿಜ್ಞಾನಿ ...ಜೇಮ್ಸ್ ಚಾಡ್‌ವಿಕ್ ನ್ಯೂಟ್ರಾನ್ ಕಣ ...ಗಳ ಆವಿಷ್ಕಾರ ಮಾಡಿದ್ದ. ಅದಕ್ಕಾಗಿ ...ಅವನಿಗೆ ನೊಬೆಲ್ ಪಾರಿತೋಷಕವೂ ...ಬಂದಿತ್ತು.

ಪರಮಾಣು ಕ್ರಿಯಾಕಾರಿ ತಯಾರಿಸಲು ...ವಿದಲನಶೀಲ ವಸ್ತು ಬೇಕಲ್ಲ. ಆದುಕೂಡ ...ಡೇವಿಡ್‌ಗೆ ಸಿಗುವ ಸಾಧ್ಯತೆ ಇರಲಿಲ್ಲ. ...ಆದರೆ ಅವನ ಚತುರತೆ ಇದಕ್ಕೆ ...ಮತ್ತೊಂದು ಯೋಜನೆ ಹಾಕಿತು. ನೀವು ...ಕ್ಯಾನಿಲ ಲಾಂಧ್ರಗಳನ್ನು ನೋಡಿರಬಹುದು. ...ಅದರಲ್ಲಿ ಬೆಳಕು ಕೊಡುವ ಒಂದು ಕವಚ ...ಇರುತ್ತದೆ. ಅದರ ತಯಾರಿಕೆಯಲ್ಲಿ ಥೋರಿಯಮ್-೨೩೨ (ಟಿ ಎಚ್.-೨೩೨) ಎಂಬ ಧಾತುವನ್ನು ಉಪಯೋಗಿಸುತ್ತಾರೆ. ಇದನ್ನು ಡೇವಿಡ್ ತಿಳಿದುಕೊಂಡ. ಟಿ.ಎಚ್.-೨೩೨ನ್ನು ನ್ಯೂಟ್ರಾನ್ ಪ್ರಭಾವಕ್ಕೆ ಒಳಪಡಿಸಿದಾಗ, ಅದು ಯುರೇನಿಯಮ್-೨೩೩ (ಯು.-೨೩೩) ಆಗಿ ಪರಿವರ್ತನೆಯಾಗುವುದೆಂದೂ, ಯು-೨೩೩ ವಿದಲನಶೀಲ ವಸ್ತುವೆಂದೂ, ಊರ್ಜ ಇಲಾಖೆಯ ಸಿಬ್ಬಂದಿಗಳು ಡೇವಿಡ್‌ಗೆ ಮಾಹಿತಿಕೊಟ್ಟಿದ್ದರು. ಸಾವಿರಾರು ಕವಚಗಳನ್ನು ಕೊಂಡು, ಅವನ್ನು ಸುಟ್ಟು ಬೂದಿ ಮಾಡಿದ. ಆ ಬೂದಿಯಿಂದ ಟಿ.ಎಚ್.-೨೩೨ನ್ನು ಬೇರ್ಪಡಿಸಬೇಕು. ಅದಕ್ಕಾಗಿ ಒಂದು ಸಾವಿರ ಡಾಲರ್ ಹಣಕೊಟ್ಟು ಲೀಥಿಯಮ್ ಬ್ಯಾಟರಿಗಳನ್ನು ಕೊಂಡ. ಅವನ್ನು ಕತ್ತರಿಸಿ, ಲೀಥಿಯಮ್ ಹೊರ ತೆಗೆದು, ಥೋರಿಯಮ್ ಬೂದಿಯೊಡನೆ ಸೇರಿಸಿ, ಅಲ್ಯೂಮಿನಿಯಮ್ ಹಾಳೆಯಲ್ಲಿ ಸುತ್ತಿ ಬುನ್‌ಸನ್ ಬರ್ನರ್‌ನಿಂದ ಚೆನ್ನಾಗಿ ಕಾಸಿದ. ಇದರಿಂದ ಥೋರಿಯಮ್ ಅನೇಕ ಪಟ್ಟು ಶುದ್ಧಿಯಾಯಿತು. ಹೀಗೆ ಶುದ್ಧಿ ಮಾಡಿದ ಥೋರಿಯಮ್‌ನ್ನು, ನ್ಯೂಟ್ರಾನ್‌ಗನ್ ಮುಂದಿಟ್ಟು ಕಾದ. ಆದರೆ, ಅದರಿಂದ ಥೋರಿಯಮ್, ಯುರೇನಿಯಮ್ ಆಗಿ ಪರಿವರ್ತನೆ ಆಗಲಿಲ್ಲ. ಕಾರಣ, ಅದು ತುಂಬಾ ಕ್ಷೀಣವಾಗಿದ್ದಿತು. ಈ ಪರಿವರ್ತನೆಗೆ ಬೇಕಾದದ್ದು ತೀಕ್ಷ್ಣವಾದ ನ್ಯೂಟ್ರಾನ್‌ಗನ್. ಡೇವಿಡ್ ನಿರಾಶನಾಗಲಿಲ್ಲ. ಪ್ರತಿ ಸಮಸ್ಯೆಗೂ ಒಂದು ಪರಿಹಾರ ಇದ್ದೇ ಇರುತ್ತದೆಂಬ ಅಚಲವಾದ ನಂಬಿಕೆ ಅವನಿಗೆ. ಹಾಗಿಲ್ಲ

ದಲ್ಲಿ, ವಿಜ್ಞಾನದ ಪ್ರಗತಿ ಹೇಗೆ ಸಾಧ್ಯ?. ಈ ವೇಳೆಗೆ, ಊರ್ಜ ಇಲಾಖೆಯ ಸಿಬ್ಬಂದಿ ಕೊಟ್ಟಿದ್ದ ಮತ್ತೊಂದು ಮಾಹಿತಿ ನೆನಪಿಗೆ ಬಂತು: ರೇಡಿಯಮ್ ಮತ್ತು ಬೆರಲಿಯಮ್ ಮಿಶ್ರಣದಿಂದ ತೀಕ್ಷ್ಣವಾದ ನ್ಯೂಟ್ರಾನ್‌ಗನ್ ತಯಾರಿಸಬಹುದೆಂದು. ಈಗ, ಡೇವಿಡ್ ರೇಡಿಯಮ್ ಬೇಟೆಗೆ ಸಿದ್ಧನಾದ.

ಡೇವಿಡ್‌ಗೆ ಇದಕ್ಕೆಲ್ಲಾ ಹಣ ಎಲ್ಲಿಂದ ಬಂತೆಂದು ನೀವು ಆಶ್ಚರ್ಯಪಡುವಿರಾ?. ಅವನು ಶಾಲೆ ಮುಗಿದ ಮೇಲೆ ಸಂಜೆ ಹೊತ್ತಿನಲ್ಲಿ, ರಜಾದಿನಗಳಲ್ಲಿ ಕೂಲಿಕೆಲಸ ಮಾಡುತ್ತಿದ್ದ. ಬಂದ ಹಣವನ್ನು ಪ್ರಯೋಗಗಳಿಗಾಗಿ ಉಪಯೋಗಿಸುತ್ತಿದ್ದ.

ಹಳೇ ಕಾಲದ ಗಡಿಯಾರಗಳಲ್ಲಿ, ಮುಳ್ಳು ಮತ್ತು ಅಂಕೆಗಳ ಮೇಲೆ ರೇಡಿಯಮ್ ಬಣ್ಣ ಬಳಿಯುತ್ತಿದ್ದರು. ಇದರಿಂದ ರಾತ್ರಿಯ ಕತ್ತಲಿನಲ್ಲೂ ವೇಳೆ ತಿಳಿಯಲು ಸಾಧ್ಯವಾಗುತ್ತಿತ್ತು. ಊರಿನ ಎಲ್ಲ ಗುಜರಿಗಳನ್ನು ಸುತ್ತಿ, ಹಳೇ ಗಡಿಯಾರಗಳನ್ನು ಸಂಪಾದಿಸಿ, ಅವುಗಳಿಂದ ರೇಡಿಯಮ್ ಕಲೆ ಹಾಕಿದ. ಈ ಸಂದರ್ಭದಲ್ಲಿ ಒಂದು ಗಡಿಯಾರ ಕೊಂಡಾಗ ಅದರ ಹಿಂಭಾಗದಲ್ಲಿ ರೇಡಿಯಮ್ ಬಣ್ಣ ತುಂಬಿದ ಒಂದು ಸೀಸೆಯನ್ನು ಕಂಡು ಅವನಿಗೆ ಬಹಳ ಖುಷಿಯಾಯಿತು. ಅವನ ಮಿತ್ರನೊಬ್ಬ ತನ್ನ ಸ್ಕೂಲಿನ ರಸಾಯನ ಪ್ರಯೋಗ ಶಾಲೆಯಿಂದ ಸ್ವಲ್ಪ ಬೆರಿಲಿಯಮ್ ತಂದು ಕೊಟ್ಟ. ರೇಡಿಯಮ್ ಮತ್ತು ಬೆರಿಲಿಯಮ್ ಎರಡನ್ನೂ ಬೆರೆಸಿ, ಸೀಸದ ಉರುಳೆಯಲ್ಲಿ ಹಾಕಿದ. ಆಗ ಒಂದು ತೀಕ್ಷ್ಣವಾದ ನ್ಯೂಟ್ರಾನ್‌ಗನ್ ತಯಾರಾಯಿತು. ಆ ಎಲ್ಲ ಕೆಲಸಗಳಲ್ಲಿ ವಿಕಿರಣಪಟು ಧಾತುಗಳಿಂದ ಆಗಬಹುದಾದ ಹಾನಿಯ ಬಗ್ಗೆ, ಡೇವಿಡ್ ತಲೆ ಕೆಡಿಸಿಕೊಳ್ಳಲಿಲ್ಲ.

ಈ ಮಧ್ಯೆ ಅವನಿಗೆ, ಪಿಚ್‌ಬ್ಲೆಂಡ್ ಹೆಸರಿನ, ಯುರೇನಿಯಮ್ ಅದುರು ಕೈ ಸೇರಿತು. ಪಿಚ್‌ಬ್ಲೆಂಡ್ ಅದುರನ್ನು, ೯೭ ವರ್ಷಗಳ ಹಿಂದೆ, ಮೇರಿಕ್ಯೂರಿ ಸಂಸ್ಕರಿಸಿ ರೇಡಿಯಮ್‌ನ್ನು ಹೊರತೆಗೆದಿದ್ದರು. ಅದಕ್ಕಾಗಿ ಅವರಿಗೆ ನೊಬೆಲ್ ಪಾರಿತೋಷಕವೂ ಪ್ರಾಪ್ತವಾಗಿದ್ದಿತು. ಸುತ್ತಿಗೆಯಿಂದ ಕುಟ್ಟಿ, ಪಿಚ್‌ಬ್ಲೆಂಡನ್ನು ಪುಡಿ ಮಾಡಿ, ನ್ಯೂಟ್ರಾನ್‌ಗನ್ ಮುಂದೆ ಇಟ್ಟನು. ಅವನ ನಿರೀಕ್ಷೆ ಇದ್ದದ್ದು, ಪಿಚ್‌ಬ್ಲೆಂಡ್‌ನಲ್ಲಿದ್ದ ಯುರೇನಿಯಮ್ ಪರಮಾಣುಗಳು, ನ್ಯೂಟ್ರಾನನ್ನು ಹೀರಿ, ವಿದಲನಗೊಳ್ಳುವುವೆಂದು. ವಿದಲನಕ್ರಿಯೆ ಮುಂದುವರಿದಂತೆ, ವಿಕಿರಣಾಪಟುತ್ವ ತೀವ್ರವಾಗುತ್ತದೆ. ಆದರೆ, ಮತ್ತೆ ಅವನ ನಿರೀಕ್ಷೆ ಫಲಿಸಲಿಲ್ಲ. ಇದಕ್ಕೆ ಕಾರಣ ಹುಡುಕಲು ಡೇವಿಡ್‌ಗೆ ಬಹಳ ಕಾಲ ಬೇಕಾಗಲಿಲ್ಲ. ನ್ಯೂಟ್ರಾನ್‌ಗಳು ಉನ್ನತ ವೇಗದಲ್ಲಿ ಹೊರಬರುತ್ತಿದ್ದುದರಿಂದ, ಅವನ್ನು ಹೀರಲು, ಯುರೇನಿಯಮ್ ಪರಮಾಣುಗಳಿಗೆ ಸಾಧ್ಯವಾಗುತ್ತಿರಲಿಲ್ಲ. ಇದಕ್ಕೆ ಪರಿಹಾರವಾಗಿ, ಯುರೇನಿಯಮ್ ಪುಡಿಗೂ, ನ್ಯೂಟ್ರಾನ್ ಗನ್ನಿಗೂ ನಡುವೆ ಒಂದು ತೆರೆಯನ್ನಿಟ್ಟ. ಆಗ ಯುರೇನಿಯಂ ಪುಡಿಯ ವಿಕಿರಣಾಪಟುತ್ವ ನಿಧಾನವಾಗಿ ಏರಲು ಪ್ರಾರಂಭವಾಯಿತು! ವಿದಲನ ಕ್ರಿಯೆ ನಡೆಯುತ್ತಿದೆ ಎಂದು ಖಚಿತವಾಯಿತು.

ಇನ್ನು ಪರಮಾಣು ಕ್ರಿಯಾಕಾರಿಯನ್ನು ಜೋಡಿಸುವುದೊಂದು ಬಾಕಿ. ಅವನ ಪ್ರಯತ್ನ ಒಂದು ಪ್ರಜನನ ಕ್ರಿಯಾಕಾರಿಯನ್ನು (ಬ್ರೀಡರ್ ರಿಯಾಕ್ಟರ್) ತಯಾರಿಸಬೇಕೆಂದು. ಅದು ಎಷ್ಟು ಇಂಧನವನ್ನು ಉಪಯೋಗಿಸುವುದೊ, ಅದಕ್ಕಿಂತ ಹೆಚ್ಚು ಇಂಧನವನ್ನು ಉತ್ಪತ್ತಿಮಾಡುತ್ತದೆ. ಇದರಿಂದ ಪ್ರಪಂಚದ ಇಂಧನ ಸಮಸ್ಯೆಯನ್ನು ಬಗೆಹರಿಸಬಹುದೆಂದು ಅವನ ನಂಬಿಕೆಯಾಗಿದ್ದಿತು. ತನ್ನಲ್ಲಿದ್ದ ರೇಡಿಯಮ್, ಬೆರಿಲಿಯಮ್, ಅಮೆರಿಸಿಯಮ್ ಎಲ್ಲವನ್ನೂ ಒಟ್ಟಾಗಿ ಸೇರಿಸಿ ಒಂದು ಅಲ್ಯೂಮಿನಿಯಮ್ ಹಾಳೆಯಲ್ಲಿ ಸುತ್ತಿದ. ಇದೇ ಕ್ರಿಯಾಕಾರಿಯ ತಿರುಳು. ಅನಂತರ, ಯುರೇನಿಯಮ್ ಪುಡಿ ಮತ್ತು ಥೋರಿಯಮ್ ಬೂದಿಯನ್ನು ಮಿಶ್ರಿಸಿ, ಅಲ್ಯೂಮಿನಿಯಮ್ ಹಾಳೆಯಲ್ಲಿ ಬಂಧಿಸಿ, ಬಹಳ ಜೋಪಾನವಾಗಿ ತಿರುಳಿನ ಸುತ್ತ ಹೊದ್ದಿಕೆಯಂತೆ ಸುತ್ತಿ, ಟೇಪಿನಿಂದ ಬಿಗಿದ. ಅದು ತಾಂತ್ರಿಕವಾಗಿ, ಪರಮಾಣು ಕ್ರಿಯಾಕಾರಿ ಎನಿಸಿಕೊಳ್ಳದಿದ್ದರೂ, ಕ್ರಿಯಾಕಾರಿಯಲ್ಲಿ ನಡೆಯುವ ಬೈಜಿಕ ಕ್ರಿಯೆಗಳು ಮಾತ್ರ ಉತ್ಸುಕತೆಯಿಂದ ಅಲ್ಲಿ ನಡೆಯುತ್ತಿದ್ದುವು. ಕೆಲವೇ ಹೊತ್ತಿನಲ್ಲಿ, ಅದು ತೀಕ್ಷ್ಣವಾಗಿ ವಿಕಿರಣವನ್ನು ಹೊರಸೂಸಲಾರಂಭಿಸಿತು. ಅದು ಎಷ್ಟು ತೀಕ್ಷ್ಣವಾಗಿತ್ತೆಂದರೆ, ಅಲ್ಲಿಂದ ಐದುಮನೆ ದೂರದವರೆಗೂ, ಗೆಗರ್ ಕೌಂಟರ್ ಸಹಾಯದಿಂದ, ವಿಕಿರಣವನ್ನು ಪತ್ತೆಹಚ್ಚಬಹುದಾಗಿದ್ದಿತು. ಆಗ, ಡೇವಿಡ್‌ಗೆ ಸ್ವಲ್ಪ ಭಯವಾಯಿತು. ಇಷ್ಟೊಂದು ವಿಕಿರಣತೆ ಒಂದೇ ಸ್ಥಳದಲ್ಲಿದ್ದರೆ ಹಾನಿಯಾಗಬಹುದೆಂದು ಹೆದರಿ, ಕ್ರಿಯಾಕಾರಿಯ ಭಾಗಗಳನ್ನು ಬೇರ್ಪಡಿಸಿ, ಅದನ್ನು ನಿಷ್ಕ್ರಿಯಗೊಳಿಸಿಬಿಟ್ಟ. ಅನಂತರ, ಅದರ ಒಂದು ಭಾಗವನ್ನು ಶೆಡ್ಡಿನಲ್ಲೇ ಬಿಟ್ಟು, ಮತ್ತೊಂದು ಭಾಗವನ್ನು ತನ್ನ ಕಾರಿನ ಡಿಕ್ಕಿಯಲ್ಲಿಟ್ಟ. ಆಗ ಸಮಯ ಮುಂಜಾನೆ ೨ ಘಂಟೆ ೪೦ ನಿಮಿಷ!

ಅನಿರೀಕ್ಷಿತ ತಿರುವು

ಹಿಂದಿನಿಂದ, ಪೊಲೀಸ್ ಕಾರಿನ ಸೈರನ್ ಕೇಳಿಸಿತು. ಯುವಕನೊಬ್ಬ ಕಾರಿನ ಟಯರ್ ಕದಿಯುತ್ತಿದ್ದಾನೆಂದು ಯಾರೊ ಪೊಲೀಸರಿಗೆ ಸುದ್ದಿ ಮುಟ್ಟಿಸಿದ್ದರು. ಕಳ್ಳನನ್ನು ಹುಡುಕ ಹೊರಟಿದ್ದ ಪೊಲೀಸರ ಕಣ್ಣಿಗೆ ಡೇವಿಡ್ ಕಂಡ. ತನಿಖೆ ಪ್ರಾರಂಭವಾಯಿತು. ಅವನ ಕಾರಿನ ಡಿಕ್ಕಿ ತೆಗೆದು ನೋಡಿದಾಗ, ದೊಡ್ಡದೊಂದು ಪೆಟ್ಟಿಗೆ ಕಂಡರು. ಅದಕ್ಕೆ ಬೀಗ ಹಾಕಲಾಗಿತ್ತು. ಪೊಲೀಸರು ಅದೇನೆಂದು ಪ್ರಶ್ನಿಸಿದಾಗ, ಅದರಲ್ಲಿ ವಿಕಿರಣ ವಸ್ತುಗಳು ಇವೆಯೆಂದೂ ಮುಟ್ಟಿದರೆ ಅಪಾಯವೆಂದೂ ಹೇಳಿದನು. ಅನುಮಾನ ಬಂದು ಪೆಟ್ಟಿಗೆಯನ್ನು ತೆರೆದರು. ಕಂಡದ್ದೇನು? ಕ್ರಿಯಾಕಾರಿಯ ಭಾಗಗಳು, ವೈರುಗಳು, ಪಾದರಸದ ಸ್ವಿಚ್ ಇತ್ಯಾದಿ. ಈತ ಪರಮಾಣು ಬಾಂಬನ್ನೇ ಡಿಕ್ಕಿಯಲ್ಲಿ ಅಡಗಿಸಿ ಇಟ್ಟಿದ್ದಾನೆಂದು ಗುಮಾನಿ ಉಂಟಾಗಿ, ತಕ್ಷಣಾ ಸುರಕ್ಷಣಾ ಅಧಿಕಾರಿಗಳಲ್ಲಿ ವರದಿಮಾಡಿದರು.

ಸುರಕ್ಷಣಾ ಅಧಿಕಾರಿಗಳು ಕಾರಿನಲ್ಲಿದ್ದ ವಿಕಿರಣಪಟು ವಸ್ತುಗಳನ್ನೆಲ್ಲಾ ವಶಪಡಿಸಿಕೊಂಡು, ಅವನ ಪ್ರಯೋಗ ಶಾಲೆಯಾಗಿದ್ದ ಶೆಡ್ಡನ್ನು ಪರಿಶೀಲಿಸಿದರು. ಅದು

ಎಲ್ಲೆಡೆಯಲ್ಲೂ ವಿಕಿರಣಪಟು ಧಾತುಗಳಿಂದ ಅಶುದ್ಧ ಆಗಿದ್ದುದು ಕಂಡುಬಂದಿತು. ಅಲ್ಲಿಯ ವಿಕಿರಣಪಟುತ್ವದ ತೀಕ್ಷ್ಣತೆ, ನೈಸರ್ಗಿಕ ಮಟ್ಟಕ್ಕಿಂತ ಸಾವಿರ ಪಟ್ಟು ಹೆಚ್ಚಾಗಿದ್ದಿತು! ಹಾಗೆಯೇಬಿಟ್ಟರೆ ಮಳೆ, ಗಾಳಿಯಲ್ಲಿ ವಿಕಿರಣಪಟು ಧಾತುಗಳು ಹರಡಿ ಸುತ್ತಮುತ್ತಲಿನ ಜನರಿಗೆ ಹಾನಿಯಾಗುವ ಸಂಭವವಿತ್ತು, ವಿಶೇಷ ಉಡುಪುಧರಿಸಿದ ಮೂವರು ಕೆಲಸಗಾರರು ಶೆಡ್ಡನ್ನು ಕೆಡವಿ ಅಲ್ಲಿದ್ದ ವಸ್ತುಗಳನ್ನೆಲ್ಲಾ ೩೯ ಪೀಪಾಯಿಗಳಲ್ಲಿ ತುಂಬಿ, ಗ್ರೇಟ್ ಸಾಲ್ಟ್ ಲೇಕ್ ಎಂಬಲ್ಲಿಗೆ ಲಾರಿಗಳಲ್ಲಿ ಕೊಂಡೊಯ್ದರು. ಅಲ್ಲಿ, ಇತರ ವಿಕಿರಣಪಟು ತ್ಯಾಜ್ಯ ವಸ್ತುಗಳೊಂದಿಗೆ, ಡೇವಿಡ್‌ನ ಪರಮಾಣು ಕ್ರಿಯಾಕಾರಿಯೂ ಭೂಗತವಾಯಿತು.

ಇಂದು ಡೇವಿಡ್ ಹ್ಯಾನ್ ಅಮೆರಿಕದ ನೌಕಾ ಸೇನೆಯಲ್ಲಿದ್ದಾನೆ. "ಜೀವನದಲ್ಲಿ ಏನನ್ನಾದರೂ ಮಾಡಿ ತೋರಿಸಬೇಕೆಂಬ ಬಯಕೆ ನನಗಿದೆ. ಇನ್ನೂ ಕಾಲ ಮೀರಿಲ್ಲ" ಎನ್ನುತ್ತಾನೆ ಡೇವಿಡ್ !



ಎಂಥ ವಿಶ್ವಕರ್ತೃಲೆಯಾದರೂ, ಒಂದು ಹಣತಿಯ ಪ್ರಕಾಶವನ್ನು ನಾಶಗೊಳಿಸಲಾರದು.
ಎಂಥ ದುಷ್ಟಶಕ್ತಿಯಾದರೂ ಸತ್ಯದ ಪ್ರಕಾಶವನ್ನು ನಾಶಗೊಳಿಸಲಾರದು.

—ಗಾಂಧೀಜಿ

ಹೆಣಕ್ಕೆ ಜೀವ ಬಂದಾಗ

ಎಚ್. ಆರ್. ಚಂದ್ರವದನರಾವ್
೭೦೩, ಮಹಡಿ, ೧೭ನೇ ಮೇನ್
ಸರಸ್ವತೀಪುರಂ, ಮೈಸೂರು–೫೭೦೦೦೯

ಹೋಟೆಲಿನಲ್ಲಿ ತಂಗಿದ್ದವರೆಲ್ಲಾ ರಾತ್ರಿ ಊಟಕ್ಕೆ ಡೈನಿಂಗ್ ಹಾಲಿನಲ್ಲಿ ಸೇರಿದರು. ಅಂದು ಬೆಳಗ್ಗೆ ಹೋಟೆಲ್ಲಿಗೆ ಹೊಸದಾಗಿ ಬಂದ ತಂದೆ ಮಗಳು ನನ್ನ ಎದುರಿಗೆ ಕುಳಿತರು. ತಂದೆ ಎತ್ತರಕ್ಕೆ ತೆಳ್ಳಗಿದ್ದ. ಮಗಳು ಕುಳ್ಳಗೆ ಬಿಳಚಿಕೊಂಡಿದ್ದಳು. ಅವಳಿಗೆ ೨೦–೨೨ ವರ್ಷವಿರಬಹುದು. ಇಬ್ಬರ ಮುಖದಲ್ಲೂ ಗೆಲುವಿಲ್ಲ. ತಂದೆ ತನ್ನ ಬಲಗೈಯನ್ನು ಆಗಾಗ್ಗೆ ತನಗೆ ಅರಿವಿಲ್ಲದಂತೆ ಅಲುಗಾಡಿಸುತ್ತಿದ್ದ. ಮಗಳು ಎಡಗೈಗೆ ಕೈಚೀಲ ಹಾಕಿಕೊಂಡಿದ್ದಳು. ಅವಳಿಗೆ ಏನೋ ರೋಗವಿರಬಹುದು. ನಾನು ಅವರೊಡನೆ ಹೆಚ್ಚು ಮಾತನಾಡಲಿಲ್ಲ.

ಸಂಜೆ ನಾನು 'ವಾಕಿಂಗ್' ಹೊರಟೆ. ಆ ತಂದೆ, ಮಗಳು ಎದುರಿಗೆ ಬಂದರು. "ಕ್ಷಮಿಸಿ, ಇಲ್ಲೇ ಹತ್ತಿರದಲ್ಲಿ ಸುಂದರವಾದ ತಾಣ ಇದೆಯೇ ? ನಾವು ನಡೆದು ಹೋಗಿ ಸ್ವಲ್ಪ ಹೊತ್ತು ಅಲ್ಲಿದ್ದು ಬರೋಣ ಎಂದಿದ್ದೇವೆ" ಎಂದ ತಂದೆ.

"ಹತ್ತಿರದ ಬೆಟ್ಟದ ತಪ್ಪಲಿನಲ್ಲಿ ಬಿಸಿ ನೀರಿನ ಹೊಂಡವಿದೆ. ಸುತ್ತಲು ಹೂವು ಬಿಟ್ಟ ಮರ ಗಿಡಗಳು. ನಾನು ಅಲ್ಲಿಗೆ ಹೋಗುತ್ತಿದ್ದೇನೆ. ತಾವೂ ಬರಬಹುದು" ಎಂದೆ. "ಹೊಂಡದ ಬಿಸಿ ನೀರು ಆರೋಗ್ಯವರ್ಧಕ. ನಿಮ್ಮ ಬಲಗೈ ಆಗಾಗ್ಗೆ ಅಲುಗಾಡುತ್ತಿರುತ್ತದೆ. ಆ ನೀರಿನಿಂದ ಅನುಕೂಲವಾಗಬಹುದು" ಎಂದೂ ಹೇಳಿದೆ. ಅದಕ್ಕೆ ಅವನು, "ನನಗೆ ನರಕ್ಕೆ ಸಂಬಂಧಪಟ್ಟ ಯಾವ ಕಾಯಿಲೆಯು ಇಲ್ಲ. ನನ್ನ ಕೈ ಅದುರುವುದಕ್ಕೆ ನನಗಾದ ಒಂದು ಕಹಿ ಅನುಭವ" ಎಂದ.

"ಅದೇನು ?" ಎಂದು ಕೇಳಿದೆ.

"ನನ್ನ ಮಗಳನ್ನು ಜೀವವಿರುವಾಗಲೇ ಹೂತು ಹಾಕಿದ್ದೆ" ಎಂದು ಹೇಳುತ್ತಾ ಕಥೆ ಶುರುಮಾಡಿದ.

"ನನ್ನ ಮಗಳಿಗೆ ವಾಸಿಮಾಡಲಾಗದ ಹೃದಯದ ರೋಗ. ಒಂದು ಸಲ ಅವಳು ರಸ್ತೆಯಲ್ಲಿ ಬಿದ್ದು ಬಿಟ್ಟಳು. ಅವಳ ಮೈ ತಣ್ಣಗಾಯಿತು, ವೈದ್ಯರು ಪರೀಕ್ಷಿಸಿ

ಮೂಲ : ಮೊಪಾಸಾನ ಕಥೆಗಳು

ಅವಳು ಸತ್ತು ಹೋಗಿದ್ದಾಳೆ ಎಂದರು. ಎರಡು ರಾತ್ರಿ ಒಂದು ಹಗಲು ಹೆಣದ ಬಳಿಯಲ್ಲಿಯೇ ಕುಳಿತು ಅಳುತ್ತಿದ್ದೆ. ಅನಂತರ ಶವವನ್ನು ನಾನೇ ಶವದ ಪೆಟ್ಟಿಗೆಯಲ್ಲಿಟ್ಟು ಶ್ಮಶಾನಕ್ಕೆ ತೆಗೆದುಕೊಂಡು ಹೋದೆ. ನನ್ನ ಆಪ್ತ ಸೇವಕ ಪ್ರಾಸ್ಪೆರ್ ನನ್ನ ಜೊತೆ ಇದ್ದ. ಅವಳು ಹಾಕಿಕೊಂಡಿದ್ದ ಒಡವೆಗಳನ್ನು ತೆಗೆಯದೆ ಹಾಗೆಯೇ ಹೂಳಬೇಕೆಂದು ವಿನಂತಿಸಿಕೊಂಡೆ. ಅವರು ಹಾಗೆಯೇ ಮಾಡಿದರು.

ಮನೆಗೆ ಹಿಂತಿರುಗಿದೆ. ಖಾಲಿ ಮನೆ. ನನ್ನ ಪತ್ನಿ ಸತ್ತು ಆಗಲೇ ೪–೫ ವರ್ಷ ಕಳೆದಿತ್ತು. ದುಃಖದಿಂದ ಅರೆ ಹುಚ್ಚನಂತಾಗಿ ಕುರ್ಚಿಯಲ್ಲಿ ಒರಗಿದೆ. ನನಗೆ ಊಟ, ನೀರು ಬೇಕು ಅನಿಸಲಿಲ್ಲ.

ಮಧ್ಯರಾತ್ರಿ. ಹೊರ ಬಾಗಿಲನ್ನು ಯಾರೋ ಬಡಿದ ಶಬ್ದವಾಯಿತು. ದೀಪ ಹೊತ್ತಿಸಿ 'ಯಾರು?' ಎಂದೆ. ನನಗೆ ಭಯವಿಲ್ಲವೆಂದು ತೋರ್ಪಡಿಸಲು ಬಾಗಿಲು ತೆರೆದೆ. ಬಿಳಿ ಬಟ್ಟೆಯಲ್ಲಿ ವ್ಯಕ್ತಿಯೊಂದು ನಿಂತಿತ್ತು. ದೆವ್ವವೇ? ಒಂದು ಹೆಜ್ಜೆ ಹಿಂದೆ ಹೋಗಿ 'ಯಾರು?' ಎಂದೆ. 'ಅಪ್ಪ, ನಾನು ಗೊತ್ತಾಗಲಿಲ್ಲವೇ?' ಎನ್ನುತ್ತಾ ಆ ವ್ಯಕ್ತಿ ಒಳಬರಲು ಪ್ರಯತ್ನಿಸಿತು. ನಾನು ನನ್ನ ಬಲಗೈಯನ್ನು ಬೀಸಿದೆ. ಅದಕ್ಕೆ ಅವಳು, "ಏಕೆ, ಅಪ್ಪಾ? ಹೆದರಿಕೆ ಆಯ್ತಾ? ನಾನು ನಿಮ್ಮ ಮಗಳು, ಸತ್ತಿಲ್ಲ" ಎನ್ನುತ್ತಾ ನೂಕಿಕೊಂಡು ಒಳ ಬಂದು ಕುರ್ಚಿಯಲ್ಲಿ ಕುಳಿತಳು. ಅವಳ ಎಡಗೈ ಬೆರಳೊಂದು ಕತ್ತರಿಸಿ ಹೋಗಿತ್ತು. ಬಟ್ಟೆಯ ಮೇಲೆ ರಕ್ತದ ಗುರುತು. ನನ್ನ ಮಗಳು ಬದುಕಿ ಬಂದಿದ್ದಾಳೆ ಎಂದು ಮನಸ್ಸು ತಿಳಿಯಾಯಿತು. ಅವಳನ್ನು ಮಲಗುವ ಕೋಣೆಗೆ ಕರೆದುಕೊಂಡು ಹೋಗಿ ಮಂಚದ ಮೇಲೆ ಮಲಗಿಸಿ, ಆಹಾರ, ಪಾನೀಯ ತರಿಸಲು, ಆಳು ಪ್ರಾಸ್ಪೆರ್‌ನನ್ನು ಕರೆದೆ. ಅವನು ಬಂದ. ಮಗಳನ್ನು ನೋಡಿ ಅಚ್ಚರಿಗೊಂಡು ಮೂರ್ಛೆ ಹೋದ. ಅನಂತರ ಏಳಲಿಲ್ಲ, ಶ್ಮಶಾನದಲ್ಲಿ ಹೆಣದ ಪೆಟ್ಟಿಗೆ ತೆಗೆದು ಮಗಳ ಬೆರಳಲ್ಲಿದ್ದ ಬಿಗಿಯಾದ ವಜ್ರದುಂಗರ ಕದಿಯಲು ಅವಳ ಬೆರಳನ್ನು ಕತ್ತರಿಸಿ ಹಾಕಿದ್ದು ಅವನೇ ಎಂದು ಅನಂತರ ಗೊತ್ತಾಯಿತು. ಉಂಗುರ ಕದ್ದ ನಂತರ ಶವದ ಪೆಟ್ಟಿಗೆಯ ಬಾಗಿಲನ್ನು ಮುಚ್ಚದೆ ಅವನು ಹೊರಟು ಬಂದಿದ್ದ. ಮೂರ್ಛೆಯಲ್ಲಿದ್ದ ಮಗಳು ಎಚ್ಚರಗೊಂಡು ವಾಪಸ್ಸಾದುದು ನನ್ನ ಅದೃಷ್ಟ.

———

ಪ್ರೀತಿಯ ಪತ್ನಿ ಸತ್ತನಂತರ

ಪ್ರಿಯಳ ರೂಪು ಲಾವಣ್ಯ, ಜೇನಿನಂತಹ ಮಾತು, ಮಾದಕ ನೋಟ, ಮೃದು ಕೈಗಳಬಿಗಿ ಆಲಿಂಗನ ನನ್ನನ್ನು ಸುಖದ ಉತ್ತುಂಗಕ್ಕೆ ಕರೆದೊಯ್ದಿತ್ತು. ನಾನು ಅವಳನ್ನು ನನ್ನ ಹೃದಯಾಂತರಾಳದಿಂದ ಪ್ರೀತಿಸುತ್ತಿದ್ದೆ. ನನ್ನ ತನು ಮನ ಧನ

ಗಳನ್ನು ಅವಳಿಗೆ ಅರ್ಪಿಸಿದ್ದೆ. ಅವಳು ಬಳಿಯಲ್ಲಿದ್ದರೆ ನನಗೆ ಅದೇ ಸ್ವರ್ಗ. ನಮ್ಮಿಬ್ಬರ ಪ್ರೇಮ ಕಂಡು ಅಸೂಯೆ ಪಡದ ದಂಪತಿಗಳೇ ಇರಲಿಲ್ಲ.

ಒಂದು ವರ್ಷ ಸುಖದ ಸಾಗರದಲ್ಲಿ ವಿಹರಿಸಿದ್ದ ನನ್ನ ಪತ್ನಿ ಹಠಾತ್ತಾಗಿ ಸತ್ತುಹೋದಳು. ಒಂದು ಸಂಜೆ ಮನೆಗೆ ಬರುತ್ತಿರುವಾಗ ಮಳೆಯಲ್ಲಿ ನೆಂದಳು, ಮಾರನೇ ದಿನ ನೆಗಡಿ, ಕೆಮ್ಮು, ಜ್ವರ, ವೈದ್ಯರ ಔಷಧಿಯಿಂದ ಪ್ರಯೋಜನವಾಗಲಿಲ್ಲ. ಅವಳು ಕಡೇ ಉಸಿರು ಎಳೆದಳು.

ಶ್ಮಶಾನಕ್ಕೆ ಹೋಗಿ ಹೂತು ಬಂದೆ, ನನಗೆ ಜಗತ್ತು ಬೇಡವೆನಿಸಿತು. ನನ್ನ ಅಲ್ಲ ನಮ್ಮ ಮನೆ, ನಮ್ಮ ಮಲಗುವ ಕೊಠಡಿ, ನಮ್ಮ ಹಾಸಿಗೆ, ನಮ್ಮ ಫರ್ನೀಚರ್ ನೋಡಿದಾಗಲೆಲ್ಲಾ ಅವಳದೇ ಜ್ಞಾಪಕ. ದುಃಖ ತಡೆಯಲಾರದೆ ಆತ್ಮಹತ್ಯೆ ಮಾಡಿಕೊಳ್ಳುವ ಯೋಚನೆಯೂ ಬಂತು. ಆದರೆ ಅಷ್ಟು ಧೈರ್ಯ ನನ್ನಲ್ಲಿ ಉಳಿದಿರಲಿಲ್ಲ.

ಒಂದುವಾರ ಕಳೆಯಿತು. ನನ್ನ ಅರಿವಿಲ್ಲದಂತೆ ನಾನು ಶ್ಮಶಾನಕ್ಕೆ ಹೋದೆ. ಅವಳ ಗೋರಿಯ ಪಕ್ಕದಲ್ಲೇ ಬಹಳ ಹೊತ್ತು ಕುಳಿತಿದ್ದೆ. ಗೋರಿಕಲ್ಲಿನ ಮೇಲೆ ಬರೆಸಿದ್ದ ವಾಕ್ಯವನ್ನು ಪುನಃ ಪುನಃ ಓದಿದೆ—"ಪ್ರೀತಿಸಿ, ಪ್ರೀತಿಸಲ್ಪಟ್ಟು ಸ್ವರ್ಗವಾಸಿಯಾದ ವಿಕ್ಟೋರಿಯಾ" ಸಂಜೆಯಾಯಿತು, ಶ್ಮಶಾನಕ್ಕೆ ಬಂದವರೆಲ್ಲಾ ಹೊರಟು ಹೋದರೂ ನಾನೂ ಅಲ್ಲೇ ಉಳಿದೆ. ರಾತ್ರಿ ಸತ್ತ ಮಡದಿಯ ಜೊತೆ ಇರುವ ಆಸೆ.

ನಾನು ನನ್ನ ಪತ್ನಿಯ ಗೋರಿ ಕಲ್ಲಿನ ಪಕ್ಕದಲ್ಲಿ ಕುಳಿತು ನೋಡುತ್ತಿದ್ದೆ. ಗೋರಿ ಕಲ್ಲು ಚಲಿಸುವುದನ್ನು ಕಂಡೆ. ಸ್ವಲ್ಪ ಹೆದರಿಕೆಯಾಯಿತು. ಆದರೂ ಆಕಡೆಯೇ ನೋಡುತ್ತಿದ್ದೆ. ಒಳಗಿನಿಂದ ಅಸ್ಥಿಪಂಜರ ಎದ್ದುಬಂತು, ಕತ್ತಲೆಯಲ್ಲೂ ಅದು ಕಾಣಿಸುತ್ತಿತ್ತು. ಅದು ತನ್ನ ಕೈಗಳಿಂದ ಗೋರಿಕಲ್ಲಿನ ಮೇಲೆ ಬರೆದುದನ್ನು ಕೆರೆದು ಅಳಿಸಿ, ಹೀಗೆ ಬರೆದು ಪುನಃ ಒಳಗೆ ಸೇರಿಕೊಂಡಿತು.

"ಗಂಡನಿಗೆ ಮೋಸಮಾಡಿ ಪ್ರಿಯತಮನನ್ನು ಸಂಧಿಸಿ ಮನೆಗೆ ವಾಪಸಾಗುವಾಗ ನೆನೆದು ಕಾಯಿಲೆಯಾಗಿ ಸತ್ತ ವಿಕ್ಟೋರಿಯಾ ಈ ಗೋರಿಕಲ್ಲಿನ ಕೆಳಗಿದ್ದಾಳೆ."

ಜ್ಞಾನತಪ್ಪಿ ಬಿದ್ದಿದ್ದ ನನ್ನನ್ನು ಮಾರನೇ ಬೆಳಗ್ಗೆ ನನ್ನ ಸ್ನೇಹಿತರು ಕರೆದುಕೊಂಡು ಹೋಗಿ ಉಪಚರಿಸಿದರು.

———

ಭಾರತದಲ್ಲಿ ಉಚಿತ ಕಡ್ಡಾಯ ಪ್ರಾಥಮಿಕ ಶಿಕ್ಷಣ ಜಾರಿಗೆ ಬರಬೇಕು. ಈ ಗುರಿಯನ್ನು ಸಾಧಿಸಲು ಮಕ್ಕಳು ಮನಸ್ಸು, ಶರೀರ ಮತ್ತು ಆತ್ಮಶಕ್ತಿಗಳನ್ನು ಬೆಳಸಿಕೊಳ್ಳಲು ಸಾಧ್ಯವಾಗುವ, ಉಪಯುಕ್ತ ಉದ್ಯೋಗವನ್ನು ಅವರಿಗೆ ಕಲಿಸಬೇಕು.

—ಗಾಂಧೀಜಿ

ಕೆಲವು ರೀತಿಯ ಮೋಡಿ (ಮ್ಯಾಜಿಕ್)

ಕೆ. ಸುಕನ್ಯ ಭಟ್

'ಶ್ರೀ ಶಾಕಾಂಬರಿ' ಶಂಕರಮಠ ರಸ್ತೆ

ಧಾರವಾಡ–೫೮೦೦೦೪

ಒಂದು ಜೀವಂತ ದಂತಕತೆ—೩೦ ವರ್ಷದ "ಮ್ಯಾಕ್" ಅಮೇರಿಕಾದಲ್ಲೆ ಅತಿ ವಯಸ್ಸಾದ ಕುದುರೆಯೆಂದು ತಿಳಿಯಲ್ಪಟ್ಟಿದೆ.

"ಈ ಅದ್ಭುತ ಕುದುರೆಗೆ—ತೊಂದರೆಗೊಳಗಾದ ಮಕ್ಕಳಿಗೆ ಸಹಾಯಮಾಡುವಂತಹ ಒಂದು ದೈವದತ್ತವಾದ ಕೊಡುಗೆಯಿದೆ"—ಎನ್ನುತ್ತಾರೆ ಉಪಕಾರ ಪಡೆದ ಮಾತಾ-ಪಿತರು.

ಕಡು ಚಳಿಗಾಲದ ಒಂದು ಬೆಳಿಗ್ಗೆ ಮೈಕಲ್ ಡೇವೀಸ್, ಮ್ಯಾಕ್‌ನಿಗೆ (ಕುದುರೆ) ಆಹಾರ ಕೊಡಲು ಮತ್ತು ಬ್ರಷ್ ಮಾಡಲು ಕೊಟ್ಟಿಗೆಯ ಬಾಗಿಲನ್ನು ತೆರೆದಳು. ಸೂರ್ಯನ ಕಿರಣಗಳು ಕೊಟ್ಟಿಗೆಯೊಳಗೆ ತುಂಬಿದಾಗ, ಕುದುರೆಗೆ ಪೂರ್ಣ ಎಚ್ಚರವಾಗಿ, ಹೊರಗೆ ತಣ್ಣಗಿನ ಗಾಳಿಯಿದ್ದರೂ, ಮೂಗಿನ ಹೊಳ್ಳೆಗಳಿಂದ ಬಿಸಿಗಾಳಿ ಬಿಡುತ್ತಾ, ತನ್ನ ಸ್ಥಾನದಲ್ಲಿ ಕಾಯತೊಡಗಿತು. "ನಿನ್ನನ್ನು ನೋಡಲು ಬಹಳ ಚಿಕ್ಕ ಹುಡುಗಿ ಬರುತ್ತಾಳೆ. ಅವಳಿಗೆ ನಿಜವಾಗಿ ನಿನ್ನ ಸಹಾಯದ ಅಗತ್ಯವಿದೆ" ಎಂದು ಮೈಕೆಲ್ ಹೇಳಿದಳು.

ಅನಂತರ ತೆರೆಸಾ ಮತ್ತು ಜೆಫ್ ಫ್ರೆಷ್‌ಕಾರ್ನ್, ಅಮೇರಿಕಾದ ವೆಸ್ಟ್ ಮ್ಯಾನ್ಸ್‌ಫೀಲ್ಡ್‌ನಲ್ಲಿದ್ದ ಮೈಕೆಲ್‌ನ ಮನೆಯ ದಾರಿಯಲ್ಲಿ ಬಂದರು. ಅವರೊಡನೆ, ತನ್ನದೇ ಆದ ಲೋಕದೊಳಗೇ ಇರುತ್ತಿದ್ದ ನಾಲ್ಕು ವರ್ಷದ ಮಗಳು ಜೆಸ್ಸಿಕಾ ಕೂಡಾ ಇದ್ದಳು. ಡಿಲೇ ಆನ್‌ಸೆಟ್ ಆಟಿಸಂ ಎಂಬ ರೋಗದಿಂದ ಅವಳನ್ನು ಗುಣಪಡಿಸಲಿಕ್ಕಾಗಿರಲಿಲ್ಲವಾದ್ದರಿಂದ ಜೆಸ್ಸಿಕಾಳ ಪರಿಸ್ಥಿತಿ ಗಂಭೀರವಾಗಿತ್ತು. ಮೈಕೆಲ್‌ನ ಬಳಿಯೊಂದು ಸ್ಪೆಷಲ್ ಮುದಿ ಕುದುರೆ ಇದೆಯೆಂದು, ಯಾವಾಗ ಫ್ರೆಷ್‌ಕಾರ್ನ್ಸ್ ಕೇಳಿದರೊ, ಆವಾಗ ಅವರು ತಾವೂ ಒಂದು ಪ್ರಯತ್ನ ಮಾಡುವುದೆಂದು ತೀರ್ಮಾನಿಸಿದರು.

ಮ್ಯಾಕ್‌ನ ಕುತ್ತಿಗೆ ಸವರುತ್ತಾ, "ನೀನು ನಿಜವಾಗಿ ಒಂದು ರೀತಿಯ ಮ್ಯಾಜಿಕ್

ಮೂಲ: ಜನವರಿ ೯೯ರ ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾದ ಎ. ಪೊಗ್ಗಿನೊ ಅವರ 'ಸಮ್ ಸಾರ್ಟ್ ಆಫ್ ಮ್ಯಾಜಿಕ್' ಲೇಖನ.

ಮಾಡ್ತೀಯ" ಎಂದು ಮೈಕೆಲ್ ಯೋಚಿಸಿದಳು. ನಿಜವಾಗಿ ಆ ಕುದುರೆ ಹಲವಾರು ವರ್ಷಗಳಿಂದ, ಅವಳ ಬದುಕನ್ನು ಸೇರಿದಂತೆ, ಹಲವರ ಬದುಕನ್ನು ಸರಿಪಡಿಸಿತ್ತು.

ಹಿಂದೆ ೧೯೭೭ರಲ್ಲಿ ಮೈಕೆಲ್ ೩೨ ವರ್ಷದವಳಾಗಿದ್ದಾಗ, ಲ್ಯಾಟಿನ್ ಅಮೆರಿಕಾದ ಯೂನಿವರ್ಸಿಟಿಯಲ್ಲಿ ಲಿಟರೇಚರ್ ಕಲಿಸುತ್ತಿದ್ದಳು. ಚಿಕ್ಕ ಹುಡುಗಿಯಾದಾಗಿನಿಂದ ತಾನು ಕುದುರೆ ಸವಾರಿ ಇಷ್ಟಪಡುತ್ತಿದ್ದುದನ್ನು, ಎಷ್ಟೋ ಸಲ ಅವಳು ನೆನಪು ಮಾಡಿಕೊಳ್ಳುತ್ತಿದ್ದಳು. ಅದೇ ಊರಿನಲ್ಲಿದ್ದ, ಕುದುರೆ ಹಾರಿಸುವ ಪಾಠಗಳನ್ನು ಹೇಳಿಕೊಡುವ ಅಶ್ವಶಾಲೆಯನ್ನು ಸೇರಬೇಕೆಂದು ಒಂದು ದಿನ ನಿರ್ಧರಿಸಿದಳು. ಬಿಳಿ ಬಾಲ ಮತ್ತು ವಿಶಿಷ್ಟವಾದ ಬಿಳಿ ಬಣ್ಣದ ಕಾಲ್ಗಳಿರುವ ಸ್ಟಂಕ್ ಎಂಬ ಕರಿ ಬಣ್ಣದ ಸವಾರಿ ಕುದುರೆಯನ್ನು ಅವಳಿಗೆ ಕೊಡಲಾಯಿತು. ಪುನಃ ಪುನಃ ಮೈಕೆಲ್ ಕುದುರೆ ಸವಾರಿ ಮತ್ತು ಕುದುರೆ ಹಾರಿಸಲು ಬರತೊಡಗಿದಳು. ಒಂದು ಸಲವೂ ತಪ್ಪು ಮಾಡದೆ ಬೇಲಿ ಹಾರುವ ಅದರ ಕ್ರಮ ಅವಳಿಗೆ ಇಷ್ಟವಾಯಿತು. ಯಾವಾಗ ಆ ಕುದುರೆ ಮಾರಾಟಕ್ಕಿದೆಯೆಂದು ತಿಳಿಯಿತೊ.... ಆಗವಳಿಗೆ ಸಂತಸದೊಡನೆ ಅಚ್ಚರಿಯೂ ಆಗಿ—"ಇಷ್ಟು ಒಳ್ಳೆಯ ಕುದುರೆಯನ್ನು ಏತಕ್ಕೆ ಮಾರುತ್ತೀ" ಯೆಂದು ಯಜಮಾನನನ್ನು ಮೈಕೆಲ್ ಕೇಳಿದಳು.

"ನನ್ನ ಅಂದಾಜಿನ ಪ್ರಕಾರ ಈ ಕುದುರೆಗೆ ೧೭ ವರ್ಷ ಪ್ರಾಯವಾಗಿದೆ. ಇದಕ್ಕೊಂದು ಒಳ್ಳೆಯ ವಿಶ್ರಾಂತಿ ಗೃಹವನ್ನು ಹುಡುಕಬೇಕೆಂದಿದ್ದೇನೆ"—ಎಂದು ಯಜಮಾನ ವಿವರಿಸಿದನು.

೨೦ಕ್ಕಿಂತ ಹೆಚ್ಚು ವರ್ಷ ಕುದುರೆ ಬದುಕುವುದಿಲ್ಲವೆಂದು ತಿಳಿದಿದ್ದರೂ ಕೇವಲ $ ೧೫೦೦ನ್ನು ಯಜಮಾನ ಕೇಳುತ್ತಿರುವುದರಿಂದ ಅದೇನು ಹೆಚ್ಚು ಹಣವಲ್ಲವಲ್ಲ ಎಂದು ಯೋಚಿಸಿ ಮೈಕೆಲ್ ಕೊಂಡಳು.

ಕೂಡಲೇ ಅವಳು, ಅವನ ಗಂಭೀರ ಪ್ರಕೃತಿಯನ್ನು ನೋಡಿ ಮೆಕ್‌ಡ್ಗೋಗಲ್ ಎಂದು ಹೆಸರಿಟ್ಟಳು.

ನಡೆಯುವ ಚಮತ್ಕಾರ

ಮತ್ತೆ ಕೆಲವು ವರ್ಷಗಳು ಮ್ಯಾಕ್ ಅನಾಯಾಸವಾಗಿ ಹಾರುತ್ತಿದ್ದ. ಈ ಮಧ್ಯೆ ಮ್ಯಾಕನನ್ನು ನೆರೆಹೊರೆಯವರು ಗಮನಿಸುವುದು ಮೈಕೆಲ್‌ಳಿಗೆ ಅಚ್ಚರಿ ಎನಿಸಿತು. ಅವರೆಲ್ಲರಿಗೆ ಅಷ್ಟು ವಯಸ್ಸಾದರೂ ಇನ್ನೂ ಮ್ಯಾಕ್ ಓಡಾಡುವುದು ಆಶ್ಚರ್ಯ ಎನಿಸುತ್ತಿತ್ತು.

ಮ್ಯಾಕ್‌ನ ಹುಟ್ಟೂರನ್ನು ಮೈಕೆಲ್ ಕಂಡುಹಿಡಿದಳು. ಮ್ಯಾಕ್ ಹುಟ್ಟೂರಾಗಿದ್ದ ಮುದಿ ರ್ಯಾಂಚ್ ಕೆಲಸಗಾರನನ್ನು ಅವಳು ಮಾತನಾಡಿಸಿದಳು. ೧೯೪೮ರಲ್ಲಿ ಹುಟ್ಟಿದ ಮ್ಯಾಕ್‌ನ ಬಣ್ಣ ನೋಡಿ ಯಜಮಾನರು ಅದಕ್ಕೆ ಪೆರೇಡ್ ಕುದುರೆಯಾಗಲು ತರಬೇತಿ ಕೊಡಿಸಿದರು" ಎಂದು ಆ ಕೆಲಸಗಾರನು ತಿಳಿಸಿದ.

ಅದರ ಹೊಳೆಯುವ ಕಪ್ಪು ಮೈಬಣ್ಣ ಮತ್ತು ಬಿಳಿ ಬಾಲವನ್ನು ಕಂಡು ಯಜಮಾನರು ಅವನ್ನ ಮಿಸ್ಟರ್ ಟೈ ಮತ್ತು ಟೈಲ್ ಎಂದು ಕರೆದಿದ್ದರು. ಮಿಸ್ಟರಿಂಗ್

ವಿಂಡ್ಸ್, ಒನ್ ಫಾರ್ ದಿ ರೋಡ್, ಹೌಡಿನಿ ಮತ್ತು ಸ್ಕಂತ್ ಎಂಬೆಲ್ಲ ಹೆಸರುಗಳಿದ್ದವೆಂಬುದನ್ನು ಅಲ್ಲಿ ಮೈಕೆಲ್ ತಿಳಿದುಕೊಂಡಳು.

ಮ್ಯಾಕ್‌ನಿಗೆ ೩೦ ವರ್ಷವಾಗಿದೆ ಎಂಬುದು ಆಶ್ಚರ್ಯಕರವಾಗಿತ್ತು. ವೆಟರ್ನರಿ ಡಾಕ್ಟರನ ಹೇಳಿಕೆಯನ್ನು ಪಡೆಯಲಿಕ್ಕಾಗಿ ಡಾ|| ರೋನಾಲ್ಡ್ ರೀಗಲ್ ಎಂಬುವರನ್ನು ಮೈಕೆಲ್ ಕಂಡಳು. ಪೂರ್ಣ ಪರೀಕ್ಷೆ ನಡೆಸಿದ ಅನಂತರ ಅವರು ತನ್ನ ತಲೆ ಅಲ್ಲಾಡಿಸುತ್ತಾ, ವಿಜಲ್ ಹಾಕಿದರು. ನಾನು ಕಂಡ ಕುದುರೆಗಳಲ್ಲೇ ಇದು ಹೆಚ್ಚು ವಯಸ್ಸಾದದ್ದು ಎಂದವರು ಹೇಳಿದರು. "೩೦ ವರ್ಷವೆಂದು ಮ್ಯಾಕನಿಗೆ"—ಡಾಕ್ಟರ್ ಖಂಡಿತವಾಗಿ ಹೇಳಿದರು.

ಮ್ಯಾಕ್ ಇನ್ನೂ ನಿಂತಿದ್ದಾನಲ್ಲಾ ಎಂದು ಮೈಕೆಲ್ ಕೂಡ ಆಶ್ಚರ್ಯಪಟ್ಟಳು. ಪೆರೇಡ್ ಸಾಲಿನಲ್ಲಿ ನಿಲ್ಲುವಾಗ, "ಹೋ ಕುದುರೆ ಎಂದವಳು ಮ್ಯಾಕನನ್ನು ಸವಾರಿ ಮಾಡಿದಾಗ ಮಾಕ್ ಎಂದೂ ತಪ್ಪು ಮಾಡಲೇ ಇಲ್ಲ. ಮ್ಯಾಕ್ ಒಂದು ನಡೆದಾಡುವ ಅದ್ಭುತವಾಗಿತ್ತು.

೧೯೮೬ರಲ್ಲಿ ಸ್ವತಃ ಮೈಕೆಲ್‌ಳೇ ಅದ್ಭುತವನ್ನು ಕಂಡಳು. ಯೂನಿವರ್ಸಿಟಿ ಕೆಲಸವನ್ನವಳು ಕಳೆದುಕೊಂಡು ತೊಂದರೆಗೀಡಾದಳು. ಹಣದ ಮುಗ್ಗಟ್ಟಿನಿಂದಾಗಿ ಅವಳು ಮ್ಯಾಕನನ್ನು ಮಾರಲೇಬೇಕಾಯಿತು.

ಮಾರಲು, ಮೊದಲೆರಡು ಸಲ ಅವಳು ಪ್ರಯತ್ನಿಸಿದಾಗ, ಮ್ಯಾಕ್ ಖಾಯಿಲೆ ಬಿದ್ದನು. ಆದ್ದರಿಂದ ಹೊಸ ಯಜಮಾನ ಮ್ಯಾಕನನ್ನು ಹಿಂತಿರುಗಿಸಿದರು. ಹಿಂತಿರುಗಿದ ಕೂಡಲೇ ಮ್ಯಾಕ್ ಚೇತರಿಸಿಕೊಂಡಿದ್ದ.

ಮೂರನೇ ಸಲ ಕೊಳ್ಳುವಾತ, ಅವಳು ಮಾರುವ ಪ್ರಯತ್ನ ನಡೆಸಿದಾಗಲೇ $ ೩೦೦ಕ್ಕೆ ಚೆಕ್ ಕೊಟ್ಟಿದ್ದ. ಕೂಡಲೇ ಮ್ಯಾಕ್ ಕುಸಿದು ಬಿದ್ದುದನ್ನು ಕಂಡ ಹೊಸ ಯಜಮಾನ ಆಘಾತಗೊಂಡು—"ಏನಾಗಿದೆ ಅವನಿಗೆ" ಎಂದು ಕೇಳಿದ.

ಅವನು ಸಾಯುತ್ತಿದ್ದಾನೆಂದು ನನಗನಿಸುತ್ತಿದೆ"—ಎಂದು ಹೇಳಿದ ಮೈಕೆಲ್ ಚೆಕ್ ಹಿಂತಿರುಗಿಸಿದಳು.

ಈ ಸಲ ಮಾತ್ರ ನಿಜವಾಗಿ ಮ್ಯಾಕ್ ಅಸ್ವಸ್ಥನಾಗಿದ್ದ. ಅಸ್ತವ್ಯಸ್ತನಾಗಿ ಉಗ್ರಾಣದಲ್ಲಿ ನಡುಗುತ್ತಾ-ಬೆವರುತ್ತಾ, ಜ್ವರದಿಂದ ಕಷ್ಟಪಡುತ್ತಾ ಬಿದ್ದಿದ್ದ.

ಅನಂತರದ ಕೆಲವು ವಾರಗಳು ನೆರೆ-ಹೊರೆಯ ಮಕ್ಕಳು ಬಂದು ಅವನನ್ನು ನೋಡಿ-ಮಾತನಾಡಿಸಿ ಹೋಗುತ್ತಿದ್ದರು. ಒಬ್ಬ ಚಿಕ್ಕ ಹುಡುಗ ಮ್ಯಾಕನ ಕುತ್ತಿಗೆಯಲ್ಲಿನ ಕೂದಲನ್ನು ಬ್ರಶ್ ಮಾಡಿದ್ದ. ಒಬ್ಬಳು ಚಿಕ್ಕ ಹುಡುಗಿ ಮ್ಯಾಕನಿಗಾಗಿ ಓದಿದಳು. ಒಂದು ಮಧ್ಯಾಹ್ನ ಚಿಕ್ಕ ಮಕ್ಕಳು ತನ್ನನ್ನು ಕಾಣಲು ಬರುವುದು ತಿಳಿದು ತನ್ನ ಲಾಯದ ಕಿಟಕಿ ಬಳಿ ಮ್ಯಾಕ್ ಹೋಗಿ ನಿಂತಿದ್ದ ಮತ್ತು ಮೆತ್ತಗೆ 'ಕೆನೆ'ದಿದ್ದ. ಆಗಲೇ ಮೈಕೆಲ್‌ಗೆ ಮ್ಯಾಕ್ ಚೇತರಿಸಿಕೊಳ್ಳುವನೆಂದು ತಿಳಿದದ್ದು.

ಸಹನೆಯ ಧೀರ

ಮ್ಯಾಕ್ ಹುಷಾರಾದಂತೆ ಮೈಕೆಲ್‌ಳ ತೊಂದರೆಗಳು ಹೆಚ್ಚಾದವು. ಯೂನಿವರ್ಸಿಟಿ

ಯಲ್ಲಿ ಅವಳಿಗೆ ಬೇರೆ ಕೆಲಸ ಸಿಕ್ಕದೆ.... ಬಿಲ್ಲುಗಳನ್ನು ತುಂಬಲು ಪರದಾಡುತ್ತಿದ್ದಳು. ಒಂದು ದಿನ ಅವಳು ಕೆಲಸ ಮಾಡುತ್ತಿರುವಲ್ಲಿಗೆ ನೆರೆಮನೆಯಾತ ಫೋನ್ ಮಾಡಿ, ಅವಳ ಕೊಟ್ಟಿಗೆಗೆ ಬೆಂಕಿ ಬಿದ್ದ ವಿಚಾರ ಹೇಳಿದ್ದ. ಮನೆ ತಲುಪಿದಾಗ ಅಲ್ಲಿ ಅವಳಿಗೆ ಕಂಡದ್ದು ಒಂದು ರಾಶಿ ಇದ್ದಲು ಮಾತ್ರ. ಕೊಟ್ಟಿಗೆಯ ಹೊರಗೆ ಮಾತ್ರ ಬದುಕುಳಿದ ಮೂರು ಕುದುರೆಗಳ ಪೈಕಿ ಮ್ಯಾಕ್ ಕೂಡಾ ಸೇರಿತ್ತು.

“ಕೊಟ್ಟಿಗೆಯ ಬಾಗಿಲು ತೆಗೆದರೂ, ಎರಡು ಕುದುರೆಗಳು ಮತ್ತೆ ಒಳ ಬರಲು ಪ್ರಯತ್ನಿಸುತ್ತಿದ್ದವು. ಆಗ ಆ ಮುದಿ ಕುದುರೆ ಅವುಗಳನ್ನು ಒಳಬರಲು ಬಿಡದೆ ಹೊರಗೆ ಬಯಲಿಗೆ ಹೋಗುವಂತೆ ನೂಕುತ್ತಿತ್ತು” —ಎಂದು ಬೆಂಕಿ ನಂದಿಸಲು ಬಂದವ ಹೇಳಿದ್ದ.

ಬೆಂಕಿಯ ಆಘಾತದಿಂದಾಗಿ ನಿದ್ರೆ ಬಾರದೆ ಒಂದು ರಾತ್ರಿ ಮೈಕೆಲ್ ವಾಕಿಂಗ್ ಹೊರಟವಳು ನೆರೆಯವರು ಸಹಾಯ ಮಾಡಿ ಕಟ್ಟಿಕೊಟ್ಟಿದ್ದ ತಾತ್ಕಾಲಿಕ ಕೊಟ್ಟಿಗೆಯ ಬಳಿಯೇ ಹೋದಳು. ಯೋಚನಾಮಗ್ನಳಾಗಿ ಕುಳಿತವಳು ತಲೆ ಎತ್ತಿ ನೋಡಿದಾಗ ಮ್ಯಾಕ್ ಸದ್ದು ಮಾಡದೆ ಅವಳ ಬಳಿ ನಿಂತಿತ್ತು. “ನೀನೊಬ್ಬ ಹಳೆಯ ನಂಬಿಕಸ್ತ ಅಲ್ಲವೆ? ಎಂದಳು. “ನೀನೆಂದಿಗೂ ನನ್ನನ್ನು ಬಿಡಲಾರೆ” ಎಂದೂ ಹೇಳಿದಳು.

ನಕ್ಷತ್ರಗಳ ಕೆಳಗೆ ಮ್ಯಾಕನೊಡನೆ ಕುಳಿತವಳು ಯೋಚಿಸಿದಳು—ಅವನೂ ಎಷ್ಟು ತಾಳಿಕೊಂಡಿದ್ದಾನೆ ಎಂದು. ಮತ್ತೊಮ್ಮೆ ಅವನು ತೋರಿಸಿಕೊಟ್ಟಿದ್ದ ಜೀವನವೆಷ್ಟು ಅದ್ಭುತವಾಗಿರಬಲ್ಲುದೆಂದು!

೧೯೯೦ರಲ್ಲಿ ಮೈಕೆಲ್ ನ್ಯಾಚುರಲ್ ಹೆಲ್ತ್‌ನಲ್ಲಿ ಆಸಕ್ತಳಾಗಿದ್ದಾಗ, ಅವಳಿಗೆ ಬೇರೆ–ಬೇರೆ ತರವಲ್ಲಿ ಅಸ್ವಸ್ಥರಾಗಿದ್ದಂಥ ಮಕ್ಕಳೊಡನೆ ಕೆಲಸ ಮಾಡುವ ಅವಕಾಶ ದೊರೆಯಿತು. ಅವಳ ಬಳಿ ಇದ್ದ ಗಂಭೀರ ಮುದಿ ಕುದುರೆಯ ಬಗ್ಗೆ ಸುದ್ದಿ ಇತರ ತಾಯಿ-ತಂದೆಯರಿಗೆ ತಿಳಿದಾಗ, ಅವಳು ಅವರಿಗೆ ಮ್ಯಾಕನನ್ನು ನೋಡಲು ಮಕ್ಕಳನ್ನು ಕರೆತರುವಂತೆ ತಿಳಿಸಿ, ಆಹ್ವಾನಿಸಿದಳು. ಆಗಲೇ ಮ್ಯಾಕನ ಸ್ಪೆಷಲ್ ಕೌಶಲ್ಯ ಅರಳತೊಡಗಿತು.

ಆಲ್ಲೊಬ್ಬ ನಾಲ್ಕು ವರ್ಷದ ಸ್ಯಾಮ್ಯುಯೆಲ್ ಎಂಬುವನು ಹೈಪರ್ ಆಕ್ಟಿವಿಟಿಯಿಂದ ನರಳುತ್ತಿದ್ದ. ಪ್ರತಿಸರ್ತಿ ಮ್ಯಾಕ್‌ನನ್ನು ಕಂಡು ಬಂದನಂತರ ವಾರಗಟ್ಟಲೆ ಅವನು ಶಾಂತನಾಗಿರುವುದನ್ನು ಅವನ ತಂದೆ-ತಾಯಿಯರು ಕಂಡುಕೊಂಡರು ಮತ್ತು ಮೂರು ವರ್ಷದ ಪೇಟನ್ ಮ್ಯಾಕ್‌ನನ್ನು ನೋಡಲು ಬರತೊಡಗಿದನಂತರವೇ ಹಾಸಿಗೆಯಲ್ಲಿ ಮೂತ್ರ ಮಾಡುವುದನ್ನು ನಿಲ್ಲಿಸಿದ್ದ. “ನೀನು ಹೇಗೆ ನಿಲ್ಲಿಸಿದೆ?”—ಎಂದು ಆ ಚಿಕ್ಕ ಹುಡುಗನನ್ನು ಮೈಕೆಲ್ ಕೇಳಿದಾಗ—ಅವನು, ಮೂತ್ರ ಮಾಡಬೇಡವೆಂದು ಮ್ಯಾಕ್ ನನಗೆ ಹೇಳಿದಂತೆ ನಾನು ಕನಸು ಕಂಡೆ’—ಎಂದೆ ಹೆಮ್ಮೆಯಿಂದ ಹೇಳಿದ್ದ.

ಪ್ರಶಂಸನೀಯ ಕುದುರೆಯೇ

ಮ್ಯಾಕ್‌ನ ಅತ್ಯುತ್ತಮ ಮೋಡಿ (ಮ್ಯಾಜಿಕ್) ಸಫಲವಾದದ್ದು ಚಿಕ್ಕ ಜೆಸ್ಸಿಕ್‌ಳ ಮೇಲೆ, ೧೯೯೬ರಲ್ಲಿ ಮೊದಲ ಸಲ ತೆರೆಸಾ ಫ್ರೆಶ್‌ಕಾನ್ ಮೈಕೆಲ್‌ನನ್ನು

ಸಂಪರ್ಕಿಸಿದಾಗ ಅವಳು ಹತಾಶಳಾಗಿದ್ದಳು. ಮಾತನಾಡುವುದನ್ನೇ ನಿಲ್ಲಿಸಿದ್ದ ಜೆಸ್ಸಿಕ್‌ಳ ಕಣ್ಣುಗಳು ಯಾರನ್ನೂ ನೋಡುತ್ತಿರಲಿಲ್ಲ. ಅವಳು ಪ್ರತಿ ಬಾರಿ ಕೇವಲ ೨೦ ನಿಮಿಷ ಮಾತ್ರ ನಿದ್ರಿಸುತ್ತಿದ್ದಳು. ಮತ್ತು ಎಚ್ಚರವಾದ ಮೇಲೆ ಮೂಲೆಯಲ್ಲಿ ಕುಳಿತು ಅಂತರ್ಮುಖಿಯಾಗುತ್ತಿದ್ದಳು. ಜೆಸ್ಸಿಕಾಳ ಏಳು ವರ್ಷದ ಅಣ್ಣ ಅವಳನ್ನು ಅಪ್ಪಿಕೊಂಡಾಗ ಅವಳು ಸ್ಪಂದಿಸದೆ ಹಿಂದೆ ಸರಿದದ್ದು—ಅವಳ ತಂದೆ-ತಾಯಿಗೆ ಹೆಚ್ಚು ನೋವು ಕೊಡುವ ಸಂಗತಿಯಾಗಿದ್ದಿತು.

ಮ್ಯಾಕ್‌ನನ್ನ ನೋಡುವುದರಿಂದ ಏನಾದರೂ ಸಹಾಯವಾದೀತೆಂದು ಮೈಕೆಲ್ ಹೇಳಿದಳು. ಮೈಕೆಲ್‌ನ ಮನೆಗೆ ಬಂದ ನಂತರವೂ ಜೆಸ್ಸಿಕ್ ಎಲ್ಲಿಯೋ ನೋಡುತ್ತಿದ್ದಾಗ, "ಕೊಟ್ಟಿಗೆಯೊಳಗೆ ಬಾ" ಎಂದು ಮೈಕೆಲ್ ಕರೆದಳು. "ಅಲ್ಲಿ ನಿನ್ನನ್ನೊಬ್ಬರು ನೋಡಬೇಕೆಂದಿದ್ದಾರೆ" ಎಂದಳು.

ಮ್ಯಾಕ್‌ನ ದೇಹ ಸ್ವಲ್ಪ ಓಲಾಡಿದರೂ ಫ್ರೆಷ್‌ಕಾರ್ನ್ಸ್‌ಗೆ ಅವನು ಗಂಭೀರವಾಗಿಯೇ ಕಂಡ. "ಚೆಂದದ ಕುದುರೆಯ ಮೇಲೆ ನೀನು ಕೂಡುವೆಯೇನು"–ಎಂದು ತೆರೆಸಾ ಜೆಸಿತಾಳನ್ನು ಕೇಳಿದಳು. ಮ್ಯಾಕ್‌ನ ಪ್ರಭಾವಕ್ಕೆ ಜೆಸಿತಾ ಆಗಲೇ ಒಳಪಟ್ಟಿದ್ದರೂ ಅವಳ ತಂದೆ ಅವಳನ್ನೆತ್ತಿದಾಗ ಅವಳು ಒದ್ದಾಡಿದಳು.

ಮ್ಯಾಕ್‌ನೇ ನಿಧಾನವಾಗಿ ಜೆಸ್ಸಿಕಾಳ ಬಳಿ ಹೋಗಿ, ಅವಳು ತನ್ನನ್ನು ಮುದ್ದಿಸಲೆಂಬಂತೆ ತಲೆ ಕೆಳಹಾಕಿದ. ಏನನ್ನೂ ಗಮನಿಸದ ಆ ಪುಟ್ಟ ಹುಡುಗಿ ಅರಳಿದ ಕಣ್ಣುಗಳಿಂದ ಅವನತ್ತಲೇ ನೋಡಿದಳು. ಕುದುರೆಯ ಬೆನ್ನಮೇಲೆ ಆಗ ಅವಳ ತಂದೆ ಕೂರಿಸಿದರು. ಅವಳು ಆಗ ಸಂತಸದಿಂದ ಚೀರಿದರೂ ಮ್ಯಾಕ್ ಶಾಂತವಾಗಿದ್ದುಬಿಟ್ಟ.

ಇದ್ದಕ್ಕಿದ್ದಂತೆ ಅವಳು ಶಾಂತಳಾಗಿ ಅಚ್ಚರಿಯಿಂದ ಸುತ್ತ ನೋಡತೊಡಗಿದಳು. ಫ್ರೆಷ್‌ಕಾರ್ನ್ಸ್ ಅದುವರೆಗೂ ಕೇಳದಿದ್ದ ಶಬ್ದ ಆಗ ಕೇಳಿತು. ಒಂದು ಚಿಕ್ಕ ಸ್ವರ ಕೇಳಿತು "ಅದು ಏನು"—ಎಂದು.

ಆರು ತಿಂಗಳಿಂದ ಒಂದು ವಾಕ್ಯವೂ ಮಾತಾಡದಿದ್ದ ಚಿಕ್ಕ ಹುಡುಗಿಯಿಂದ ಆ ಸ್ವರ ಕೇಳಿ ಬಂದಿತ್ತು.

ಕಂಬನಿ ತುಂಬಿದ ತೆರೆಸಾ—"ಅದೊಂದು ಸುಂದರ ಕುದುರೆ" ಎಂದಳು. ಜೆಸ್ಸಿಕಾ ಕುದುರೆಯ ಬೆನ್ನ ಮೇಲೆ ಮಲಗಿ ಕೈಗಳನ್ನ ಅದರ ಎರಡು ಕಡೆ ಇಳಿಬಿಟ್ಟಳು. ಅದೇ ರಾತ್ರಿ, ಒಂದು ವರ್ಷದಿಂದ ಸರಿ ಮಲಗಿರದ ಅವಳು ಮೊದಲಬಾರಿಗೆ, ಮಧ್ಯೆ ಏಳದೆ ನಿದ್ರಿಸಿದಳು. ಮಾರನೇ ದಿನ ಮತ್ತೆರಡು ವಾಕ್ಯಗಳನ್ನು ಮಾತಾಡಿದಳು, ನೀರು ಕೇಳಿದಳು, ಅನಂತರ "ನಾನು ಆಡ ಬಯಸುತ್ತೇನೆ" ಎಂದು ಹೇಳಿದಳು.

ಜೆಸ್ಸಿಕಾ ಈಗ ತಿಂಗಳಿಗೊಮ್ಮೆ ಮ್ಯಾಕ್‌ನನ್ನು ನೋಡ ಬರುತ್ತಿದ್ದಾಳೆ ಜತೆಗೆ ಗುಣಮುಖಳಾಗುತ್ತಿದ್ದಾಳೆ. ಎಲ್ಲರೊಡನೆ ಸರಿಯಾಗಿ ವರ್ತಿಸುತ್ತಾಳೆ. ಇತ್ತೀಚೆಗೆ ಅವಳನ್ನು ಪರೀಕ್ಷಿಸಿದಾಗ ಅವಳು ಅವಳ

ವಯಸ್ಸಿಗನುಗುಣವಾಗಿ ಲೆಕ್ಕ ಮತ್ತು ಅಕ್ಷರಾಭ್ಯಾಸದಲ್ಲಿ ಮುಂದಿದ್ದಾಳೆಂದು ತಿಳಿಯಿತು.

ಒಂದು ದಿನವಂತೂ ಮ್ಯಾಕ್‌ನನ್ನು ಕಂಡಾಗ ಜೆಸ್ಸಿಕಾ ಹಾಡತೊಡಗಿದಳು. ಟೇಲರ್ ಹತ್ತಿರವಿದ್ದುದನ್ನು ಕಂಡು ಅವಳು, ಅವನನ್ನು ಆಡಲು ಬಾ ಎಂದು ಕರೆದಳು. ತಂಗಿಯನ್ನವನು ಆಗ ತಬ್ಬಿದಾಗ ಅವಳು ಹಿಂದಿನಂತೆ ಹಿಂಜರಿಯಲಿಲ್ಲ. ಜೆಸ್ಸಿಕಾಳೂ ಅವನನ್ನು ತಿರುಗಿ ತಬ್ಬಿದಳು.



ವ್ಯಕ್ತಿಯಲ್ಲಿರುವ ಉತ್ತಮ ಅಂಶವನ್ನು ಬೆಳಕಿಗೆ ತರುವುದೇ ನಿಜವಾದ ಶಿಕ್ಷಣ. ಮಾನವತ್ವದ ಪುಸ್ತಕಕ್ಕಿಂತ ಉತ್ತಮ ಪುಸ್ತಕ ಯಾವುದಿದೆ ?

ಪರಭಾಷೆಯ ಶಿಕ್ಷಣ ಮಾಧ್ಯಮ ನಮ್ಮ ಮಕ್ಕಳನ್ನು ಅವರದೇ ಆದ ಭೂಮಿಯಲ್ಲಿ ಪರದೇಶಿಗಳನ್ನಾಗಿ ಮಾಡಿದೆ.

ಕಷ್ಟದ ಜೀವನವೇ ಶಿಸ್ತನ್ನು ಕಲಿಸುವ ಶಾಲೆ

—ಗಾಂಧೀಜಿ

ತಗಡಿನ ಮನುಷ್ಯನಿಗಾಗಿ ಹುಡುಕಾಟ

ಭಾರತಿ ಎಸ್. ಭಟ್

೩೩೩, ೧೫ ನೇ ಮೈನ್
೩ ನೇ ಕ್ರಾಸ್, ಸರಸ್ವತೀಪುರಂ
ಮೈಸೂರು

ಜೋ ರೋಜರ್ಸ್ ಮತ್ತು ಆಕೆಯ ಇಬ್ಬರು ಮಕ್ಕಳು, ೧೭ ವರ್ಷದ ವಿಬೆಲ್ ಮತ್ತು ೧೪ ವರ್ಷದ ಕ್ರಿಸ್ಟಿ, ಅವತ್ತು ತುಂಬಾ ಸಂತೋಷದಲ್ಲಿ ಇದ್ದರು. ಯಾಕೆಂದರೆ, ಅವರು ಅಂದು ಅಮೆರಿಕದ ಓಹಿಯೋದಲ್ಲಿರುವ ತಮ್ಮ ೧೨೦ ಎಕ್ರೆ ಹಾಲಿನ ಫಾರ್ಮನ್ನು ಬಿಟ್ಟು ಒಂದು ವಾರದ ರಜೆಯಲ್ಲಿ ಪ್ಲೋರಿಡಾಕ್ಕೆ ಪ್ರವಾಸ ಹೋಗುವವರಿದ್ದರು. ಇದು ಅವರ ಪ್ರಥಮ ಪ್ರವಾಸವಾಗಿತ್ತು.

ಆ ದಿನ ಶುಕ್ರವಾರ ಮೇ ೧೯೮೬ ಆಗಿತ್ತು "ನಾವು ಆದಷ್ಟು ಬೇಗ ಹಿಂದಿರುಗಿ ಬರುತ್ತೇವೆ" ಎನ್ನುತ್ತಾ ಜೋ ಕಿಟಕಿಯ ಬಳಿ ಇದ್ದ ತನ್ನ ಪತಿಯನ್ನು ಚುಂಬಿಸಿದಳು. ಅವಳ ಪತಿ ಹಾಲ್ ಗೂ ಅವರ ಜತೆ ಹೋಗುವ ಆಸೆಯಿತ್ತು. ಆದರೆ ಅವನಿಗೆ ಫಾರ್ಮಿನಲ್ಲಿ ಗಿಡ ನೆಡಲಿಕ್ಕಿತ್ತು ಮತ್ತು ದಿನಕ್ಕೆರಡು ಬಾರಿ ೮೦ ದನಗಳ ಹಾಲು ಹಿಂಡುವ ಕೆಲಸವಿತ್ತು.

ಅವರು ಹೋಗುತ್ತಿರುವುದನ್ನು ನೋಡುತ್ತಾ ಹಾಲ್ "ನಿಮ್ಮ ಪ್ರಯಾಣ ಸುಖಕರವಾಗಲಿ" ಎಂದು ಹೇಳಿದ.

ಬಿಡುವಿಲ್ಲದ ಕೆಲಸದಿಂದ ಆಯಾಸವಾಗಿದ್ದರೂ ಜೋ ತನ್ನ ಮಕ್ಕಳ ಜೊತೆ ಪ್ರವಾಸ ಹೋಗುತ್ತಿರುವೆನೆಂದು ಸಂತೋಷದಿಂದಿದ್ದಳು. ಫಾರ್ಮಿನಲ್ಲಿ ಅವಳು ಮನೆಗೆಲಸ ಮಾಡುವುದಲ್ಲದೆ ಅವಳ ಗಂಡ ಹಾಲು ಕರೆಯುವಾಗ ಸಹಾಯ ಮಾಡುತ್ತಿದ್ದಳು ಮತ್ತು ರಾತ್ರಿ ಹೊತ್ತು ಒಂದು ಇನ್ಸೂರೆನ್ಸ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದಳು. ೩೬ ವರ್ಷದ ಜೋ ದಿನವಿಡೀ ಉಲ್ಲಾಸದಿಂದ ನಗುನಗುತ್ತಾ ಕೆಲಸ ಮಾಡುತ್ತಿದ್ದುದನ್ನು ನೋಡಿ ಹಾಲ್, "ಜೋ ನನಗಾಗಿ ಮೇಜಿನ ಕೆಳಗೂ ಕೆಲಸ ಮಾಡುತ್ತಾಳೆ" ಎಂದು ಹೇಳುತ್ತಿದ್ದ.

ಜೋಡು ಮಾರ್ಗದಲ್ಲಿ ಜೋ ಮತ್ತು ಅವಳ ಹುಡುಗಿಯರಿಬ್ಬರ ಕಾರು ಆಕಾಶದೆತ್ತರಕ್ಕೆ ಬೆಳೆದ ಮರಗಳನ್ನು ದಾಟುತ್ತಾ ಮುಂದೆ ಹೋಗುತ್ತಿತ್ತು. ೭೫ ನೇ ನಂಬರಿನ ಹೈವೇಗೆ ಬಂದ ಮೇಲೆ ಪ್ಲೋರಿಡಾದ ಬೀಚಿಗೆ ಸೀದಾ ಹೋಗುವ ರಸ್ತೆಯಿತ್ತು.

ಎರಡು ದಿನಗಳ ಪ್ರಯಾಣದನಂತರ ಅವರು ಜೇಕ್ಸನ್ ವಿಲ್ಲಾದ ಮೃಗಾಲಯವನ್ನು ತಲುಪಿದರು. ಅದನ್ನು ನೋಡಿದ

ಮೂಲ : ನವೆಂಬರ್ ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾದ ಥೋಮಸ್ ಫ್ರೆಂಚ್ ಅವರ ಲೇಖನ.

ಮೇಲೆ ಅವರು ಸಿಲ್ವರ್ ಸ್ಪ್ರಿಂಗ್ ಎಂಬಲ್ಲಿಗೆ ಹೋಗಿ ಅಲ್ಲಿ ಗಾಜಿನ ತಳವಿರುವ ದೋಣಿಯಲ್ಲಿ ಪ್ರವಾಸ ಮಾಡಿದರು. ಮಿಚೆಲ್ ಮತ್ತು ಕ್ರಿಸ್ಪಿ ಅಂತಹ ದೋಣಿಯಲ್ಲಿ ಅದುವರೆಗೆ ಒಮ್ಮೆಯೂ ಪ್ರವಾಸ ಮಾಡಿರಲಿಲ್ಲ.

ಮೇ ೩೧ನೇ ತಾರೀಕು ಬುಧವಾರ ಅವರು ಒರ್ಲ್ಯಾಂಡೋ ಎಂಬ ಊರನ್ನು ತಲುಪಿದರು. ಅಲ್ಲಿ ಸಮುದ್ರ ಪ್ರಪಂಚ, ಡಿಸ್ನಿಯ ಎಪ್ಕೋಪ್ ಕೇಂದ್ರ, ಎಂಜಿಎಂ ಸ್ಟುಡಿಯೋ ಮೊದಲಾದ ನೋಡಬೇಕಾದಂತಹ ಬೇರೆ ಬೇರೆ ಸ್ಥಳಗಳನ್ನು ನೋಡಿದರು. ಗುರುವಾರ ೧ನೇ ತಾರೀಕಿನಂದು ಟಂಪಾ ಎಂಬ ಊರಿಗೆ ಹೊರಟರು.

ಆ ದಿನ ೧೨.೩೦ ಕ್ಕೆ ಸ್ವಲ್ಪ ಮೊದಲು ಅವರು ಡೇಸ್ ಇನ್ ಎಂಬ ಹೋಟೆಲನ್ನು ತಲಪಿ, ಅಲ್ಲಿ ರೂಮು ಮಾಡಿದರು. ಅವರಿಗೆ ೨೫೧ನೇ ನಂಬರಿನ ಕೋಣೆ ಸಿಕ್ಕಿತು. ಕೋಣೆ ಸೇರಿದೊಡನೆ ಮಿಚೆಲ್ ತನ್ನ ಸ್ನೇಹಿತನಿಗೆ ಫೋನ್ ಮಾಡಿದಳು. "ನಾನು ಮತ್ತು ಕ್ರಿಸ್ಟಿ ಈಗ ಸಮುದ್ರದ ಕಿನಾರೆಗೆ ಹೋಗುತ್ತಿದ್ದೆವೆ,ಆದರೆ ಅಮ್ಮ ಸಮುದ್ರಕ್ಕೆ ಇಳಿಯಬಾರದೆಂದು ಹೇಳುತ್ತಿದ್ದಾಳೆ" ಎಂದು ತಿಳಿಸಿದಳು. ಅವರಿಗಿಬ್ಬರಿಗೂ ಈಜಾಡಲು ಬರುತ್ತಿರಲಿಲ್ಲ "ಅಂತೂ ನಾವಿಬ್ಬರೂ ಭಾರೀ ಖುಶಿಯಲ್ಲಿದ್ದೇವೆ. ಆದಷ್ಟು ಬೇಗ ಹಿಂದಿರುಗುತ್ತೇವೆ" ಎಂದು ತಿಳಿಸಿದಳು.

ಅವತ್ತು ಸಾಯಂಕಾಲ ಹೋಟೆಲಿನ ಹತ್ತಿರವಿದ್ದ ತಾಳೇಗಿಡಗಳ ಫೋಟೋ ತೆಗೆದರು. ಅನಂತರ, ಜೋ ಮತ್ತು ಅವಳ ಹುಡುಗಿಯರಿಬ್ಬರೂ ಹೋಟೆಲಿನಿಂದ ಹೊರ ಹೊರಟರು. ಒಂದು ಸಾಹಸ ಅವರನ್ನು ಕಾದಿತ್ತು.

ಇತ್ತ ಹಾಲಿನ ಫಾರ್ಮಿನಲ್ಲಿ ಜೋವಿನ ಪತಿ ಹಾಲ್ ಅವರ ಬರವನ್ನೇ ಕಾಯುತ್ತಿದ್ದ ಶನಿವಾರ ಖಂಡಿತಾ ಬರುವೆವೆಂದು ಜೋ ಹೇಳಿದ್ದನ್ನು ಆತ ನೆನಪಿಸಿಕೊಳ್ಳುತ್ತಿದ್ದ ಆದರೆ, ಸೋಮವಾರ ಮತ್ತು ಅನಂತರ ಮಂಗಳವಾರ ಬಂದು ಹೋದರೂ ಅವರ ಸುಳಿವಿಲ್ಲ ಇದರಿಂದ ಅವನಿಗೆ ಚಿಂತೆಯಾಗತೊಡಗಿತು. ರಾತ್ರಿ ಜೋ ಕೆಲಸ ಮಾಡುತ್ತಿದ್ದ ಆಫೀಸಿನಲ್ಲಿ ಅವರಿಗೇನಾದರೂ ಸುದ್ದಿ ತಿಳಿದಿದೆಯೋ ಎಂದು ವಿಚಾರಿಸಿದ ಅನಂತರ ಶರೀಫ್‌ನನ್ನೂ ಮತ್ತು ಪೋಲೀಸರನ್ನೂ ಕರೆದು ವಿಚಾರಿಸಿದ. ಆದರೆ ಯಾರಿಗೂ ಆ ಹೆಂಗಸರ ಸುದ್ದಿಯೇನೂ ಸಿಕಿರಲಿಲ್ಲ.

ಸ್ವರ್ಗದಿಂದ ನರಕಕ್ಕೆ

ಆದಿತ್ಯವಾರ ಜೂನ್ ೪ ರಂದು ಟಂಪಾ ಬೀಚಿನಲ್ಲಿ ನಾವಿಕರಿಗೆ ಒಂದು ಭಯಾನಕವಾದ ದೃಶ್ಯ ಕಾಣಸಿಕ್ಕಿತು. ಮುಖ ಕೆಳಗಾಗಿದ್ದು ಕೊಳೆಯತೊಡಗಿದ್ದ ಮೂವರು ಹೆಂಗಸರ ಶವಗಳು ಅವರಿಗಲ್ಲಿ ಕಾಣಿಸಿದುವು. ಅವು ಚಿಕ್ಕಪ್ರಾಯದ ಹೆಂಗಸರ ಶವಗಳಂತಿದ್ದುವು. ಕೂಡಲೇ ಅವರು ಈ ಸಂಗತಿಯನ್ನು ಸಮುದ್ರ ಕಿನಾರೆಯ ಸಂರಕ್ಷಕರಿಗೆ ತಿಳಿಸಿದರು.

ಆ ಶವಗಳನ್ನು ಹಗ್ಗಗಳಿಂದ ಕಟ್ಟಲಾಗಿತ್ತು ಮತ್ತು ಬಾಯಿಗೆ ಪ್ಲಾಸ್ಟರ್ ಅಂಟಿಸಲಾಗಿತ್ತು ಅಲ್ಲದೆ ನೀರಲ್ಲಿ ತೇಲಿ ಹೋಗದಂತೆ ಅವಕ್ಕೆ ಕೆಲವು ಕಾಂಕ್ರೀಟಿನ ತುಂಡುಗಳನ್ನು ಕಟ್ಟಲಾಗಿತ್ತು.

ಎಲ್ಲಾ ಶವಗಳೂ ಬೆತ್ತಲೆಯಾಗಿದ್ದುವು. ಲೈಂಗಿಕ ಕಾರಣಕ್ಕಾಗಿ ಇವರನ್ನು ಕೊಲೆ

ಮಾಡಿರಬೇಕೆಂದು ಇದರಿಂದ ಊಹಿಸಲು ಸಾಧ್ಯವಿತ್ತು. ಕೊಲೆಗಾರರನ್ನು ಪತ್ತೆ ಹಚ್ಚುವ ಮೊದಲು ಕೊಲೆಯಾಗಿರುವವರು ಯಾರೆಂಬುದನ್ನು ಪತ್ತೆಮಾಡಬೇಕಿತ್ತು.

ಜೂನ್ ೮ ನೇ ತಾರೀಕು ಗುರುವಾರ ಡೇಸ್ ಇನ್ ಹೋಟೆಲಿನ ಕೆಲಸದವಳು ೨೫೧ ನೇ ನಂಬ್ರದ ಕೋಣೆಯ ವಿಷಯವಾಗಿ ಮೇನೇಜರನಲ್ಲಿ ದೂರಿತ್ತಳು: ಅಲ್ಲಿಗೆ ಬಂದ ಅತಿಥಿಗಳು ಒಂದು ವಾರಕ್ಕಿಂತ ಮುಂಚೆಯೇ ಆ ಕೋಣೆಯನ್ನು ತೆಗೆದುಕೊಂಡಿದ್ದರಾದರೂ ಹಾಸುಗೆಗಳಲ್ಲಿ ಮಲಗಿದ ಹಾಗೆ ಕಾಣಿಸುತ್ತಿರಲಿಲ್ಲ. ಮತ್ತು ಸೋಪ್, ಟವೆಲ್ ಇತ್ಯಾದಿಗಳನ್ನು ಉಪಯೋಗಿಸಿದ ಹಾಗೆ ಕಾಣಿಸುತ್ತಿರಲಿಲ್ಲ.

ಪತ್ತೆದಾರರು ಆ ಕೋಣೆಯನ್ನು ಶೋಧಿಸಿದರು. ಸ್ನಾನದ ಕೋಣೆಯಲ್ಲಿ ಟೂತ್‌ಪೇಸ್ಟ್‌ನ ಟ್ಯೂಬಿನ ಮೇಲೆಕಾಣಿಸಿದ ಬೆರಳಚ್ಚುಗಳ ಆಧಾರದ ಮೆಲೆ ಆ ಕೋಣೆಯಲ್ಲಿದ್ದವರು ಕೊಲೆಯಾದ ಹೆಂಗಸರೇ ಎಂದು ನಿರ್ಧರಿಸಲಾಯಿತು.

ಹೋಟೆಲಿನ ರಿಸರ್ವೆಶನ್ ಪುಸ್ತಕದಲ್ಲಿ ನೋಡಿದಾಗ, ಆ ಕೋಣೆಯನ್ನು ಬಾಡಿಗೆಗೆ ತೆಗೆದುಕೊಂಡವರು ರೋಜರ್ಸ್ ಎಂಬ ಹೆಸರಿನವರು ಮತ್ತು ಓಹಾಯೋನಿಂದ ಬಂದವರು ಎಂದು ಗೊತ್ತಾಯಿತು. ಕೂಡಲೇ ಓಹಾಯೋಗೆ ಫೋನಿನಿಂದ ಸಂಪರ್ಕಿಸಲಾಯಿತು.

ವಿಷಯ ತಿಳಿದೊಡನೆ ಓಹಾಯೋದ ಶರೀಫ್ ಹಾಲಿನ ಫಾರ್ಮಿಗೆ ಹೋದ. ರೋಜರ್ಸ್ ಹಾಲ್‌ಗೆ ಬಹಳ ದುಃಖವಾಯಿತು ಮಾತ್ರವಲ್ಲ, ಕೋಪವೂ ಬಂತು. "ಯಾಕೆ ಎಲ್ಲರೂ ಸಾಯಬೇಕಿತ್ತು?" ಎಂದಾತ ತನ್ನ ಮಿತ್ರರೆದುರು ಬೊಬ್ಬಿರಿದ. ಆದರೆ ಚಿಂತಿಸಿಕೊಂಡು ಕುಳಿತುಕೊಳ್ಳಲೂ ಕೂಡ ಅವನಿಗೆ ಸಮಯವಿರಲಿಲ್ಲ. ಫಾರ್ಮಿನಲ್ಲಿ ಹಾಲು ಹಿಂಡುವ ಕೆಲಸವಿತ್ತು ಮತ್ತು ದನಗಳಿಗೆ ಹುಲ್ಲು ಮತ್ತು ಹಿಂಡಿ ಕೊಡುವ ಕೆಲಸವಿತ್ತು. ಅವನು ಕಣ್ಣೀರು ಸುರಿಸುತ್ತಾ ಕೆಲಸ ಮಾಡತೊಡಗಿದ.

ವಿಷಯ ಸಂಗ್ರಹಣೆ :

ಹೋಟೆಲಿನ ಕೋಣೆಯಲ್ಲಿ ಸಿಕ್ಕಿದ ಬೇರೆ ಬೇರೆ ವಸ್ತುಗಳ ಆಧಾರದ ಮೇಲೆ ಪತ್ತೆದಾರರು ಆ ಹೆಂಗಸರು ಕೊಲೆಯಾಗುವುದಕ್ಕೆ ಮೊದಲು ಏನೇನೆಲ್ಲ ಮಾಡಿದ್ದರು, ಎಲ್ಲಿಗೆಲ್ಲ ಹೋಗಿದ್ದರು ಎಂಬುದನ್ನು ತಿಳಿಯಲು ಪ್ರಯತ್ನಿಸಿದರು. ಕೋಣೆಯಲ್ಲಿ ಸಿಕ್ಕಿದ ಒಂದು ಫಿಲ್ಮನ್ನು ಡೆವಲಪ್ ಮಾಡಿದಾಗ ದೊರೆತ ಫೋಟೋಗಳ ಮೂಲಕ ಏನಾದರೂ ಪತ್ತೆ ಹಚ್ಚಲು ಸಾಧ್ಯವಾಗುವುದೋ ಎಂದು ನೋಡಿದರು.

ಆ ಹೆಂಗಸರ ೧೯೮೬ ನೇ ಇಸವಿಯ ಕಾರು ಅವರಿಗೆ ದೋಣಿಗಳನ್ನಿರಿಸುವ ಒಂದು ಜಾಗದಲ್ಲಿ ಕಾಣ ಸಿಕ್ಕಿತು. ಜೋ ಮತ್ತು ಅವಳ ಹುಡುಗಿಯರು ಆ ಕಾರನ್ನು ಅಲ್ಲಿಟ್ಟು ಅದಕ್ಕೆ ಬೀಗ ಹಾಕಿ ಹೋದನಂತರ ಯಾರೂ ಅದನ್ನು ಮುಟ್ಟಿದಂತಿರಲಿಲ್ಲ ಕಾರಿನೊಳಗೆ ಹೋಟೆಲಿಗೆ ಸೇರಿದ ಒಂದು ಕಾಗದದಲ್ಲಿ ದೋಣಿಗಳಿರುವಲ್ಲಿಗೆ ಬರುವ ದಾರಿಯನ್ನು ಗುರುತಿಸಲಾಗಿತ್ತು ಮತ್ತು ಜೋ ಬರೆದಿದ್ದ "ನೀಲಿ ವ್/ವ್ಲ್ಯ" ಎಂಬ ಸಂಕೇತವಿತ್ತು. ಇದಲ್ಲದೆ, ಇನ್ನೊಂದು ಕಾಗದದಲ್ಲಿ ಬೇರೆ ಯಾರೋ ಬರೆದಿದ್ದ ದೋಣಿಯಿರುವಲ್ಲಿಂದ

ಹೋಟೆಲಿಗೆ ಹೋಗಲು ಬೇಕಾಗುವ ನಕ್ಷೆಯಿತ್ತು.

ಈ ವಿಷಯದಲ್ಲಿ ಜಾಸ್ತಿ ಏನೂ ಪತ್ತೆ ಹಚ್ಚಲು ಸಾಧ್ಯವಾಗದಿದ್ದುದರಿಂದ, ಕೊಲೆಗಾರನನ್ನು ಪತ್ತೆಹಚ್ಚಲು ಉಪಯೋಗವಾಗುವಂತಹ ವಿಷಯವನ್ನು ತಿಳಿಸಿದವರಿಗೆ ೨೫ ಲಕ್ಷ ರೂಪಾಯಿಗಳ ಬಹುಮಾನ ಕೊಡುವುದಾಗಿ ಘೋಷಿಸಲಾಯಿತು. ಎಂಟುನೂರಕ್ಕಿಂತಲೂ ಜಾಸ್ತಿ ಜನ ಮುಂದೆ ಬಂದರು ಹೇಳಿಕೆ ನೀಡಿದರು.

ಅಕ್ಟೋಬರ್‌ನಲ್ಲಿ ಮೊತ್ತಮೊದಲಿಗೆ ಆ ಕೊಲೆಯ ಪತ್ತೆಯಲ್ಲಿ ತೊಡಗಿದವರಿಗೆ ಪತ್ತೆಗೆ ಸಹಾಯವಾಗಬಲ್ಲ ವಿಷಯವೊಂದು ಗಮನಕ್ಕೆ ಬಂತು. ರೋಜರ್ಸ್ ಹೆಂಗಸರು ಕೊಲೆಯಾಗುವುದಕ್ಕಿಂತ ಎರಡು ವಾರಗಳ ಹಿಂದೆ ಮೇ ೧೫ ನೇ ತಾರೀಕಿನಂದು ನೀಲಿ ಮತ್ತು ಬಿಳಿ ಬಣ್ಣದ ದೋಣಿಯಲ್ಲಿ ಒಬ್ಬನು ೨೪ ವರ್ಷದ ಕೆನಡಾ ಹುಡುಗಿಯೊಬ್ಬಳನ್ನು ರೇಪ್ ಮಾಡಿದುದಾಗಿ ಪೊಲೀಸ್ ವಾರ್ತೆಯಲ್ಲಿ ಬಂದುದನ್ನು ಪತ್ತೇದಾರಜಿಂಕೆಪ್ಪಲ್ ಗಮನಿಸಿದ.

ರೇಪ್ ಆಗಿದ್ದ ಹೆಂಗಸಿನೊಡನೆ ಮಾತನಾಡಲು ಕೆಪ್ಪಲ್ ಕೆನಡಾಕ್ಕೆ ಹೋದ. ಆಕೆ ತನ್ನ ಗೆಳತಿಯೊಂದಿಗೆ ಆ ದೋಣಿಯವನನ್ನು ಭೇಟಿಮಾಡಿ ಅವನೊಂದಿಗೆ ಮಾತನಾಡಿದುದಾಗಿ ತಿಳಿಸಿದಳು. ಅವನ ಮಾತು ಕೇಳುವಾಗ ಅವನೊಬ್ಬ ಒಳ್ಳೆಯ ಮನುಷ್ಯನೆಂದೂ ಮತ್ತು ಒಳ್ಳೆಯ ಮಾತುಗಾರನೆಂದೂ ಆಕೆಗೆ ಅನಿಸಿತ್ತು. ಆ ದೋಣಿಯವನು ತನ್ನಲ್ಲಿ ಒಂದು ಅಲ್ಯೂಮಿನಿಯಂ ಕಂಪನಿಯೂ ಇದೆಯೆಂದು ಹೇಳಿದ್ದ. ಅವರನ್ನು ಮದ್ಯರಾ ಎಂಬ ಬೀಚಿಗೆ ಸೂರ್ಯಾಸ್ತವನ್ನು ನೋಡಲು ಕರೆದುಕೊಂಡು ಹೋಗುವುದಾಗಿ ಆತ ಹೇಳಿದ್ದ. ಸೂರ್ಯಾಸ್ತ ನೀರಲ್ಲಿ ತುಂಬಾ ಚೆನ್ನಾಗಿ ಕಾಣಿಸುತ್ತದೆ, ಹಾಗಾಗಿ ಬರುವಾಗ ಒಂದು ಕೆಮರಾವನ್ನು ತರಲು ಮರೆಯಬೇಡಿ ಎಂದೂ ಕೂಡ ಆತ ಹೇಳಿದ್ದ.

ಮರುದಿವಸ ದೋಣಿವಿಹಾರಕ್ಕೆ ಆ ಹೆಂಗಸು ಒಬ್ಬಳೇ ಬಂದುದನ್ನು ನೋಡಿ ಆ ಮನುಷ್ಯನಿಗೆ ಸ್ವಲ್ಪ ಕಿರಿಕಿರಿಯಾಗಿತ್ತು. ಹಾಗಿದ್ದರೂ ಅವನು ಆಕೆಯನ್ನು ದೋಣಿಯಲ್ಲಿ ಕುಳ್ಳಿರಿಸಿಕೊಂಡು ಸ್ವಲ್ಪ ಸುತ್ತಾಡಿದ. ಕತ್ತಲೆಯಾಗುತ್ತಾ ಬಂದಂತೆ ಆ ಮನುಷ್ಯನ ಸ್ವಭಾವದಲ್ಲಿ ಬದಲಾವಣೆಯಾಗತೊಡಗಿತು. ಆತನು ತನ್ನೊಂದಿಗೆ ಸೇರುವಂತೆ ಒತ್ತಾಯಿಸತೊಡಗಿದ. ಅವಳು ಕಿರಿಚಲು ತೊಡಗಿದಾಗ ಕೊಲ್ಲುವುದಾಗಿ ಬೆದರಿಕೆ ಹಾಕಿ ಅವಳನ್ನು ರೇಪ್ ಮಾಡಿದ.

ಕೆಪ್ಪೆಲ್ ಅವಳ ಹತ್ತಿರ ಆ ಮನುಷ್ಯನ ಚಿತ್ರ ಬಿಡಿಸಲು ಹೇಳಿದ. ಅನಂತರ ಆ ಚಿತ್ರವನ್ನು ತೆಗೆದುಕೊಂಡು ಫ್ಲೋರಿಡಾಕ್ಕೆ ಹೋಗಿ ಅದನ್ನು ವೃತ್ತಪತ್ರಿಕೆಗಳಲ್ಲಿ ಹಾಕಿಸಿ ಟಿವಿಯಲ್ಲೂ ಕಾಣಿಸುವಂತೆ ಮಾಡಿದ.

ಅವನೇ ಇರಬಹುದೇ ?

ವೃತ್ತ ಪತ್ರಿಕೆಯಲ್ಲಿ ಬಂದ ಚಿತ್ರವನ್ನು ಜೋ ಅನ್ ಸ್ಟೆಫೀ ಎಂಬಾಕೆ ನೋಡಿದಳು. ಅವಳಿರುವ ಬೀದಿಯಲ್ಲೇ ವಾಸಿಸುವ ವ್ಯಕ್ತಿಯೊಬ್ಬನ ಹಾಗೆ ಆಕೆಗೆ ಆ ಚಿತ್ರ ಕಾಣಿಸಿತು. ಆತನ ಹತ್ತಿರ ಕಪ್ಪು ಮತ್ತು ಬಿಳಿ ಬಣ್ಣದ ಒಂದು ದೋಣಿಯೂ ಇತ್ತು. ಆಕೆ ಯಾವಾಗಲೂ ಸ್ಟೆಫಿಯೊಂದಿಗೆ

ಸ್ನೇಹ ಬೆಳೆಸಲು ಪ್ರಯತ್ನಿಸುತ್ತಿದ್ದ. ಆದರೆ ಯಾಕೋ ಸ್ಟೆಫಿಗೆ ಆತನನ್ನು ಕಂಡರೆ ಸಂಶಯವೇಳುತ್ತಿತ್ತು.

"ಅವನೇ ಇರಬೇಕು ಈತ" ಎಂದುಕೊಂಡಳಾಕೆ.

ಕೊಲೆಯಾಗಿ ಒಂದು ವರ್ಷ ಕಳೆದರೂ ಕೊಲೆಗಾರನ ಪತ್ತೆಯೇ ಆಗಲಿಲ್ಲ. ಆ ಸಮಯದಲ್ಲಿ ಗ್ಲೆನ್ ಮೂರ್ ಎಂಬಾತ ಹೊಸದಾಗಿ ಆ ಕೊಲೆಯ ಸಮಸ್ಯೆಯನ್ನು ಬಗೆಹರಿಸಲು ನಿಯುಕ್ತನಾದ. ಆತನಿಗೆ ಇಪ್ಪತ್ತು ವರ್ಷಗಳ ಅನುಭವವಿದ್ದಿತಾದರೂ ಕೊಲೆಯನ್ನು ಪತ್ತೆಹಚ್ಚುವುದರಲ್ಲಿ ಹೊಸಬನಾಗಿದ್ದ ಆದರೆ ಹಿಡಿದ ಕೆಲಸವನ್ನು ಮುಗಿಸದೆ ಬಿಡೆನೆಂಬ ಹಠ ಅವನಲ್ಲಿತ್ತು.

ಮೂರ್ ಮತ್ತು ಅವನ ಸಹಾಯಕರು ಕೊಲೆಗೆ ಸಂಬಂಧಿಸಿದ ವಸ್ತುಗಳನ್ನೆಲ್ಲ ಪರಿಶೀಲಿಸಿದರು. ಕೊಲೆಗಾರನ ಸಂಪೂರ್ಣ ಚಿತ್ರವೊಂದನ್ನು ಸಿದ್ಧಪಡಿಸಿದಾಗ, ಆತ ಇನ್ನೂ ಕೆಲವು ಕೊಲೆಗಳನ್ನು ಮಾಡುವ ಸಾಧ್ಯತೆಯಿದೆಯೆಂದು ಅವರಿಗೆ ಅನಿಸತೊಡಗಿತು. ಹೆಂಗಸರನ್ನು ತನ್ನ ಮಾತಿನ ಬಲದಿಂದ ಸ್ವಾಧೀನಪಡಿಸುವ ಶಕ್ತಿ ಅವನಿಗಿತ್ತು. ತನ್ನದೇ ದೋಣಿಯಿದ್ದ ಕಾರಣ ಆತ ಸ್ವತಂತ್ರವಾಗಿದ್ದ. ಅಲ್ಲದೆ ಅವನು ಮಾಡಿದ ಕೊಲೆ ಇಷ್ಟು ದಿನಗಳಾದರೂ ಪತ್ತೆಯಾಗಿಲ್ಲವಾದ ಕಾರಣ ಆತನಿಗೆ ಧೈರ್ಯ ಬಂದಿರಬಹುದು ಮತ್ತು ಇನ್ನೊಬ್ಬ ಹೆಂಗಸನ್ನು ಬಲೆಗೆ ಹಾಕಿಕೊಳ್ಳಲು ಪ್ರಯತ್ನಿಸಬಹುದು ಎಂದು ಅವರಿಗೆ ಅನಿಸಿತು.

ಕೊಲೆಗಾರನ ಸಹಿ

ಸಮಯ ಕಳೆದಂತೆಲ್ಲ ಕೊಲೆಯ ವಿಷಯದಲ್ಲಿ ಒತ್ತಡ ಜಾಸ್ತಿಯಾಗತೊಡಗಿತು. ಟೆಲಿವಿಷನ್‌ನಲ್ಲಿ ಮತ್ತೆರಡು ಬಾರಿ "ಪತ್ತೆಯಾಗದ ಕೊಲೆಗಳು" ಎಂಬ ಶೀರ್ಷಿಕೆಯಡಿಯಲ್ಲಿ ರೋಜರ್ಸ್ ಹೆಂಗಸರ ಕೊಲೆಯ ವಿಷಯ ಪ್ರಸ್ತಾವಿಸಿದರು. ಬಹುಮಾನದ ಮೊತ್ತವನ್ನು ೧೨.೫ ಲಕ್ಷ ರೂಪಾಯಿಗಳಿಗೆ ಏರಿಸಲಾಯಿತು.

ಕೊಲೆಯಾದ ಹೆಂಗಸರ ಕಾರಿನಲ್ಲಿ ಸಿಕ್ಕಿದ ಕಾಗದಗಳಲ್ಲಿ ದೋಣಿಯಿರುವಲ್ಲಿಂದ ಹೋಟೆಲಿಗೆ ಹೋಗುವ ದಾರಿಯನ್ನು ಸೂಚಿಸುವ ಕಾಗದವನ್ನು ಪುನಃ ಪರೀಕ್ಷಿಸಿದರು. ಅದನ್ನು ಬೇರೆ ಯಾರೋ ಬರೆದಿದ್ದು, ಅದರಲ್ಲಿರುವ ಕೆಲವು ಅಕ್ಷರಗಳು ಬರೆಹಗಾರನ ವ್ಯಕ್ತಿತ್ವವನ್ನು ಎತ್ತಿಹಿಡಿಯುವಂತೆ ಕಾಣಿಸುತ್ತಿದ್ದುವು. ಹಾಗಾಗಿ ಆ ಬರೆಹವನ್ನು ಮೂರ್ ದಿನಪತ್ರಿಕೆಗಳಲ್ಲಿ ಮುದ್ರಿಸುವಂತೆ ಮಾಡಿದ.

೧೯೯೨ನೇ ಇಸವಿ ಮೇ ೧೪ರಂದು ಜೋ ಆನ್ ಸ್ಟೆಫಿ ಅವತ್ತಿನ ದಿನಪತ್ರಿಕೆಯಲ್ಲಿ ಈ ಬರಹವನ್ನು ನೋಡಿದಳು. ಅವಳಿಗೆ ಏನು ಮಾಡಬೇಕೆಂದೇ ಗೊತ್ತಾಗಲಿಲ್ಲ. ಆಕೆ ಎರಡೂವರೆ ವರ್ಷಗಳಷ್ಟು ಹಿಂದೆಯೇ ತನ್ನ ಸಂಶಯವನ್ನು ಪೊಲೀಸರಿಗೆ ತಿಳಿಸಿದ್ದಳು.

ಅವಳು ಸೂಚಿಸಿದ ವ್ಯಕ್ತಿಯನ್ನು ಪೊಲೀಸರು ಅವತ್ತು ವಿಚಾರಿಸಿರಲಿಲ್ಲವಾಗಿದ್ದಲ್ಲಿ ಈಗ ಹೇಗೆ ವಿಚಾರಿಸಬಲ್ಲರು? ಆ ವ್ಯಕ್ತಿ ತನ್ನ ಹೆಂಡತಿ ಮತ್ತು ಮಗುವಿ

ನೊಂದಿಗೆ ಮನೆ ಬಿಟ್ಟು ಜೇರೆ ದಡೆಗೆ ಹೋಗಿ ಕೆಲವು ತಿಂಗಳುಗಳೇ ಕಳೆದಿದ್ದವು.

ಆತ ಅಲ್ಯೂಮಿನಿಯಂ ಕಂಟ್ರಾಕ್ಟರನಾಗಿದ್ದನೆಂದು ಆಕೆಗೆ ತಿಳಿದಿತ್ತು. ಆದರೆ ಆತನ ಆಫೀಸ್ ಎಲ್ಲಿದೆಯೆಂಬುದು ಆಕೆಗೆ ಮರೆತಿತ್ತು. ಅವಳ ಪಕ್ಕದ ಮನೆಯಲ್ಲಿ ವಾಸಿಸುತ್ತಿದ್ದುದು ಮೊಸೆಲ್ ಸ್ಮಿತ್ ಎಂಬಾಕೆ. ಅವಳೊಮ್ಮೆ ಆ ಮನುಷ್ಯನ ಮೂಲಕ ಯಾವುದೋ ಕೆಲಸ ಮಾಡಿಸಿಕೊಂಡಿದ್ದಳು. ಆ ಕೆಲಸಕ್ಕಾಗಿ ಬರೆದು ಕೊಟ್ಟ ಕೆಲಸದ ವಿವರಗಳ ಮತ್ತು ಹಣ ಸಿಕ್ಕಿದುದಕ್ಕೆ ಆತ ಕೊಟ್ಟ ರಶೀದಿ ಇವು ಆಕೆಯ ಬಳಿ ಇದ್ದುವು. ರಶೀದಿಯಲ್ಲಿ ಆತನ ಸಹಿಯಿತ್ತು. ಸ್ಟೈಫಿ ಅದನ್ನು ತೆಗೆದುಕೊಂಡು ಹೋಗಿ ಅವತ್ತಿನ ಪೇಪರಿನಲ್ಲಿ ಬಂದ ಬರಹದೊಂದಿಗೆ ಹೋಲಿಸಿ ನೋಡಿದಳು. ಅವೆರಡು ಬರಹಗಳು ಒಂದೇ ತರ ಇದ್ದುವು

ಸ್ಟೈಫಿ ಪೊಲೀಸರಿಗೆ ಫೋನ್ ಮಾಡಿದಳು ಮತ್ತು ಫ್ಯಾಕ್ಸ್ ಮೂಲಕ ಆ ಎರಡು ಬರಹಗಳನ್ನು ರವಾನಿಸಿದಳು. ಎರಡರಲ್ಲೂ ಓಬಾ ಚಾಂಡ್ಲರ್ ಎಂಬ ಆ ನೆರೆಮನೆಯಲ್ಲಿದ್ದ ವ್ಯಕ್ತಿಯ ಸಹಿಗಳಿದ್ದುವು.

ಕೊನೆಯ ಘಳಿಗೆ

ಆಗಸ್ಟ್ ಹದಿನೈದರ ಒಳಗೆ ಆ ಕೊಲೆಯ ಸಮಸ್ಯೆ ಬಗೆಹರಿಯದಿದ್ದಲ್ಲಿ ಅದರ ಪತ್ತೆಯನ್ನು ಮುಂದುವರಿಸಬೇಕೇ ಅಥವಾ ಬದಿಗಿರಿಸಬೇಕೇ ಎಂಬುದನ್ನು ನಿರ್ಧರಿಸುವುದೆಂದು ಪೊಲೀಸ್ ಮುಖ್ಯಸ್ಥ ಮೆಕ್‌ವೈನ್ಸ್ ಹೇಳಿದ.

ಕೊನೆಯ ಪ್ರಯತ್ನವೆಂದು ಶಂಪಾದ ಹತ್ತಿರ ಕೆಲವು ಕಡೆ ನೋಟೀಸುಗಳನ್ನು ಹಚ್ಚಲಾಯಿತು. ಅವರಲ್ಲಿ ಜೋ, ಮಿಚ್ಚೆಲ್ ಮತ್ತು ಕ್ರಿಸ್ಟಿ ಇವರ ಫೋಟೊಗಳನ್ನು ಹಾಕಿಸಲಾಯಿತು ಮತ್ತು ಅದರ ಕೆಳಗೆ "ರೋಜರ್ಸ್ ಕುಟುಂಬದವರನ್ನು ಯಾರು ಕೊಲೆ ಮಾಡಿದರು ? ಎಂಬುದಾಗಿ ಬರೆಸಲಾಯಿತು. ಅದರ ಕೆಳಗೆ ಸಹಾಯ ಮಾಡಿದವರಿಗೆ ಸಿಗಲಿರುವ ಬಹುಮಾನವನ್ನೂ ಮತ್ತು ಸಂಪರ್ಕಿಸಬಹುದಾದ ಫೋನ್ ನಂಬರನ್ನೂ ಹಾಕಿಸಲಾಯಿತು.

ಇದನ್ನು ನೋಡಿ ಸ್ಟೈಫಿಗೆ ಆಶ್ಚರ್ಯವಾಯಿತು.ಆಕೆ ತಿಳಿಸಿದ ಓಬಾ ಚಾಂಡ್ಲರನ ವಿಷಯ ಏನಾಯಿತು ? ಅವಳು ಫೋನ್ ಮಾಡಿ ಕೇಳಿದಾಗಲೆಲ್ಲ ಇನ್ನೂ ವಿಚಾರಣೆ ನಡೆಯುತ್ತಿದೆಯೆಂದು ಹೇಳುತ್ತಿದ್ದರು.

ಆಕೆ ಪುನಃ ಆ ಬರಹಗಳನ್ನು ಫ್ಯಾಕ್ಸ್ ಮೂಲಕ ಕಳುಹಿಸಿದಳು ಮತ್ತು ಕೂಡಲೇ ಅವನ್ನು ಪರೀಕ್ಷಿಸಿ ತನಗೆ ವಿಷಯ ತಿಳಿಸಬೇಕೆಂದು ಬೇರೊಂದು ಪತ್ರ ಬರೆದಳು.

ಈ ಸಲದ ಫ್ಯಾಕ್ಸ್ ಪತ್ತೇದಾರ ಮೂರ್‌ಸಿಗೆ ದೊರಕಿತು. ಅದನ್ನು ನೋಡಿದಾಗ ಆತನಿಗೆ ಅದು ಕೊಲೆಗಾರನ ಬರಹವೇ ಇರಬಹುದೆಂದು ಅನಿಸಿತು.

ಆ ದಿನ ಜುಲೈ ೩೧ ನೇ ತಾರೀಕು. ಪೊಲೀಸ್ ಮುಖ್ಯಸ್ಥನು ಕೊಟ್ಟ ಅವಧಿಗೆ ಇನ್ನು ಎರಡು ವಾರಗಳು ಮಾತ್ರ ಇದ್ದುವು. ಚಾಂಡ್ಲರನ ವಿಷಯವಾಗಿ ಹೆಚ್ಚಿನ ವಿಚಾರಣೆ ನಡೆಸಿದಾಗ ಆತನ ಮೇಲೆ ಹಲವಾರು ದೂರುಗಳಿರುವುದು ಕಂಡುಬಂತು. ಹೆಂಗಸರೊಡನೆ ಅತಿರೇಕದಿಂದ ವರ್ತಿಸಿ ಆತ

ಹಲವು ಬಾರಿ ಸಿಕ್ಕಿಬಿದ್ದಿದ್ದ. ಈಗ ಅವನಿಗೆ ೪೫ ವರ್ಷ. ಅವನು ಪೋರ್ಟ್ ಓರೇಂಜ್ ಎಂಬಲ್ಲಿ ತನ್ನ ಹೆಂಡತಿ ಮತ್ತು ಮೂರು ವರ್ಷದ ಮಗಳೊಂದಿಗೆ ವಾಸಿಸುತ್ತಿದ್ದ. ಆದರೆ ಇದಕ್ಕೆ ಮೊದಲು ಅವನು ಇದ್ದ ಮನೆ ಜೋ ಮತ್ತು ಆಕೆಯ ಹುಡುಗಿಯರು ಕಣ್ಮರೆಯಾದ ದೋಣಿಗಳನ್ನಿರಿಸುವ ಜಾಗದಿಂದ ಮೂರು ಕಿಲೋಮೀಟರಿನಷ್ಟು ದೂರವಿತ್ತಷ್ಟೆ. ಆ ಸಮಯದಲ್ಲಿ ಅವನ ಹತ್ತಿರ ೬.೫ ಮೀಟರ್ ಉದ್ದದ ನೀಲಿ ಮತ್ತು ಬಿಳಿ ಬಣ್ಣದ ದೋಣಿಯಿತ್ತೆಂದೂ ದಾಖಲೆಗಳಿದ್ದುವು.

ಕಟ್ಟಕಡೆಗೆ ಈತನೇ ಕೊಲೆ ಮಾಡಿದ ವ್ಯಕ್ತಿಯಿರಬೇಕೆಂದು ಮೂರ್ ನಿರ್ಧರಿಸಿದ. ಆದರೆ ಅದನ್ನು ಸಿದ್ಧಪಡಿಸುವ ಕೆಲಸವೊಂದು ಇನ್ನೂ ಬಾಕಿಯಿತ್ತು.

ಚಾಂಡ್ಲರನ ಮುಖ್ಯ ಕಸುಬು ಅಲ್ಯೂಮಿನಿಯಂ ಕಂಟ್ರಾಕ್ಟರನಾಗಿದ್ದುದಾದ ಕಾರಣ ಅವರು ಆತನಿಗೆ "ತಗಡಿನ ಮನುಷ್ಯ" ಎಂಬ ಹೆಸರು ಕೊಟ್ಟರು. ಅವನಂತಹ ಹೃದಯವಿಲ್ಲದ ಮನುಷ್ಯನಿಗೆ ಅದು ತಕ್ಕ ಹೆಸರಾಗಿತ್ತು.

ಡೇಸ್ ಇನ್ ಹೋಟೆಲಿಗೆ ಹೋಗಲು ನಕ್ಷೆಯನ್ನು ಬರೆದವನು ಚಾಂಡ್ಲರನೇ ಎಂದು ಸಿದ್ಧಪಡಿಸಲಾಯಿತು. ಇದಲ್ಲದೆ ಆ ನಕ್ಷೆಯಲ್ಲಿ ಒಂದು ಅಂಗೈ ಗುರುತು ಮೂಡಿಬಂದಿರುವುದೂ ಕೂಡ ಕಾಣಿಸಿತು. ಚಾಂಡ್ಲರನ ಫೋಟೋವನ್ನು ಇತರ ಬೇರೆ ಕೆಲವು ಫೋಟೋಗಳೊಂದಿಗೆ ರೇಪಿಗೆ ಗುರಿಯಾಗಿದ್ದ ಕನಡಾದ ಹೆಂಗಸಿಗೆ ತೋರಿಸಿದಾಗ ಆಕೆ ಕೂಡಲೇ ಅವನ ಫೋಟೋವನ್ನು ಗುರುತಿಸಿದಳು.

ಸಾಕಷ್ಟು ಪುರಾವೆಗಳು ಸಿಕ್ಕಿದುದರಿಂದ ಚಾಂಡ್ಲರನ್ನು ದಸ್ತಗಿರಿ ಮಾಡಲು ನಿರ್ಧರಿಸಿದರು. ಇದೇ ಸಮಯದಲ್ಲಿ ಚಾಂಡ್ಲರನ ಮಗಳು ೨೯ ವರ್ಷದ ಕ್ರಿಸ್ಟಿಲ್ ಮೈಸ್ ಎಂಬಾಕೆ ಮತ್ತು ಆಕೆಯ ಪತಿ ರಿಕ್ ಎಂಬಾತ ಪೋಲಿಸರಲ್ಲಿ ಕೆಲವು ಹೇಳಿಕೆಗಳನ್ನು ಕೊಟ್ಟರು. ಚಾಂಡ್ಲರ್ ತನ್ನ ದೋಣಿಯಲ್ಲಿ ಒಬ್ಬಿಬ್ಬರು ಹೆಂಗಸರನ್ನು ರೇಪ್ ಮಾಡಿದುದಾಗಿ ರಿಕ್‌ಗೆ ತಿಳಿಸಿದ್ದ.

ನ್ಯಾಯಕ್ಕೆ ಜಯ

೧೯೯೪ ಸೆಪ್ಟೆಂಬರ್‌ನಲ್ಲಿ ಚಾಂಡ್ಲರನ ವಿಚಾರಣೆ ಪ್ರಾರಂಭವಾಯಿತು. ಕೋರ್ಟಿನಲ್ಲಿ ಅದೇಕೋ ಆತನ ಮುಖದಲ್ಲಿ ವಿಚಿತ್ರವಾದ ನಗುವಿತ್ತು. ವಿಚಾರಣೆ ಶೀಘ್ರವಾಗಿ ಮುಂದುವರಿಯಿತು. ಚಾಂಡ್ಲರನ ಬಳಿ ಕೆಲಸ ಮಾಡುತ್ತಿದ್ದ ರೋಲಿನ್ಸ್ ಕೂಪರ್ ಹೇಳಿದ: "ರೋಜರ್ಸ್ ಹೆಂಗಸರು ಕಾಣೆಯಾದ ದಿವಸ ಚಾಂಡ್ಲರ್ ಬಹಳ ಅವಸರದಲ್ಲಿದ್ದ. ನನ್ನೊಂದಿಗೆ, 'ನನಗೆ ಮೂವರು ಹೆಂಗಸರನ್ನು ಭೇಟಿಯಾಗಲಿದೆ' ಎಂದು ಹೇಳಿದ್ದ."

ಕಟಕಟೆಯಲ್ಲಿ ನಿಂತ ಚಾಂಡ್ಲರ್ ತಾನು ರೋಜರ್ಸ್ ಹೆಂಗಸರನ್ನು ಭೇಟಿಯಾದುದು ನಿಜವೆಂದು ಒಪ್ಪಿದ. ಹೋಟೆಲಿಗೆ ಹೋಗಲು ಬೇಕಾಗುವ ನಕ್ಷೆಯನ್ನೂ ತಾನೇ ಬರೆದುದೆಂದು ಒಪ್ಪಿದ. ಆದರೆ ತಾನು ಅವರನ್ನು ತನ್ನ ದೋಣಿಯಲ್ಲಿ ಕರೆದುಕೊಂಡು ಹೋಗಿರಲಿಲ್ಲವೆಂದು ಹೇಳಿದ.

ರೋಜರ್ಸ್ ಹೆಂಗಸರು ಕೊಲೆಯಾದ ದಿವಸ ರಾತ್ರಿ ತಾನು ಒಬ್ಬನೇ ದೋಣಿಯಲ್ಲಿ ಮೀನು ಹಿಡಿಯಲು ಹೋಗಿದ್ದೆ. ಆಗ ದೋಣಿಯ ಡೀಸೆಲ್ ಪೈಪ್ ಒಡೆದು ೧೫೦ ಲೀಟರಿನಷ್ಟು ಡೀಸೆಲ್ ನೀರುಪಾಲಾಯಿತು. ಹಾಗಾಗಿ ತಾನು ಅಲ್ಲಿಯೇ ರಾತ್ರಿಯಿಡೀ ನಿಲ್ಲಬೇಕಾಯಿತು. ಬೆಳಗಿನ ಜಾವ ಇಬ್ಬರು ಬಂದು ತನ್ನನ್ನು ದಡಕ್ಕೆ ಕರೆತಂದರು ಎಂದು ಆವನು ಹೇಳಿದನು.

ಡೋಗ್ ಕ್ರೋ ಎಂಬ ಸರಕಾರೀ ವಕೀಲ ಈ ವಿಷಯದಲ್ಲಿ ಚಾಂಡ್ಲರನಿಗೆ ಹಲವಾರು ಪ್ರಶ್ನೆಗಳನ್ನು ಹಾಕಿದ. ಇದೇ ಸಮಯದಲ್ಲಿ ಆತನ ದೋಣಿಯನ್ನು ಪರೀಕ್ಷಿಸಲು ಇಂಜಿನಿಯರ್ ಒಬ್ಬನನ್ನು ಕಳುಹಿಸಲಾಯಿತು.

ಮಾರನೇ ದಿವಸ ಆ ಇಂಜಿನಿಯರ್ ಸಾಕ್ಷಿ ಹೇಳಿದ. ಚಾಂಡ್ಲರನ ದೋಣಿಯಲ್ಲಿ ಡೀಸೆಲ್ ಪೈಪು ಒಡೆದರೂ ಆತನಿಗೆ ಹಿಂದಕ್ಕೆ ಬರಲು ಬೇಕಾಗುವಷ್ಟು ಡೀಸೆಲ್ ಅದರಲ್ಲಿ ಉಳಿದಿರುತ್ತಿತ್ತೆಂದು ಆತ ಸಿದ್ಧ ಮಾಡಿದ.

ಮಾರನೆಯ ದಿವಸ ಸಾಯಂಕಾಲ ಕೋರ್ಟಿನ ಗುಮಾಸ್ತೆ ಮೂರು ಬೇರೆ ಬೇರೆ ತೀರ್ಪುಗಳನ್ನು ಓದಿ ಹೇಳಿದ. ಒಂದು ಜೋ ಎಂಬುವಳ ಕೊಲೆಗೆ ಸಂಬಂಧಿಸಿದ್ದು, ಒಂದು ಮಿಚೆಲ್ ಕೊಲೆಗೆ ಸಂಬಂಧಿಸಿದ್ದು ಮತ್ತು ಕ್ರಿಸ್ಟಿಯ ಕೊಲೆಗೆ ಸಂಬಂಧಿಸಿದ್ದು. ಪ್ರತಿಯೊಂದರಲ್ಲೂ ತೀರ್ಪು ಒಂದೇ ಆಗಿತ್ತು: ಚಾಂಡ್ಲರನೇ ಕೊಲೆಗಾರ.

ಜನರೆಲ್ಲಾ ಕೋರ್ಟನಿಂದ ಹೊರಗೆ ಬರುತ್ತಿದ್ದಂತೆ ಆಕಾಶ ಕಡುಕೆಂಪು, ಕೇಸರಿ ಮತ್ತು ನೇರಳೆ ಬಣ್ಣಗಳಿಂದ ತಳತಳಿಸುತ್ತಿತ್ತು. ಜೋ ಮತ್ತು ಆಕೆಯ ಹುಡುಗಿಯರನ್ನು ಬರಸೆಳೆದುದೂ ಇಂತಹದೇ ಬಣ್ಣಬಣ್ಣದ ಆಕಾಶ. ಅದೇ ಅವರ ಅಂತ್ಯಕ್ಕೂ ಕಾರಣವಾಯಿತು. ಅವರನ್ನು ಪ್ರೀತಿಸುತ್ತಿದ್ದವರನ್ನು ಈ ಆಕಾಶದ ನೆನಪು ಸಾಯುವವರೆಗೂ ಕಾಡದಿರದು. ಆದರೆ ಇಂತಹ ಆಕಾಶವನ್ನು ಚಾಂಡ್ಲರನು ಸ್ವತಂತ್ರನಾಗಿ ಎಂದಿಗೂ ಈ ಜನ್ಮದಲ್ಲಿ ಪುನಃ ನೋಡಲಾರನು.

ಪ್ರಪಂಚಕ್ಕೆ ಹೊಸದಾಗಿ ಹೇಳಲು ನನ್ನಲ್ಲಿ ಏನೂ ಇಲ್ಲ. ಸತ್ಯ ಮತ್ತು ಅಹಿಂಸೆಗಳು ಪರ್ವತಗಳಷ್ಟು ಹಳೆಯವು.

ದೇವರಿಗೆ ಭಯಪಡಬೇಕು. ಮನುಷ್ಯರಿಗೆ ಭಯಪಡಬಾರದು.

—ಗಾಂಧೀಜಿ

ಕ್ಯಾಲ್ಸಿಯಮ್ ಸೇವಿಸಿ, ಆರೋಗ್ಯ ರಕ್ಷಿಸಿಕೊಳ್ಳಿ

ಡಾ|| ಎಸ್. ಆರ್. ಪ್ರಸಾದ್

ಪ್ರಾಧ್ಯಾಪಕರು, ಸೂಕ್ಷ್ಮಜೀವಿ ವಿಜ್ಞಾನ ವಿಭಾಗ

ದೇವರಾಜ ಅರಸ್ ವೈದ್ಯಕೀಯ ಕಾಲೇಜು

ಟಮಕ, ಕೋಲಾರ–೫೬೩೧೦೧

ಕ್ಯಾಲ್ಸಿಯಮ್ ನಾವು ಪ್ರತಿನಿತ್ಯ ಸೇವಿಸುವ ಕೆಲವು ಆಹಾರ ಪದಾರ್ಥಗಳಲ್ಲಿ ಹೇರಳವಾಗಿ ಅಡಗಿರುವ ಖನಿಜಾಂಶ. ನಮ್ಮ ಹಲ್ಲುಗಳೂ, ಮೂಳೆಗಳೂ ಗಟ್ಟಿಯಾಗಿರಬೇಕಾದರೆ ನಾವು ಸಾಕಷ್ಟು ಕ್ಯಾಲ್ಸಿಯಮ್ ಸೇವಿಸಬೇಕೆಂಬುದು ಎಲ್ಲರಿಗೂ ತಿಳಿದ ಮಾತು. ನಮ್ಮ ದೇಹದಲ್ಲಿರುವ ಅಂಗಗಳು ಸಮರ್ಪಕವಾಗಿ ತಮ್ಮ ತಮ್ಮ ಕೆಲಸ ನಿರ್ವಹಿಸಲೂ ಕ್ಯಾಲ್ಸಿಯಮ್ ಬೇಕೇ ಬೇಕು.

ನಾವು ದಿನಂಪ್ರತಿ ಸೇವಿಸುವಂತಹ ಹಾಲು, ಮೊಸರು, ಬೆಲ್ಲ, ರಾಗಿ, ಹೂಕೋಸು, ಮೆಂತೇಸೊಪ್ಪು, ಅಗಸೇ ಸೊಪ್ಪು ದಂಟಿನ ಸೊಪ್ಪು, ಕೊಬ್ಬರಿ– ಇವುಗಳಲ್ಲೆಲ್ಲಾ ಕ್ಯಾಲ್ಸಿಯಮ್ ವಿಪುಲವಾಗಿದೆ. ಸೋಯಾಬೀನ್ಸ್‌ನಲ್ಲೂ ಅಷ್ಟೇ. ಮಾಂಸಾಹಾರಿಗಳು ಒಣ ಸೀಗಡಿ ಮತ್ತು ಬೂತಾಯಿ (ಸಾರ್ಡೀನ್) ಮೀನುಗಳನ್ನು ಸೇವಿಸುವುದರಿಂದ ಸಾಕಷ್ಟು ಕ್ಯಾಲಿಯಮ್ ಪಡೆಯಬಹುದು.

ಆಹಾರದಲ್ಲಿ ನಾವು ಸೇವಿಸಿದ ಕ್ಯಾಲ್ಸಿಯಮ್ ರಕ್ತವನ್ನು ಸೇರುತ್ತದೆ. ಆದರೆ ಆಹಾರದಿಂದ ಅದು ನಮಗೆ ದೊರಕಬೇಕಾದರೆ ಕ್ಯಾಲ್ಸಿಯಮ್ ಜೊತೆಗೆ ಸಾಕಷ್ಟು ಡಿ ಜೀವಸತ್ವವನ್ನೂ ಸೇವಿಸಬೇಕು. ನಮ್ಮ ನೂರು ಮಿಲಿ ಲೀಟರ್ ರಕ್ತದಲ್ಲಿ ಕ್ಯಾಲ್ಸಿಯಮ್ ಸಾಂದ್ರತೆ ೧೦ ಮಿಲಿಗ್ರಾಮ್‌ಗಳಷ್ಟಿರುತ್ತದೆ. ಮೂಳೆಗಳು ನಮ್ಮ ಶರೀರದ ಕ್ಯಾಲ್ಸಿಯಮ್ ನಿಕ್ಷೇಪಗಳಿದ್ದಂತೆ. ರಕ್ತದಲ್ಲಿ ಕ್ಯಾಲ್ಸಿಯಂ ಸಾಂದ್ರತೆ ಕಡಿಮೆ ಬಿದ್ದರೆ ಶರೀರ ಅದನ್ನು ತುಂಬಲು ಮೂಳೆಗಳಿಂದ ಕ್ಯಾಲ್ಸಿಯಮ್ಮನ್ನು ಹೊರತೆಗೆದು ತನ್ನ ಜೈವಿಕ ಕ್ರಿಯೆಗಳಿಗೆ ಬಳಸಿಕೊಳ್ಳುತ್ತದೆ. ಹಾಗೆ ಮೂಳೆಗಳಿಂದ ಕ್ಯಾಲ್ಸಿಯಮ್ ಹೊರತೆಗೆಯಬೇಕಾದರೆ ನಮ್ಮ ಪ್ಯಾರಾಥೈರಾಯಿಡ್ ಗಂತಿಗಳು ಹೆಚ್ಚು ಚೋದಕವನ್ನು ರಕ್ತದೊಳಗೆ ಪ್ರವಿಸಬೇಕು. ಜೊತೆಗೆ ಈ ಕಾರ್ಯಕ್ಕೆ ಡಿ ಜೀವಸತ್ವದ ಅವಶ್ಯಕತೆಯೂ ಇದೆ.

ಮೂಲ : ೧೯೯೦ ರ ಏಪ್ರಿಲ್ ತಿಂಗಳ ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾದ ಜೀನ್. ಇ. ಬ್ರಾಡೀ ಅವರ ಲೇಖನ.

ಪ್ರತಿನಿತ್ಯದ ಆಹಾರದಲ್ಲಿ ನಾವು ಕನಿಷ್ಠ ಪಕ್ಷ ೧೦೦೦ ಮಿಲಿಗ್ರಾಮ್ ಕ್ಯಾಲ್ಸಿಯಮ್ ಸೇವಿಸಬೇಕೆಂದು ತಜ್ಞರ ಸಲಹೆ. ಆದರೆ ನಮ್ಮಲ್ಲಿ ಎಷ್ಟೋ ಜನರ ದಿನದ ಊಟದಲ್ಲಿ ೫೦೦ ಮಿಲಿಗ್ರಾಮ್‌ಗಳಿಗಿಂತ ಕಡಿಮೆ ಕ್ಯಾಲ್ಸಿಯಮ್ ಇರುತ್ತದೆ-ಎಂದರೆ ಕಾಳಜಿ ವಹಿಸಬೇಕಾದ ಮಾತೇ ಸರಿ. ಇಂತಹ ಆಹಾರ ಸೇವಿಸುವವರ ರಕ್ತದಲ್ಲಿಯೂ ಕ್ಯಾಲ್ಸಿಯಮ್ ಸಾಂದ್ರತೆ ಕಡಿಮೆ ಇರುತ್ತದೆ. ಆಗ ದೇಹ ಮೂಳೆಗಳಿಂದ ಕ್ಯಾಲ್ಸಿಯಮ್ ಹೊರತೆಗೆದು ಬಳಸಲು ಪ್ರಾರಂಭಿಸುತ್ತದೆ. ನಾವು ನಿರಂತರವಾಗಿ ಕೆಲವು ಕಾಲ ಕ್ಯಾಲ್ಸಿಯಮ್ ಮತ್ತು ಡಿ ಜೀವಸತ್ವಗಳ ಕೊರತೆ ಇರುವ ಆಹಾರ ಸೇವಿಸುತ್ತಾ ಹೋದರೆ ನಮ್ಮ ಮೂಳೆಗಳು ಕ್ರಮೇಣ ಶಕ್ತಿಹೀನವಾಗುತ್ತವೆ. ಈಗೀಗ ನಡೆದ ಸಂಶೋಧನೆಗಳು ಅಧಿಕ ರಕ್ತದ ಒತ್ತಡ, ದೊಡ್ಡಕರುಳಿನ ಕ್ಯಾನ್ಸರ್, ಮತ್ತು ಹೆಂಗಸರಲ್ಲಿ ಮುಟ್ಟಿಗೆ ಮುಂಚಿತವಾಗಿ ಉಂಟಾಗುವ ಬಾಧೆ-ಇವುಗಳಲ್ಲಿಯೂ ಕ್ಯಾಲ್ಸಿಯಮ್ ಕೊರತೆಯ ಕೈವಾಡವಿರಬಹುದೆಂದು ಸೂಚಿಸಿವೆ.

ರಕ್ತದ ಒತ್ತಡ ನಿಯಂತ್ರಣದಲ್ಲಿ

ನಮ್ಮ ರಕ್ತದ ಒತ್ತಡದ ಮೇಲೆ ಕೆಲವು ಅಂಶಗಳು ಪ್ರಭಾವಬೀರುತ್ತವೆ. ಅವುಗಳಲ್ಲಿ ಅನುವಂಶೀಯತೆ, ದೇಹದ ತೂಕ, ಪ್ರತಿನಿತ್ಯದ ವ್ಯಾಯಾಮ, ಮತ್ತು ಕೆಲವರಲ್ಲಿ ಅವರು ಆಹಾರದಲ್ಲಿ ಸೇವಿಸುವ ಉಪ್ಪಿನ ಪ್ರಮಾಣ ಮುಖ್ಯವಾದವು. ಈ ಅಂಶಗಳ ಜೊತೆಗೆ ಆಹಾರದಲ್ಲಿ ನಾವು ಸೇವಿಸುವ ಕ್ಯಾಲ್ಸಿಯಮ್ ಸಹ ನಮ್ಮ ರಕ್ತದ ಒತ್ತಡದ ಮೇಲೆ ಪ್ರಭಾವ ಬೀರುತ್ತದೆ ಎಂದು ೧೯೮೦ರ ನಂತರದ ಕೆಲವು ಅಧ್ಯಯನಗಳು ತಿಳಿಸುತ್ತವೆ. ನಮಗೆ ವಯಸ್ಸು ಹೆಚ್ಚಿದಂತೆ ನಮ್ಮ ದೇಹದಲ್ಲಿ ಕ್ಯಾಲ್ಸಿಯಮ್ ಕಡಿಮೆಯಾಗುತ್ತಾ ಹೋಗುತ್ತದೆ. ಆದರೆ ನಮಗೆ ವಯಸ್ಸು ಹೆಚ್ಚಿದಂತೆ ನಮ್ಮ ರಕ್ತದ ಒತ್ತಡ ಹೆಚ್ಚುತ್ತಾ ಹೋಗುತ್ತದೆ. ಇವೆರಡೂ ಒಂದಕ್ಕೊಂದು ಸಂಬಂಧವಿರುವ ಪ್ರಕ್ರಿಯೆಗಳಿರಬಹುದು.

"ಸೇವಿಸುವ ಆಹಾರದ ಮೂಲಕ ರಕ್ತದ ಅಧಿಕ ಒತ್ತಡವನ್ನು ಹತೋಟಿಯಲ್ಲಿಡಬಹುದೇ ?" ಎಂಬ ಪ್ರಶ್ನೆಗೆ ಉತ್ತರ ಕಂಡುಕೊಳ್ಳಲು ೧೯೯೭ರಲ್ಲಿ ಅಮೆರಿಕೆಯಲ್ಲಿ ಒಂದು ಅಧ್ಯಯನವನ್ನು ಕೈಗೊಳ್ಳಲಾಯಿತು. ಅದರ ಫಲಿತಾಂಶದ ಪ್ರಕಾರ ಅಧಿಕ ರಕ್ತದ ಒತ್ತಡ ಇರುವವರು ದಿನಂಪ್ರತಿ ೧೨೦೦ ಮಿಲಿಗ್ರಾಮ್ ಕ್ಯಾಲ್ಸಿಯಮ್ ಕೊಡುವ ಕೊಬ್ಬು ಕಡಿಮೆ ಇರುವಂಥ ಹಾಲು, ಹೈನೋತ್ಪನ್ನಗಳು, ಹಣ್ಣು, ತರಕಾರಿ ಸೇವಿಸಿದಾಗ ಅವರ ರಕ್ತದ ಒತ್ತಡದಲ್ಲಿ ಇಳುವರಿ ಕಂಡುಬಂತು. ಅಮೆರಿಕನ್ ಹಾರ್ಟ್ ಅಸೋಸಿಯೇಷನ್ ಅಧಿಕ ರಕ್ತದ ಒತ್ತಡಕ್ಕೆ ಊಟದಲ್ಲಿ ಹೆಚ್ಚು ಉಪ್ಪು ಸೇವಿಸುವುದು ಕಾರಣವೆಂದು ಒತ್ತಿ ಹೇಳುತ್ತದೆ. ಆದರೆ ಹೀಗೆ ಊಟದಲ್ಲಿಯ ಉಪ್ಪು ದುಷ್ಪರಿಣಾಮ ಬೀರಬೇಕಾದರೆ, ಅಂತಹವರ ಆಹಾರದಲ್ಲಿಯ ಕ್ಯಾಲ್ಸಿಯಮ್ ಕೊರತೆಯೂ ಒಂದು ಕಾರಣವೆಂದು ಅಭಿಪ್ರಾಯ ಪಡುತ್ತದೆ.

ಅಧಿಕ ರಕ್ತ ಒತ್ತಡದ ವಿಷಯದಲ್ಲಿ ತಜ್ಞರಾದ ಡಾ॥ ಡೇವಿಡ್ ಮ್ಯಾಕ್‌ಕ್ಯಾರನ್

ಅವರ ಪ್ರಕಾರ ಹಾಲು ಮತ್ತು ಹೈನೋತ್ಪನ್ನಗಳನ್ನು ಹೆಚ್ಚಾಗಿ ಸೇವಿಸುವುದು ರಕ್ತದ ಒತ್ತಡವನ್ನು ತಗ್ಗಿಸುವಲ್ಲಿ ಕಡಿಮೆ ಉಪ್ಪನ್ನು ಸೇವಿಸುವುದಕ್ಕಿಂತ ಹೆಚ್ಚು ಪರಿಣಾಮಕಾರಿ.

"ನಮ್ಮಲ್ಲಿ ಎಷ್ಟೋ ಮಕ್ಕಳು ಅಗತ್ಯವಿರುವಷ್ಟು ತರಕಾರಿ ಮತ್ತು ಹಣ್ಣು ಹಂಪಲುಗಳನ್ನು ಸೇವಿಸುವುದೇ ಇಲ್ಲ, ಅಂತಹವರು ಆಹಾರದಲ್ಲಿ ಪೋಷಕಗಳ ಕೊರತೆಯನ್ನು ಚಿಕ್ಕಂದಿನಿಂದಲೇ ಅನುಭವಿಸುತ್ತಿರುತ್ತಾರೆ. ಈ ವಿಷಯದಲ್ಲಿ ಅವರ ತಂದೆ ತಾಯಿಗಳೂ, ಶಾಲೆಯ ಅಧ್ಯಾಪಕರೂ ಸಾಕಷ್ಟು ಎಚ್ಚರಿಕೆ ವಹಿಸಬೇಕು. ಇಲ್ಲದಿದ್ದರೆ ಅಂತಹ ಮಕ್ಕಳು ಬೆಳೆದು ದೊಡ್ಡವರಾದಮೇಲೆ ದೈಹಿಕವಾಗಿ ತೊಂದರೆಗಳನ್ನು ಅನುಭವಿಸಬೇಕಾಗುತ್ತದೆ" ಎಂದು ಡಾ॥ ಮ್ಯಾಕ್ ಕ್ಯಾರನ್ ಹೇಳುತ್ತಾರೆ.

ಕ್ಯಾನ್ಸರ್ ನಿರೋಧಕ

ನಮ್ಮ ಚರ್ಮದ ಮೇಲ್ಪದರ ಎಪಿಥೀಲಿಯಲ್ ಜೀವಕೋಶಗಳಿಂದಾಗಿದೆ. ಅಂತೆಯೇ ಇವು ದೇಹದ ಅನೇಕ ಅಂಗಗಳ ಒಳಗೆ, ಅವುಗಳ ಲೋಳಪೊರೆಯಲ್ಲೂ ಮೇಲ್ಪದರವಾಗಿದೆ. ಈ ಮೇಲ್ಪದರದ ಕೋಶಗಳು ಬೆಳೆದು, ಕೆಲವು ದಿನಗಳಲ್ಲಿ ಪ್ರಾಯಕ್ಕೆ ಬಂದ ಅನಂತರ ಮುದಿಯಾಗಿ, ಸತ್ತುಹೋಗುತ್ತವೆ. ಅವು ಸತ್ತುಹೋದ ಮೇಲೆ ಹೊಸದಾದ ಕೋಶಗಳು ಚಿಗುರಿ ಬೆಳೆದು ಅವುಗಳ ಸ್ಥಳ ತುಂಬುತ್ತವೆ. ಸ್ವಲ್ಪ ದಿನಗಳಲ್ಲಿ ಅವುಗಳಿಗೂ ಅಂತ್ಯ ಬರುತ್ತದೆ. ನಮ್ಮ ದೊಡ್ಡಕರುಳಿನ ಲೋಳೆಪೊರೆಯಲ್ಲೂ ಹಾಗೆಯೇ. ಎಪಿಥೀಲಿಯಲ್ ಕೋಶಗಳು ಹುಟ್ಟುತ್ತಿರುತ್ತವೆ, ಕೆಲವು ದಿನ ಇದ್ದು ಸಾವನ್ನಪ್ಪುತ್ತಿರುತ್ತವೆ. ಅಲ್ಲಿ ಕೋಶಗಳ ಈ ಸೃಷ್ಟಿ-ಸ್ಥಿತಿ-ವಿನಾಶದ ಚಕ್ರ ಪ್ರತಿ ೩ ರಿಂದ ೧೦ ದಿನಗಳಿಗೊಮ್ಮೆ ಆವರ್ತನವಾಗಿ, ಹೊಸದಾದ ಪದರ ಪದೇ ಪದೇ ಮೂಡುತ್ತಿರುತ್ತದೆ.

ಕೆಲವೊಮ್ಮೆ ಲೋಳೆಪೊರೆಯ ಈ ಕೋಶಗಳು ಎಂದಿಗಿಂತ ವೇಗವಾಗಿ, ಬೇಗಬೇಗನೆ, ವಿಭಜನೆ ಹೊಂದಲಾರಂಭಿಸುತ್ತವೆ. ಹುಟ್ಟಿದ ಎಳೆಯ ಕೋಶಗಳು ಪ್ರಾಯಕ್ಕೆ ಬರುವುದೂ ಇಲ್ಲ. ಈ ಲೋಳೆಪೊರೆಯ ಕೋಶಗಳ ವಿಕಾರ ವರ್ತನೆಗೂ ದೊಡ್ಡಕರುಳಿನ ಲೋಳೆಪೊರೆಯ ಕ್ಯಾನ್ಸರ್‌ಗೂ ಸಂಬಂಧವಿದೆಯೆಂದು ಈಗ ಸ್ಥಿರಪಟ್ಟಿದೆ.

ದೊಡ್ಡಕರುಳಿನ ಕ್ಯಾನ್ಸರ್ ಹೆಚ್ಚು ಕೊಬ್ಬಿನಿಂದ ಕೂಡಿದ ಆಹಾರ ಸೇವಿಸುವವರಲ್ಲಿ ಹೆಚ್ಚಾಗಿ ಕಂಡುಬಂದಿದೆ. ನಾವು ಕೊಬ್ಬಿನಂಶ ಹೆಚ್ಚಾಗಿರುವ ಆಹಾರ ಸೇವಿಸಿದಾಗ, ಕೊಬ್ಬನ್ನು ಜೀರ್ಣಿಸಲು ಪಿತ್ತಕೋಶ ಕರುಳಿನೊಳಕ್ಕೆ ಪಿತ್ತಆಮ್ಲಗಳನ್ನು ಸುರಿಯುತ್ತದೆ. ಮತ್ತೆ ಮತ್ತೆ ಹೀಗೆ ಸ್ರವಿಸಲ್ಪಟ್ಟ ಪಿತ್ತಆಮ್ಲಗಳೂ, ಕೊಬ್ಬಿನ ಆಮ್ಲಗಳೂ ಒಟ್ಟಿಗೆ ಸೇರಿ ದೊಡ್ಡಕರುಳಿನ ಲೋಳೆಪೊರೆಯ ಕೋಶಗಳಿಗೆ ಹಾನಿಯನ್ನುಂಟುಮಾಡುತ್ತವೆ. ಆಗ ಅವು ಮಿತಿಮೀರಿ ವಿಭಜನೆ ಹೊಂದಲು ಉಪಕ್ರಮಿಸುತ್ತವೆ. ಅವು ಹೀಗೆ ಎಡೆ-ತಡೆ ಇಲ್ಲದೆ ವಿಭಜನೆ ಹೊಂದಿದಾಗ ಕ್ಯಾನ್ಸರ್ ಬರುತ್ತದೆ ಎಂದು ಒಂದು ಸಿದ್ಧಾಂತ.

ಜೀರ್ಣಾಂಗ ತಜ್ಞರಾದ ಪೀಟರ್ ಹೋಲ್ಟ್ ಮತ್ತು ಅವರ ಸಹೋದ್ಯೋಗಿಗಳು ಜರ್ನಲ್ ಆಫ್ ಅಮೆರಿಕನ್ ಮೆಡಿಕಲ್ ಅಸೋಸಿಯೇಷನ್‌ನಲ್ಲಿ ತಾವು ನಡೆಸಿದ ಒಂದು ಅಧ್ಯಯನದ ಬಗ್ಗೆ ಹೋದ ವರ್ಷ ಒಂದು ಲೇಖನ ಪ್ರಕಟಿಸಿದ್ದರು. ಆದರಲ್ಲಿ ಅವರು ೭೦ ಜನ ದೊಡ್ಡಕರುಳಿನಲ್ಲಿ ಪಾಲಿಪ್ ಗಂತಿ ಬೆಳೆದ ರೋಗಿಗಳಿಗೆ ಶಸ್ತ್ರಕ್ರಿಯೆ ನಡೆಸಿ ಪಾಲಿಪ್ ಗಂತಿಗಳನ್ನು ತೆಗೆದು ಹಾಕಿದ್ದರು. ಪಾಲಿಪ್ ಗಂತಿಗಳು ಲೋಳೆಪೊರೆಯ ಮೇಲೆ ಬೆಳೆಯುತ್ತವೆ. ಕೆಲವು ತೊಟ್ಟಿನಿಂದ ಲೋಳೆಪೊರೆಗೆ ಅಂಟಿಕೊಂಡಿರುತ್ತದೆ. ಈ ಅಧ್ಯಯನದಲ್ಲಿ ಶಸ್ತ್ರಕ್ರಿಯೆ ಮಾಡಿಸಿಕೊಂಡ ರೋಗಿಗಳ ಪಾಲಿಪ್ ಗಂತಿಗಳು ಸೌಮ್ಯಸ್ವಭಾವದವುಗಳಿಂದಾಗಿದ್ದುವು. ಕ್ಯಾನ್ಸರ್ ಗಂತಿಗಳಾಗಿರಲಿಲ್ಲ. ಆದರೂ ಅವು ಕ್ಯಾನ್ಸರ್ ಆಗಿ ಮಾರ್ಪಟ್ಟು ಮತ್ತೆ ಬೆಳೆಯುವ ಸಾಧ್ಯತೆ ಇತ್ತು. ಆದರೆ ಶಸ್ತ್ರಕ್ರಿಯೆ ಮಾಡಿಸಿಕೊಂಡ ರೋಗಿಗಳ ಆಹಾರದಲ್ಲಿನ ಕ್ಯಾಲ್ಸಿಯಮ್ ೧೫೦೦ ಮಿಲಿಗ್ರಾಮ್ ತಲುಪುತ್ತಿದ್ದಂತೆಯೇ, ಅವರ ದೊಡ್ಡಕರುಳಿನ ಲೋಳೆಪೊರೆಯ ಕೋಶಗಳೆಲ್ಲ ಆರೋಗ್ಯ ಸ್ಥಿತಿಗೆ ಮರಳಿದ್ದುವು.

ಮುಟ್ಟಿನ ಮುಂಚಿತವಾಗಿ ಆಗುವ ಬಾಧೆಗೆ ಕ್ಯಾಲ್ಸಿಯಮ್ ಪರಿಹಾರ?

ಸಾಮಾನ್ಯವಾಗಿ ನೂರರಲ್ಲಿ ೪೦ ಜನ ಹೆಂಗಸರು ಮುಟ್ಟಾಗುವುದಕ್ಕೆ ಮುಂಚಿತವಾಗಿ ಬಹಳ ಬಾಧೆಪಡುತ್ತಾರೆ: ಆ ದಿನಗಳಲ್ಲಿ ಅವರ ಭಾವನೆಗಳಲ್ಲಿ ಸುಲಭವಾಗಿ ಏರು-ಪೇರುಗಳಾಗುತ್ತವೆ. ಕೆಲವರಿಗೆ ಅತಿಯಾದ ತಿನ್ನುವ ಬಯಕೆ. ಶರೀರದಲ್ಲಿ ಊತವೂ ಕಂಡುಬರಬಹುದು. ಶರೀರದಲ್ಲಿ ನೋವುಗಳು ಬೇರೆ ಪೀಡಿಸತೊಡಗುತ್ತವೆ. ಈ ಲಕ್ಷಣ ಸಮೂಹಕ್ಕೆ ಆಹಾರದಲ್ಲಿಯ ಕ್ಯಾಲ್ಸಿಯಮ್ ಕೊರತೆಯೇ ಕಾರಣವೆಂದು ನಿರ್ನಾಳಗ್ರಂಥಿ ವಿಶೇಷಜ್ಞಳಾದ ಸೂಸನ್ ಥೈಸ್-ಜೇಕಬ್ಸ್ ಅಭಿಪ್ರಾಯಪಡುತ್ತಾರೆ.

ಥೈಸ್-ಜೇಕಬ್ಸ್ ಮತ್ತು ಆಕೆಯ ಸಂಶೋಧನಾ ತಂಡದವರು ಮುಟ್ಟಿನ ಮುಂಚಿತ ದಿನಗಳ ಬಾಧೆಯಿಂದ ಬಳಲುತ್ತಿದ್ದ ೪೬೬ ಸ್ತ್ರೀಯರಿಗೆ ದಿನಕ್ಕೆ ೧೨೦೦ ಮಿಲಿಗ್ರಾಮ್ ಕ್ಯಾಲ್ಸಿಯಮ್ ಸೇವಿಸಲು ಕೊಟ್ಟರು. ಕ್ಯಾಲ್ಸಿಯಮ್ ಸೇವಿಸಿದ ಶೇಕಡಾ ೪೮ ರಷ್ಟು ಸ್ತ್ರೀಯರ ತೊಂದರೆಗಳು ಕಡಿಮೆಯಾದುವು. ಆದರೆ ಕ್ಯಾಲ್ಸಿಯಮ್ ಮಾತ್ರೆಗಳಂತೆಯೇ ಕಾಣುತ್ತಿದ್ದ ಕ್ಯಾಲ್ಸಿಯಮ್‌ರಹಿತ ನಕಲೀ ಮಾತ್ರೆಗಳನ್ನು (ಪ್ಲಾಸಿಬೋ) ಕ್ಯಾಲ್ಸಿಯಮ್ ಮಾತ್ರೆಗಳೆಂದೇ ನಂಬಿಕೊಂಡು ಸೇವಿಸಿದ ಅಂಥದ್ದೇ ಮುಟ್ಟಿನ ತೊಂದರೆ ಇದ್ದ ರೋಗಿಗಳಲ್ಲಿ ಶೇಕಡ ೩೦ ಜನರಿಗೆ ಮಾತ್ರ ತೊಂದರೆಗಳು ಕಡಿಮೆಯಾಗಿದ್ದುವು. ಅವರ ಅಧ್ಯಯನದಲ್ಲಿ ಕ್ಯಾಲ್ಸಿಯಮ್ ಸೇವಿಸಿದ ನಾಲ್ಕು ಗುಂಪುಗಳ ರೋಗಿಗಳಲ್ಲಿ ಒಂದು ಗುಂಪಿನ ಶೇಕಡಾ ೫೪ ರೋಗಿಗಳ ಶಾರೀರಿಕ ಯಾತನೆಗಳು ಬಹಳಷ್ಟು ಕಡಿಮೆಯಾಗಿದ್ದುವು. ಪ್ಲಾಸಿಬೋ ಸೇವಿಸಿದ್ದ ಶೇಕಡಾ ೧೫ ರಷ್ಟು ರೋಗಿಗಳ ಶಾರೀರಿಕ ಯಾತನೆಗಳು ಇನ್ನೂ ಅಧಿಕಗೊಂಡಿದ್ದುವು.

ಥೈಸ್-ಜೇಕಬ್ಸ್‌ರವರ ಪ್ರಕಾರ ಮುಟ್ಟಿನ ಮುಂಚಿತವಾಗಿ ಬಾಧೆಪಡುವ

ಹೆಂಗಸರಲ್ಲಿ ಕ್ಯಾಲ್ಸಿಯುವಮ್ ಕೊರತೆ ಇದ್ದರೂ ಅದು ರಕ್ತದ ಸಾಂದ್ರತೆಯಲ್ಲಿ ಅಥವಾ ಮೂತ್ರದಲ್ಲಿ ಕಂಡುಬರುವುದಿಲ್ಲ. ಶರೀರದಲ್ಲಿ ಕ್ಯಾಲ್ಸಿಯುವಮ್ ಕೊರತೆಯನ್ನು ಅರಿತು ಪ್ಯಾರಾಥೈರಾಯಿಡ್ ಗ್ರಂಥಿಗಳು ಹೆಚ್ಚು ಹೆಚ್ಚು ಚೋದಕವನ್ನು ರಕ್ತಕ್ಕೆ ಸುರಿದು ಮೂಳೆಗಳಿಂದ ಕ್ಯಾಲ್ಸಿಯುವಮ್ ಹೊರತೆಗೆದು ರಕ್ತಕ್ಕೆ ಹಾಕುತ್ತಿರುತ್ತವೆ. ಇದರಿಂದಲೇ ರೋಗಿಗಳ ರಕ್ತದಲ್ಲೂ, ಮೂತ್ರದಲ್ಲಿಯೂ ಕ್ಯಾಲ್ಸಿಯುವಮ್ ಕೊರತೆ ಕಂಡುಬರುವುದಿಲ್ಲ.

ಸ್ತ್ರೀಯರ ಆರೋಗ್ಯವನ್ನು ಕುರಿತಂತೆ ಮತ್ತು ಒಂದು ಅಂಶ ಥೈಸ್-ಜೇಕಬ್ಸ್ ಅವರನ್ನು ಆತಂಕಪಡುವಂತೆ ಮಾಡಿದೆ. ನಮ್ಮ ದೇಹದಲ್ಲಿಯ ಡಿ ಜೀವಸತ್ತ್ವದ ಶೇಕಡಾ ೮೦ರಷ್ಟು ಭಾಗ ಚರ್ಮದಲ್ಲಿ ನಾವು ಸೂರ್ಯನಿಗೆ ಮೈ ಒಡ್ಡಿದಾಗ, ಸೂರ್ಯಕಿರಣಗಳ ಪ್ರಭಾವದಿಂದ ಸಂಯೋಜಿತವಾಗುತ್ತದೆ. ಆದರೆ ಈಗೀಗ ಎಷ್ಟೋ ತರುಣಿಯರು ಸೂರ್ಯನ ಕಿರಣಗಳ ಸಂಪರ್ಕಕ್ಕೆ ಬರುವುದನ್ನೇ ನಿರ್ಲಕ್ಷಿಸುತ್ತಿದ್ದಾರೆ. ಇದರಿಂದ ಅವರ ಶರೀರದಲ್ಲಿ ಡಿ ಜೀವಸತ್ತ್ವದ ತೀವ್ರ ಕೊರತೆ ಇರಬಹುದಾಗಿದೆ.

ತರಕಾರಿ, ಸೊಪ್ಪು, ಸೋಯಾಬೀನ್, ರಾಗಿ, ಹಾಲು ಮತ್ತು ಹೈನೋತ್ಪನ್ನಗಳಲ್ಲಿ ಯಥೇಚ್ಛವಾಗಿ ದೊರಕುವ ಕ್ಯಾಲ್ಸಿಯುವಮ್ ನಾವು ಸಾಕಷ್ಟು ಪ್ರಮಾಣದಲ್ಲಿ ಕಾಳಜಿ ವಹಿಸಿ ಸೇವಿಸಬೇಕು. ಹೀಗೆ ಸುಲಭಲಭ್ಯವಾದ ಆಹಾರಾಂಶವನ್ನು ಸೇವಿಸದೇ ನಿರ್ಲಕ್ಷ್ಯಮಾಡಿ ಆರೋಗ್ಯವನ್ನು ಕಳೆದುಕೊಂಡರೆ ತಪ್ಪು ನಮ್ಮದೇ ಅಲ್ಲವೇ?

ನಮ್ಮ ಆಹಾರದಲ್ಲಿ ಕೆಲವು ಅಧಿಕ ಕ್ಯಾಲ್ಸಿಯಮ್‌ನಿಂದ ಕೂಡಿರುವ ಪದಾರ್ಥಗಳು

		ಕ್ಯಾಲ್ಸಿಯಂ (ಮಿಲಿಗ್ರಾಂಗಳಲ್ಲಿ)
ಹಸುವಿನ ಹಾಲು	೧ ಕಪ್	೨೭೦
ಎಮ್ಮೆ ಹಾಲು	೧ ಕಪ್	೪೭೨
ಮೊಸರು	೧ ಕಪ್	೨೭೦ ರಿಂದ ೪೭೨
ಅಗಸೇಸೊಪ್ಪಿನ ಪಲ್ಯ	೧ ಸೌಟನಷ್ಟು (೧೦೦ ಗ್ರಾಂ)	೧೧೩೦
ನುಗ್ಗೇಸೊಪ್ಪಿನ ಪಲ್ಯ	,,	೮೧೦
ದಂಟಿನಸೊಪ್ಪಿನ ಪಲ್ಯ	,,	೪೦೦
ಮೆಂತೇಸೊಪ್ಪಿನ ಪಲ್ಯ	,,	೩೯೫
ರಾಗಿ	೧೦೦ ಗ್ರಾಮ್	೩೩೦
ಕೊಬ್ಬರಿ (ಒಣಗಿದ್ದು)	,,	೪೦೦
ಎಳ್ಳು	,,	೧೪೫೦
ಒಣ ಮೀನು	,,	೧೮೦೦

ಬೆಲೆಯೇರಿಕೆ ತಂದ ಖುಶಿ

ಡಾ|| ಟಿ. ಶ್ರೀವೆಂಕಟರಮಣ
ಬೆಂಗಳೂರು ವಿಶ್ವವಿದ್ಯಾನಿಲಯ
ಬೆಂಗಳೂರು–೫೬೦೦೫೬

ನಿತ್ಯವೂ ಬೆಳಗಿನ ಚಹ ಸವಿಯುತ್ತ ಅಂದಿನ ಪತ್ರಿಕೆಯನ್ನು ಓದುವುದು ನನ್ನ ಪರಿಪಾಠ. ಇದಕ್ಕೆ ಕಾರಣವಿಷ್ಟೆ. ಕಣ್ಣಾಡಿಸಿದಲ್ಲಿ ಕಂಡುಬರುವ ಸುದ್ದಿಯ ಕಹಿ ಇಳಿಸಲು ಚಹದ ಸಿಹಿ ಸಹಾಯಕ. ಆದರೆ ಮೊನ್ನೆ ಬೆಳಿಗ್ಗೆ ಪತ್ರಿಕೆಯನ್ನು ಓದುತ್ತಿದ್ದಾಗ 'ಎಲ್.ಪಿ.ಜಿ. ಅನಿಲದ ಬೆಲೆಯೇರಿಕೆ ಮತ್ತೆ ಸಂಭವ' ಎಂಬುದು ಕಣ್ಣಿಗೆ ಬಿದ್ದಾಗ ನನಗೆ ನಿಜವಾಗಿಯೂ ತುಂಬ ಸಂತೋಷವಾಯಿತು. ಯಾಕೆಂದರೆ ನಮ್ಮ ಮನೆಯಲ್ಲಿ ಎರಡು ಪಾರ್ಟಿ. ಹಸಿರು ತರಕಾರಿ, ಮೊಳಕೆಕಾಳು, ಹಸಿಹಾಲು ಬಳಸಬೇಕೆನ್ನುವ ಒಂಟಿ ಸದಸ್ಯನಿರುವ ನನ್ನದು ಒಂದು ಪಾರ್ಟಿ. ಬಿಸಿಹಾಲು, ಹಿತವಾಗಿ ಬೆಂದ ಅನ್ನ, ಸಾರು, ಹುಳಿ ಬೇಕೆಬೇಕೆನ್ನುವ ನಿಚ್ಚಳ ಬಹುಮತವಿರುವ ನಿಮ್ಮಿ ಮತ್ತು ಚಿರಂಜೀವಿಗಳದ್ದು ಇನ್ನೊಂದು ಪಾರ್ಟಿ. ಹೀಗಾಗಿ ನಮ್ಮಲ್ಲಿ ಯಾವಾಗಲೂ ಮಾತಿನ ಚಟಾಪಟಿ. ಒಮ್ಮೆ ಇದು ತಾರಕಕ್ಕೇರಿ ಕೊನೆಗೆ ನನಗೂ ನಿಮ್ಮಿಗೂ ಒಂದು ಒಡಂಬಡಿಕೆಯಾಗಿತ್ತು. ಅದೆಂದರೆ ಅಡುಗೆ ಅನಿಲದ ಬೆಲೆ ಸಿಲಿಂಡರಿಗೆ ರೂ. ೧೭೦ರ ಗಡಿಯನ್ನು ತಲುಪಿದರೆ ನಾನು ಬಯಸುವ ಹಸಿಯೂಟ ಒಪ್ಪೊತ್ತು, ಅಡುಗೆ ಇನ್ನೊಂದು ಹೊತ್ತು ಎಂದು. ಅಂಥ ಸುದಿನ ಬರಲಿರುವುದನ್ನು ವರ್ತಮಾನ ಪತ್ರಿಕೆ ತಿಳಿಸಿದ್ದರಿಂದ ಸಹಜವಾಗಿಯೇ ನನ್ನ ಮನಸ್ಸು ಉಲ್ಲಸಿತವಾಗಿತ್ತು. ನನ್ನವಳ ಮನಸ್ಸಿನ ಸ್ಥಿತಿಯು ಕಾಳಜಿ ನನ್ನದಲ್ಲವಲ್ಲ!

ಚಹಾ ಸವಿಯುತ್ತ ಮನಸ್ಸನ್ನು ಎತ್ತೆತ್ತಲೋ ದೌಡಾಯಿಸಿದೆ. ಅನಿಲದ ಬೆಲೆಯೇರಿದರೆ ಹಸಿಯೂಟದ ಖುಶಿಯೊಂದಿಗೆ ಇನ್ನೇನೇನು ಲಾಭವಾಗಬಹುದೆಂದು ಲೆಕ್ಕಾಚಾರಕ್ಕೆ ತೊಡಗಿದೆ. ಮಾತೆತ್ತಿದರೆ ಬೆಂಗಳೂರಿನ ನಮ್ಮ ಮನೆಗೆ ಬಂದು ವಕ್ರಿಸುವ ಸಂಬಂಧಿ–ಅತಿಥಿಗಳ ದಂಡು ಇನ್ನು ಕ್ಷೀಣವಾಗುವುದು ಖಚಿತ. ಕಂದಮೂಲದ ಊಟೋಪಚಾರ ಎಷ್ಟು ಜನರಿಗೆ ತಾನೇ ಸಮ್ಮತ? ಕಾರ್ಯಾರ್ಥ ಮೊನ್ನೆತಾನೆ ಚಿಕ್ಕಪ್ಪ ಬಂದು ಹೋಗಿದ್ದರು. ವಿಧಾನ ಸೌಧ ಸುತ್ತಲು ತಿಂಗಳಿಗೆ ಮೂರು ನಾಲ್ಕು ಜನ ಬರುವುದಂತೂ ಈಗಿನ ಮಾಮೂಲಿ. ಇನ್ನು ಇಂಥ ವಿದ್ಯಮಾನ ಕಡಿಮೆಯಾದಂತೆಯೇ. ಬೆಳಿಗ್ಗೆ ಅಡುಗೆ ಕಾರ್ಯ ನಿಲ್ಲಿಸಿದರಂತೂ ಅನುಕೂಲ ಹತ್ತು ಹಲವು.

ಮುಂಜಾನೆ ತಡವಾಗಿ ಏಳಬಹುದಾದ್ದರಿಂದ ನಮ್ಮ ಕುಂಭಕರ್ಣ ಪ್ರವೃತ್ತಿಗೆ ಶುಕ್ರದೆಸ. ಸೂರ್ಯ ಮೂಡಿ ಎರಡು ತಾಸುಗಳ ಬಳಿಕ ನಾವೆದ್ದು ಒಂದಿಷ್ಟು ಹಸಿ ತಯಾರಿಸಿ ತಿಂದು ಆಫೀಸಿಗೆ ಹೊರಟರಾಯಿತು. ಗ್ಯಾಸ್ ಸಿಲಿಂಡರನ್ನು ಬೆಳಿಗ್ಗೆ ಚಲಾಯಿಸದೆಯೇ ಇದ್ದರೆ, ಆಫೀಸಿಗೆ ತಲುಪಿದ ಬಳಿಕ, 'ಸಿಲಿಂಡರ್ ಬಂದ್ ಮಾಡಿದೆನೇ ಇಲ್ಲವೇ' ಎನ್ನುವ ಸಂದೇಹ ಬರಲು ಆಸ್ಪದವಿಲ್ಲ. ಅಲ್ಲೂ ಹಾಯಾಗಿ ನಿದ್ದೆ ಮಾಡಬಹುದು! ಅಲ್ಲದೆ ಮನೆಗೆ ಯಾರಾದರೂ ಬಂದರೆ ಕಾಫಿ, ಟೀ ಸತ್ಕಾರ ನಿಲ್ಲಿಸಿ ನೀರುಮಜ್ಜಿಗೆಯನ್ನೋ, ಪಾನಕವನ್ನೋ ನೀಡಿದರಾಯಿತು. ಯಾವ ತಾಪತ್ರಯವೂ ಇರುವುದಿಲ್ಲ. ಕಾಸು ಮತ್ತು ಆರೋಗ್ಯ ಎರಡೂ ಉಳಿಯುತ್ತವೆ. ಇದಕ್ಕಿಂತ ಉತ್ತಮ ಪ್ರಸಂಗ ಯಾವುದಿರಲು ಸಾಧ್ಯ? ಮನೆಗೆ ಬರುವ ವ್ಯಾಘ್ರಕುಲಜರಿಗೆ ಹುಲಿಮೇವನ್ನು ಹಸಿಯಾಗಿಯೇ ನೀಡಿದರಂತೂ ಅದೊಂದು ಮಜ. ಅಂತೂ ಲವಲವಿಕೆಯ ದಿನಗಳು ಮುಂದೆ ಖಾತರಿಯೆನಿಸಿತು ನನಗೆ.

ಮನಸ್ಸು ಕಡಿವಾಣವಿಲ್ಲದ ಕುದುರೆಯಂತೆ ಮತ್ತೆ ಓಡಿತು. ಸಿಲಿಂಡರಿನ ಬಳಕೆ ಕಡಿಮೆಯಾದರೆ ಅದು ಸಿಡಿದು ಸಾವುನೋವುಗಳಾಗುವ ಸಂಭವ ಕೂಡ ಕಡಿಮೆ. ಮನೆಯಲ್ಲಿ ಅಪಾಯದ ಇಳಿತ ಯಾರಿಗೆ ತಾನೇ ಬೇಡ? ಜೊತೆಗೆ ವಾಯುಮಾಲಿನ್ಯ ಕಡಿಮೆ. ಸಿಲಿಂಡರ್ ತರುವವನಿಗೆ ತೆರಬೇಕಾದ ಭಕ್ಷೀಸೂ ಕಡಿಮೆ, ಮನೆಯಲ್ಲಿ ಹೊಗೆ ಉತ್ಪಾದನೆ ಇಳಿದರೆ ಮನೆಯ ಗೋಡೆಗಳಿಗೆ ಸುಣ್ಣಬಣ್ಣದ ಖರ್ಚು ಕೂಡ ಇಳಿಯುತ್ತದೆ. ಒಟ್ಟು ಎಲ್ಲಾ ಕಡೆ ಉಳಿತಾಯ. ಅಂತೂ ಹಸಿ ಹಸಿರು ತಿಂದು, ಕಡಿಮೆ ಮಲಿನ ವಾಯು ಸೇವಿಸಿ ಹಾಯಾಗಿದ್ದು ನೂರು ವರುಷ ಬಾಳುವ ಸನ್ನಿವೇಶ ಬರಲಿದೆ.

ನನ್ನ ಮನಸ್ಸು ಇನ್ನೂ ಮುಂದೆ ಓಡಿತು. ಅನಿಲದ ದರ ಏರಿಸುವ ದೆಹಲಿ ದೊರೆಗೆ ಇವತ್ತೇ ದೂರವಾಣಿಸಿ ಬೆಲೆಯೇರಿಕೆಯ ಅವರು ಊಹಿಸಲಾಗದ ಲಾಭವನ್ನು ಮನದಟ್ಟು ಮಾಡಿ, ಅವರನ್ನು ಮುಂದಾಗಿ ಅಭಿನಂದಿಸಬೇಕು.

ಅದಲ್ಲದೆ ಅವರು ಬೆಂಗಳೂರಿಗೆ ಬರುವಾಗ ಖಂಡಿತವಾಗಿಯೂ ನಮ್ಮ ಮನೆಯ ಆತಿಥ್ಯವನ್ನು ಸ್ವೀಕರಿಸಬೇಕೆಂದೂ ವಿನಂತಿಸಿಕೊಳ್ಳಬೇಕು. ನೀವೇನಂತೀರಿ?

———

ಭೂಮಂಡಲ ಬೆಚ್ಚಗಾಗುತ್ತಿದೆ ಎಚ್ಚರಿಕೆ !

ಡಾ|| ಸರ್ವೋತ್ತಮ ಅಂಬೇಕರ

೪೪, ೧೫ನೇ ಕ್ರಾಸ್, ವಿ.ವಿ.ಮೊಹಲ್ಲಾ

ಮೈಸೂರು-೫೭೦೦೦೨

ಅತ್ಯಂತ ಅನುಕೂಲಕರವಾದ ಉಷ್ಣತೆ ಹಾಗೂ ಹವಾಮಾನವನ್ನು ಹೊಂದಿರುವಲ್ಲಿ ಇಡೀ ಸೌರವ್ಯೂಹದಲ್ಲಿ ಭೂಮಿಗೆ ಅಗ್ರ ಮಾನ್ಯ ವಿಶಿಷ್ಟ ಸ್ಥಾನ ಇದೆ. ಭೂ-ಮಂಡಲದ ಸರಾಸರಿ ಉಷ್ಣತೆ ೧೫° ಸೆ ಇದ್ದು, ಅದರ ಹವಾಮಾನ ಎಲ್ಲಾ ಜೀವಿಗಳು ಹುಟ್ಟಿ, ಬದುಕಿ ಬಾಳಲು ಆಶ್ರಯ ದಾಯಿಯಾಗಿದೆ. ಇಂಥ ಹಿತಕರ ಹವಾಮಾನ ಸೌರವ್ಯೂಹದ ಇನ್ನಾವ ಗ್ರಹದಲ್ಲಿಯೂ ಕಾಣೆವು. ನಮ್ಮ ನೆರೆಯವರಾದ ಬುಧ, ಗುರು, ಶುಕ್ರರು ಕಾದ ಸೀಸದ ಗುಂಡಾಗಿದ್ದರೆ, ಶನಿ, ಮಂಗಳ, ಯುರೇನಸ್ ನೆಪ್ಚ್ಯೂನ್ ಮತ್ತು ಪ್ಲೂಟೊ ಇವು ಹಿಮದ ಗುಂಡುಗಳಾಗಿವೆ. ಹೀಗಾಗಿ ಇಡೀ ಸೌರವ್ಯೂಹದಲ್ಲಿ ವಾಸಿಸಲು ಭೂಮಿ ಮಾತ್ರ ಯೋಗ್ಯ ಗ್ರಹ. ಭೂಮಂಡಲ ತನ್ನ ಸರಾಸರಿ ಉಷ್ಣತೆಯನ್ನು ಈಗಿರುವುದಕ್ಕಿಂತ ೧° ಸೆ ಸಹ ಹೆಚ್ಚು ಅಥವಾ ಕಡಿಮೆ ಆಗದಂತೆ ೧೫,೦೦೦ ವರುಷಗಳಿಂದ ಕಾಯ್ದುಕೊಂಡು ಬಂದಿದೆ. ಆದರೆ ಕಳೆದ ಕೇವಲ ಒಂದು ಶತಮಾನದಲ್ಲಿ ಭೂ-ಮಂಡಲ ಅರ್ಧ ಡಿಗ್ರಿ ಸೆಂಟಿಗ್ರೇಡ್‌ನಷ್ಟು ಬೆಚ್ಚಗಾಗಿರುವುದು ಕಂಡುಬಂದಿದೆ. ಔದ್ಯೋಗಿಕ ಹಾಗೂ ಇತರ ಮಾನವ ಚಟುವಟಿಕೆಗಳೇ ಇದಕ್ಕೆ ಕಾರಣ ಎಂದು ತಿಳಿದು ಬಂದಿದೆ. ತನ್ನ ಈ ಚಟುವಟಿಕೆಗಳನ್ನು ಮಾನವ ಹತೋಟಿಯಲ್ಲಿಡದಿದ್ದರೆ ಬರುವ ೫೦ ವರುಷಗಳಲ್ಲಿ ಸುಮಾರು ೪° ಸೆ ಹೆಚ್ಚು ಬೆಚ್ಚಗಾಗಿ ಮಾನವ ಕುಲ ಹಾಗೂ ಬಾಕಿ ಸಕಲ ಜೀವ ಜಾತಿಗಳಿಗೆ ಗಂಡಾಂತರ ತಂದೊಡ್ಡುವ ಸಾಧ್ಯತೆ ಇದೆ. ಎಂಬ ಮುನ್ನೆಚ್ಚರಿಕೆಯ ಗಂಟೆಯನ್ನು ವಿಜ್ಞಾನಿಗಳು ಬಾರಿಸಿದ್ದಾರೆ.

ವಾತಾವರಣ

ಇಡೀ ಸೌರವ್ಯೂಹದಲ್ಲಿ ಭೂಮಿಯೊಂದೇ ವಾಸಿಸಲು ಯೋಗ್ಯ ಗ್ರಹ ಆಗಿರಲು ಮುಖ್ಯ ಕಾರಣ ಅಂದರೆ, ಅದರ ಪ್ರಯೋಜನಕಾರಿ ವಾತಾವರಣ. ಭೂ-ಮಂಡಲದ ಸುತ್ತಲೂ ಅದರ ಮೇಲ್ಮೈಯನ್ನು ಮೊದಲ್ಗೊಂಡು ೩೦೦ ಮೈಲು ಎತ್ತರದವರೆಗೆ ವಾಯುಗಳಿಂದ ಆಚ್ಛಾದಿತವಾದ ಸಂರಕ್ಷಕ ಕವಚ ಉಂಟು. ಈ ಕವಚವೆ ವಾತಾವರಣ. ವಾತಾವರಣದಲ್ಲಿ ಸುಮಾರು ೨೦ ಬಗೆಯ ಅನಿಲಗಳಿದ್ದು ಅವುಗಳ ಪೈಕಿ ನೈಟ್ರೊಜನ್, ಆಕ್ಸಿಜನ್

ಆರ್ಗಾನ್ ಇವುಗಳ ಒಟ್ಟು ಪ್ರಮಾಣ ಶೇಕಡಾ ೯೯.೯೯ ಬಾಕಿಯವುಗಳು ಪಿ.ಪಿ.ಎಂ. (ಪಾರ್ಟ್ಸ್ ಪರ್ ಮಿಲಿಯನ್) ಪಿ.ಪಿ.ಬಿ. (ಪಾರ್ಟ್ಸ್‌ಪರ್ ಬಿಲಿಯನ್) ಪ್ರಮಾಣದಲ್ಲಿರುತ್ತವೆ. ವಾತಾವರಣವನ್ನು ಉಷ್ಣತೆಯ ತಾರತಮ್ಯದ ಪ್ರಕಾರ ಟ್ರೊಪೊಸ್ಫಿಯರ್ (ಭೂಮಿಯ ಮೇಲ್ಮೈಯಿಂದ ೯ ಮೈಲು ಎತ್ತರದವರೆಗೆ), ಸ್ಟ್ರಾಟೊಸ್ಫಿಯರ್ (೯ ರಿಂದ ೩೦ ಮೈಲು) ಮೆಸೊಸ್ಫಿಯರ್ (೩೦ ರಿಂದ ೫೦ ಮೈಲು) ಥರ್ಮೊಸ್ಫಿಯರ್ ಅಥವಾ ಅಯನೊಸ್ಫಿಯರ್ (೫೦ ಮೈಲು ದಾಟಿ),ಇತ್ಯಾದಿ ಕೆಲವು ಪದರುಗಳನ್ನಾಗಿ ವಿಭಾಗಿಸುತ್ತಾರೆ. ವಾತಾವರಣದಲ್ಲಿರುವ ಎಲ್ಲಾ ನೀರು, ದ್ರವ ರೂಪದಲ್ಲಿಯಾಗಲಿ ಆವಿಯಾಗಿ ಆಗಲಿ ಇರುವುದು ಟ್ರೊಪೊಸ್ಫಿಯರ್‌ದಲ್ಲಿ. ಸ್ಟ್ರಾಟೊಸ್ಫಿಯರ್‌ದಲ್ಲಿ ಓಝೋನ್ ವಾಯುಮಂಡಲ ಇರುತ್ತದೆ.

ಸೌರಕಿರಣ

ಭೂಮಂಡಲ ಹಾಗೂ ವಾತಾವರಣ ಇವುಗಳನ್ನು ಸೌರವಿಕಿರಣದಿಂದ ಪ್ರತ್ಯೇಕಿಸಲಾಗದು. ಇವು ಮೂರೂ ಪರಸ್ಪರ ನಿಕಟ ಸಂಬಂಧವುಳ್ಳವು. ಸೂರ್ಯನ ಮೇಲ್ಮೈ ಉಷ್ಣತೆ ೬೦೦೦°ಸೆ ಇದ್ದು ಅದು ಪ್ರತಿ ನಿಮಿಷಕ್ಕೆ 50×10^{26} ಕಿಲೊ ಕೆಲರಿ ಶಕ್ತಿಯ ವಿಕಿರಣಗಳನ್ನು ಚೆಲ್ಲುತ್ತದೆ. ಆದರ ಈ ಅಗಾದ ಶಕ್ತಿಯ ಕೆಲ ಅಂಶವನ್ನು ಮಾತ್ರ ನಿರಂತರ ಚಲನೆಯುಲ್ಲಿರುವ ಭೂಮಿ ಅಡ್ಡಗಟ್ಟುತ್ತದೆ. ಅಲ್ಲದೇ ವಿಕಿರಣ ವಾತಾವರಣದಲ್ಲಿ ಹಾಯ್ದು ಭೂಮಿಯನ್ನು ತಲುಪುವುದರಿಂದ ಅದರ ಬಲ ಇನ್ನಷ್ಟು ಕಡಿಮೆಯಾಗುತ್ತದೆ. ಸೂರ್ಯ ವಿಕಿರಣದ ಘಟಕಗಳು ಅಂದರೆ ಅತಿನೇರಳೆ, ಗೋಚರ ಬೆಳಕು ಮತ್ತು ಅವಕೆಂಪು ವಿಕಿರಣ. ಅತಿನೇರಳೆ ಹ್ರಸ್ವತರಾಂಗತರದ ವಿಕಿರಣಗಳಾಗಿದ್ದರೆ ಗೋಚರ ವಿಕಿರಣಗಳು ಅದಕ್ಕಿಂತ ದೀರ್ಘ ತರಂಗಾತರದ ವಿಕಿರಣಗಳಾಗಿರುತ್ತವೆ. ಅವಕೆಂಪು ವಿಕಿರಣಗಳು ಇವೆರಡಕ್ಕಿಂತಲೂ ದೀರ್ಘ ತರಂಗಾಂತರದವು. ವಿಕಿರಣವೊಂದರ ತರಾಂಗಂತರ ದೀರ್ಘವಾದಂತೆ ಅದರ ಶಕ್ತಿ ಕಡಿಮೆ ಆಗುತ್ತ ಹೋಗುತ್ತದೆ. ಸೂರ್ಯ ವಿಕಿರಣದದ ಎಲ್ಲ ಘಟಕಗಳ ಮೊತ್ತ ನೂರು ಯುನಿಟ್ ಇದ್ದರೆ ಅದರಲ್ಲಿ ಗೋಚರ ಬೆಳಕು ಶೇಕಡಾ ೪೬ ಇರುತ್ತದೆ.

ಈಗ ಅವಕೆಂಪು ವಿಕಿರಣ ಹಾಗೂ ಅವುಗಳ ಸಂಬಂಧ ಮಾಹಿತಿ ಅವಶ್ಯ. ಏಕೆಂದರೆ ಭೂಮಂಡಲ ಬೆಚ್ಚಗಿರುವುದಕ್ಕೆ ಅವೇ ಕಾರಣ. ಯಾವುದೇ ವಸ್ತುವೊಂದರಲ್ಲಿ ಅಣುಗಳು ನಿರಂತರ ಕಂಪನದಲ್ಲಿ ಇರುತ್ತವೆ. ಅಂದರೆ ಅದರಲ್ಲಿಯ ಪರಮಾಣುಗಳ ಮಧ್ಯದಲ್ಲಿರುವ ಬಂಧುಗಳು ನಿರಂತರವಾಗಿ ಹಿಗ್ಗುವ-ಕುಗ್ಗುವ ಹಾಗೂ ಬಾಗುವ ಕಂಪನದಲ್ಲಿ ತೊಡಗಿರುತ್ತವೆ. ಬಂಧಗಳ ಹಿಗ್ಗುವ-ಕುಗ್ಗುವ ಮತ್ತು ಬಾಗುವ ಆವೃತ್ತಿ ಅವಕೆಂಪು ವಿಕಿರಣಗಳ ವ್ಯಾಪ್ತಿಯಲ್ಲಿಯೇ ಬರುತ್ತವೆ. ಆದರೆ ಅಣುವಿನಲ್ಲಿರುವ ಪ್ರತಿಯೊಂದು ಬಂಧಕ್ಕೂ ತನ್ನದೇ ಆದ ವಿಶಿಷ್ಟ ಹಿಗ್ಗುವ-ಕುಗ್ಗುವ ಮತ್ತು ಬಾಗುವ ಆವೃತ್ತಿ ಇರುತ್ತದೆ. ಅಣುವೊಂದರ ಮೇಲೆ ಅವಕೆಂಪು ವಿಕಿರಣಗಳನ್ನು ಹಾಯಿಸಿದಾಗ ಅದರಲ್ಲಿಯ ಬಂಧಗಳ ಕಂಪನ ಆವೃತ್ತಿಗೆ ಸರಿಯಾದ ಆವೃತ್ತಿ

ಇರುವ ಅವಕೆಂಪು ರೋಹಿತದ ವಿಕಿರಣವನ್ನು ಮಾತ್ರ ಹೀರಿಕೊಂಡು ಅದು ಉತ್ತೇಜಿತಗೊಳ್ಳುತ್ತದೆ. ಆಗ ಕಂಪನದ ಆಂದೋಲನ ಹೆಚ್ಚುತ್ತದೆ. ಸ್ವಲ್ಪ ಸಮಯದನಂತರ ಉತ್ತೇಜಿತ ಸ್ಥಿತಿಯಿಂದ ಮರಳಿ ಮೊದಲಿನ ಸ್ಥಿತಿಗೆ ಬರುತ್ತದೆ. ಆಗ ಅಣುವಿನ ಬಂಧ ತಾನು ಹೀರಿಕೊಂಡ ಅವಕೆಂಪು ಶಕ್ತಿಯನ್ನು ಶಾಖದ ರೂಪದಲ್ಲಿ ಹೊರಚೆಲ್ಲುತ್ತದೆ.

ಹಸುರುಮನೆ ಪರಿಣಾಮ

ಸೂರ್ಯ ಮಾತ್ರ ವಿಕಿರಣ ಸೂಸುವ ಕಾಯವಲ್ಲ. ವಸ್ತುಸ್ಥಿತಿ ಏನೆಂದರೆ ನಿರಪೇಕ್ಷ ಶೂನ್ಯಕ್ಕಿಂತ ಹೆಚ್ಚು ಉಷ್ಣತೆ ಹೊಂದಿರುವ ಎಲ್ಲ ಕಾಯಗಳೂ ವಿಕಿರಣಗಳನ್ನು ಹೊರಸೂಸುತ್ತವೆ. ಭೂಮಿಗೆ ಉಷ್ಣತೆ ಉಂಟು ಆದ್ದರಿಂದ ಅದೂ ಸಹ ವಿಕಿರಣಗಳನ್ನು ಸೂಸುತ್ತದೆ. ಆದರೆ ಅದು ಹೊರಸೂಸುವ ವಿಕಿರಣಗಳ ತರಂಗಾಂತರಗಳು ದೀರ್ಘವಾದವು. ಅವು ಅವಕೆಂಪು ವಿಕಿರಣದ ವ್ಯಾಪ್ತಿಯಲ್ಲಿ ಬರುತ್ತವೆ. ವಸ್ತುವೊಂದು ಎಷ್ಟು ತರಂಗಾಂತರದ ವಿಕಿರಣಗಳನ್ನು ಹೊರಸೂಸುತ್ತದೆ ಎನ್ನುವುದನ್ನು ಅಳೆಯುವುದರಿಂದ ಅದರ ಉಷ್ಣತೆಯನ್ನು ಅಳೆಯಬಹುದು. ಉಪಗ್ರಹಕ್ಕೆ ಜೋಡಿಸಿದ ಅವಕೆಂಪು ಶೋಧಕಗಳಿಂದ ಭೂಮಿ ಹೊರಸೂಸುವ ವಿಕಿರಣಗಳನ್ನು ಅಳೆದಾಗ, ಅವು, ಸರಾಸರಿ –೧೯° ಸೆ ಉಷ್ಣತೆ ಇರುವ ಕಾಯ ಹೊರಸೂಸುವ ವಿಕಿರಣಗಳಿಗೆ ಸಮಾನವಾಗಿದ್ದುದು ಕಂಡು ಬಂದಿದೆ. ಆದರೆ ವಸ್ತುಸ್ಥಿತಿ ಅಂದರೆ ಭೂಮಿಯ ಸರಾಸರಿ ಉಷ್ಣತೆ ೧೫° ಸೆ ಇರುತ್ತದೆ. ಅಂದರೆ ಭೂಮಿ ನ್ಯಾಯವಾಗಿ ಎಷ್ಟು ಬೆಚ್ಚಗಾಗಿರಬೇಕಿತ್ತೋ ಅದಕ್ಕಿಂತ ೩೪° ಸೆ ಹೆಚ್ಚು ಬೆಚ್ಚಗೆ ಇದೆ ಎಂದಂತಾಯಿತು. ಭೂಮಿಯು ತಾನು ಸೂರ್ಯನಿಂದ ಸ್ವೀಕರಿಸುವ ಶಕ್ತಿ, ಹಾಗೂ ವಾತಾವರಣದ ಸಹಾಯದಿಂದ ತಾನು ಹೊರಸೂಸುವ ಶಕ್ತಿ, ಇವುಗಳ ಆಯ-ವ್ಯಯಗಳನ್ನು ನಿರ್ಧರಿಸುವ ರೀತಿಯೇ ಈ ೩೪° ಸೆ ಅಂತರಕ್ಕೆ ಕಾರಣ. ಆಯ–ವ್ಯಯ ನಿರ್ಧರಿಸುವ ರೀತಿ ಹೀಗಿದೆ:–

೧೦೦ ಯುನಿಟ್ ಸೂರ್ಯ ವಿಕಿರಣ ವಾತಾವರಣದ ತುಟ್ಟತುದಿಯಲ್ಲಿ ತಲಪಿದೆ ಎಂದು ಭಾವಿಸಿದರೆ ಅದರ ಶೇಕಡಾ ೫೦ ವಿಕಿರಣವನ್ನು ವಾತಾವರಣ ಅಡ್ಡಗಟ್ಟುತ್ತದೆ. ಉಳಿದ ಶೇಕಡಾ ೫೦ ಭೂಮಿಯನ್ನು ತಲಪುತ್ತದೆ. ಅಡ್ಡಗಟ್ಟಿದ ವಾತಾವರಣದಲ್ಲಿರುವ ಕಣಗಳು, ಅನಿಲಗಳು, ಮೋಡಗಳು ಶೇಕಡಾ ೨೫ ವಿಕಿರಣಗಳನ್ನು ಆಕಾಶದ ಕಡೆಗೆ ಅಲ್ಲಿಂದಲೇ ಪ್ರತಿಫಲನಗೊಳಿಸುತ್ತವೆ. ಭೂಮಿಗೆ ತಲಪಿದ ಶೇಕಡಾ ೫೦ ವಿಕಿರಣದಲ್ಲಿ ಅದರ ದಾರಿಯಲ್ಲಿ ಬರುವ ಮರ, ಗಿಡ, ಕಟ್ಟಡ, ಜನ, ಪ್ರಾಣಿ, ಸಮುದ್ರ ಬೆಟ್ಟ ಇತ್ಯಾದಿ ಎಲ್ಲ ವಸ್ತುಗಳು ಸೇರಿ ಶೇಕಡಾ ೪೫ ವಿಕಿರಣವನ್ನು ಹೀರಿಕೊಳ್ಳುತ್ತವೆ. ಶೇಕಡಾ ಉಳಿದ ವಿಕಿರಣವನ್ನು ಹಿಮ, ಮರಭೂಮಿ ಇತ್ಯಾದಿ ಪ್ರದೇಶಗಳಿಂದ ಪ್ರತಿಫಲನಗೊಂಡು ಮರಳಿ ಆಕಾಶದತ್ತ ಸಾಗುತ್ತದೆ. ಒಟ್ಟನಲ್ಲಿ ಶೇಕಡಾ ೩೦ ಸೂರ್ಯ ವಿಕಿರಣ ಭೂಮಿಯನ್ನು ಬಿಸಿ ಮಾಡಲು ಅಥವಾ ಜೀವಿಗಳ ಉಪಯೋಗಕ್ಕೆ ಬರುವುದಿಲ್ಲ. ಭೂಮಿಯು

ಹ್ರಸ್ವ ತರಂಗಾಂತರದ ಸೂರ್ಯ ವಿಕಿರಣಗಳನ್ನು ಶಾಖ ರೂಪದಲ್ಲಿ ಹೀರಿಕೊಳ್ಳುತ್ತದೆ. ಇದರ ಪೈಕಿ ಶೇಕಡಾ ೫ ಶಾಖ ಶಕ್ತಿಯನ್ನು ತನ್ನ ಮೈಗೆ ಅಂಟಿದ ವಾತಾವರಣವನ್ನು, ವಹನ ಹಾಗೂ ಸಹಚಲನದ ಮೂಲಕ, ಬಿಸಿಮಾಡಲು ವರ್ಗಾಯಿಸುತ್ತದೆ. ಶೇಕಡಾ ೨೫ ವಿಕಿರಣವನ್ನು ನೀರನ್ನು ಉಗಿ ಮಾಡಲು ವರ್ಗಾಯಿಸುತ್ತದೆ. ನೀರು ಉಗಿಯಾಗಿ ಮೋಡಗಳಲ್ಲಿ ತುಂತುರು ಹನಿಯಾಗಿ ಮಾರ್ಪಾಡಾಗುವ ಕ್ರಿಯೆ ನಡೆದಾಗ ವಾತಾವರಣದಲ್ಲಿ ಶಾಖದ ವಿಕಿರಣಗಳು ಸೂಸಲ್ಪಟ್ಟು ವಾತಾವರಣ ಬೆಚ್ಚಗೆ ಆಗುತ್ತದೆ.

ವಾತಾವರಣದಲ್ಲಿ ಅತಿ ವಿರಳ ಪ್ರಮಾಣದಲ್ಲಿರುವ ಕಾರ್ಬನ್ ಡೈ ಆಕ್ಸೈಡ್, ಮೀಥೇನ್, ಓರ್ಝೋನ್ ನೈಟ್ರಸ್ ಆಕ್ಸೈಡ್, ಈ ಅನಿಲಗಳು ಮಹತ್ವದ ಗುಣ ಧರ್ಮವೊಂದನ್ನು ಹೊಂದಿವೆ. ಅದೇಂದರೆ ಈ ಅನಿಲಗಳ ಅಣುಗಳಲ್ಲಿರುವ ಬಂಧಗಳ ಕಂಪನಾ ವೃತ್ತಿ, ಮತ್ತು ಭೂಮಿ ಮರಳಿ ಹೊರಸೂಸಿದ ಶಾಖದ ವಿಕಿರಣಗಳ ಎರಡೂ ಅವಕೆಂಪುಕಿರಣದ ವ್ಯಾಪ್ತಿಯಲ್ಲಿಯೇ ಇರುತ್ತವೆ. ಹೀಗಾಗಿ ಭೂಮಿ ಮರಳಿ ಹೊರಸೂಸುವ ಶಾಖದ ಎಲ್ಲಾ ವಿಕಿರಣ ಭೂಮಂಡಲದಿಂದ ಪಾರಾಗಿ ಆಕಾಶದತ್ತ ಹೋಗದಂತೆ ಈ ಅನಿಲಗಳು ಹೀರಿಕೊಳ್ಳುತ್ತವೆ. ಇಷ್ಟೇ ಅಲ್ಲ, ತಾವು ಹೀರಿಕೊಂಡ ಶಾಖದ ವಿಕಿರಣಗಳನ್ನು, ಈ ಅನಿಲಗಳು, ಆಕಾಶದ ಕಡೆಗೂ ಹಾಗೂ ಭೂಮಿಯ ಕಡೆಗೂ ಮರಳಿ ಹೊರಸೂಸುತ್ತವೆ. ಆಕಾಶದ ಕಡೆಗೆ ವಿಕಿರಣಗಳನ್ನು ಹೊರಸೂಸುವ ಮೂಲಕ ಒಳಬರುವ ಸೂರ್ಯನ ವಿಕಿರಣಗಳೊಂದಿಗೆ ಸಮತೋಲವನ್ನು ಕಾಯ್ದುಕೊಂಡು ಭೂಮಿಯನ್ನು ತಂಪು ಮಾಡಿದರೆ ಮರಳಿ ಭೂಮಿಗೆ ಅಪ್ಪಳಿಸುವ ಶಾಖದ ವಿಕಿರಣಗಳು ಭೂಮಿಯನ್ನು ಬೆಚ್ಚಗೆ ಮಾಡುತ್ತವೆ. ಸೂರ್ಯನ ವಿಕಿರಣಗಳಿಂದ ಬೆಚ್ಚಗಾಗುತ್ತವೆ. ಸೂರ್ಯನ ವಿಕಿರಣಗಳಿಂದ ಬೆಚ್ಚಗಾಗುವುದಕ್ಕಿಂತ, ಈ ಅನಿಲಗಳು ಮರಳಿ ಹೊರಸೂಸಿದ ದೀರ್ಘ ತರಂಗಾಂತರದ ಅವಕೆಂಪು ವಿಕಿರಣಗಳಿಂದ ಭೂಮಿಯು ಎರಡು ಪಟ್ಟು ಹೆಚ್ಚಿಗೆ (೪೫:೮೮) ಬೆಚ್ಚಗಾಗುತ್ತದೆ. ಈ ರೀತಿ ಬೆಚ್ಚಗಾದ ಭೂಮಿಯು ಮೇಲ್ಮೈ ಒಟ್ಟು ಶೇಕಡಾ ೧೦೪ ಯುನಿಟ್ ಶಾಖದ ವಿಕಿರಣಗಳನ್ನು ಹೊರಸೂಸುತ್ತದೆ. ಇದರ ಪೈಕಿ ಶೇಕಡಾ ೪ ಶಾಖಶಕ್ತಿ ಪಾರಾಗಿ ನೇರ ಆಕಾಶವನ್ನು ಸೇರುತ್ತದೆ. ಉಳಿದ ಶಾಖ ಶಕ್ತಿ ಈ ಅನಿಲಗಳ ಸೆರೆ ಸಿಕ್ಕಿರುತ್ತವೆ, ಈ ರೀತಿ ಬೆಚ್ಚಗಾದ ವಾತಾವರಣ ಇಟ್ಟು ಶೇಕಡಾ ೬೬ ಶಾಖಶಕ್ತಿಯನ್ನು ಮರಳಿ ಆಕಾಶದತ್ತ ಸೂಸಿ ಭೂಮಂಡಲದ ಸರಾಸರಿ ಉಷ್ಣತೆ ಜೀವಿಗಳಿಗೆ ಹಿತಕರವಾಗುವಂತೆ ೧೫° ಸೆ ಆಗಿ ಕಾಯ್ದುಕೊಂಡು ಬರುತ್ತದೆ.

ಭೂಮಿ ಹ್ರಸ್ವ ತರಂಗಾತರದ ಸೂರ್ಯ ವಿಕಿರಣಗಳನ್ನು ಹೀರಿಕೊಂಡು ದೀರ್ಘ ತರಂಗಾಂತರದ ಅವಕೆಂಪು ವಿಕಿರಣಗಳನ್ನಾಗಿ ಮಾರ್ಪಾಡು ಮಾಡಿ ಹೊರಸೂಸಿದ ಶಾಖಶಕ್ತಿಯನ್ನು ವಾತಾವರಣದಲ್ಲಿ ಬಲೆ ಹಿಡಿದು ಹಾಕುವ ಘಟನಾ ಕ್ರಮಕ್ಕೆ 'ಹಸುರು ಮನೆ ಪರಿಣಾಮ' ಅಥವಾ

ಹಸಿರ್ರ್ಮನೆಯ ಪರಿಣಾಮ ಎಂದು ಅನ್ನು ತ್ತಾರೆ. ಅಲ್ಲದೆ CO_2 N_2O ಮೀಥೇನ್ O_3 ಈ ನಾಲ್ಕು ಅನಿಲಗಳಿಗೆ 'ಹಸುರು ಮನೆ ಅನಿಲಗಳು' ಅನುತ್ತಾರೆ. ೧೮೨೭ರಲ್ಲಿ ಫೂರಿಯರ್ ಎಂಬ ಗಣಿತಜ್ಞ ಹಸುರುಮನೆ ಅನ್ನುವ ಪದವನ್ನು ಟಂಕಿಸಿದ್ದರೂ. ವಾತಾವರಣದ ಬೆಚ್ಚಗಾಗುವಿಕೆ ಹಾಗೂ ವಿಕಿರಣಗಳಿಗೆ ಸಂಬಂಧಿಸಿದಂತೆ 'ಹಸುರುಮನೆ' ಎಂಬ ಪದವನ್ನು ೧೮೬೧ರಲ್ಲಿ ಬ್ರಿಟಿಷ್ ಭೌತಶಾಸ್ತ್ರಜ್ಞ ಟಿಂಡಾಲ್ ಎಂಬಾತ ಮೊಟ್ಟ ಮೊದಲಿಗೆ ಬಳಕೆಗೆ ತಂದ.

ಸಸ್ಯಗಳನ್ನು ಗಾಜಿನ ಮನೆಗಳಲ್ಲಿ ಪೋಷಿಸುವುದು ನಮಗೆಗೊತ್ತು. ಇಂತಹ ಗಾಜಿನ ಮನೆಗಳಿಗೆ 'ಹಸುರುಮನೆ' ಅನ್ನುತ್ತಾರೆ. ಹಸುರುಮನೆಯ ಒಳಗೆ ಹೊರಗಿನ ವಾತಾವರಣಕ್ಕಿಂತ ಉಷ್ಣತೆ ಹೆಚ್ಚು ಇರುತ್ತದೆ. ಹಸುರು ಮನೆಯ ಗಾಜು ದೀರ್ಘ ತರಂಗಾಂತರದ ವಿಕಿರಣಗಳನ್ನು ಹೀರಿಕೊಂಡು ಹ್ರಸ್ವ ತರಂಗಾಂತರದ ವಿಕಿರಣಗಳನ್ನು ಒಳಗೆ ಬಿಡುತ್ತವೆ. ಈ ವಿಕಿರಣಗಳು ಹಸುರು ಮನೆಯ ಒಳಗಡೆ ಇರುವ ವಸ್ತುಗಳ ಮೇಲೆ ಬಿದ್ದು ಅವುಗಳನ್ನು ಬೆಚ್ಚಗೆ ಮಾಡುತ್ತವೆ. ಈ ರೀತಿ ಬೆಚ್ಚಗಾದ ಗಿಡಗಳು, ಹೂಗಳು, ಹೂಕುಂಡಗಳು, ಕೆಲಸದ ಉಪಕರಣಗಳು ಭಾಗಶಃ ಶಾಖ ಶಕ್ತಿಯನ್ನು ಹೊರಸೂಸುತ್ತವೆ. ಈ ಹೊರಸೂಸಿದ ಶಾಖಶಕ್ತಿ ಸಹಚಲನದಿಂದ ಪಾರಾಗಿ ಹೊರಗೆ ಹೋಗದಂತೆ ಹಸುರು ಮನೆಯ ಗೋಡೆಗಳು, ಕಬ್ಬಿಣದ ಚೌಕಟ್ಟಿನಲ್ಲಿರುವ ಗಾಜಿನಛತ್ತು, ಇವು ಅಡಿ ಮಾಡುವುದರಿಂದ ಹಸುರುಮನೆ ಒಳಗಡೆ ಉಷ್ಣತೆ ಹೆಚ್ಚಾಗುತ್ತದೆ. ಹಸುರುಮನೆಯ ಗೋಡೆಗಳು ಮತ್ತು ಛತ್ತು ಅದರ ಒಳಗಿನ ಉಷ್ಣತೆಯನ್ನು ಹೆಚ್ಚಿಸುವಂತೆ ವಾತಾವರಣವು ಭೂಮಂಡಲವನ್ನು ಬೆಚ್ಚಗೆ ಇಡುತ್ತದೆ. ಈ ಹೋಲಿಕೆಯನ್ನು ಇಷ್ಟಕ್ಕೇ ಸೀಮಿತಗೊಳಿಸಬೇಕು. ಏಕೆಂದರೆ ಹಸುರು ಮನೆಯಲ್ಲಿ ಬೆಚ್ಚಗಾಗುವ ಕ್ರಿಯೆ ಗಾಜು ಹೀರಿಕೊಂಡ ಅವಕೆಂಪು ವಿಕಿರಣಗಳಿಂದಲ್ಲ. ಏಕೆಂದರೆ ಅವಕೆಂಪು ವಿಕಿರಣಗಳನ್ನು ಹೀರಿಕೊಳ್ಳಲಾರದ ಉಪ್ಪಿನ ಫಲಕಗಳಿಂದ ತಯಾರಿಸಿದ ಮಾದರಿ ಹಸುರುಮನೆಯುಲ್ಲಿ, ಗಾಜಿನ ಹಸುರುಮನೆಯಷ್ಟೇ ಉಷ್ಣತೆ ಹೆಚ್ಚಾಗುತ್ತದೆ ಎಂಬುದು ಕಂಡುಬಂದಿದೆ. ಅದೂ ಅಲ್ಲದೆ ಬೇಕೆನಿಸಿದರೆ, ಹಸುರು ಮನೆಯ ಗೋಡೆಗಳಲ್ಲಿ ಕಿಟಕಿ, ಗಾಜಿನ ಛತ್ತಿನಲ್ಲಿ ಕಿಂಡಿಗಳನ್ನು ಮಾಡುವುದರಿಂದ ಅದರ ಒಳಗಿನ ಉಷ್ಣತೆಯನ್ನು ನಿಯಂತ್ರಿಸಬಹುದು. ಆದರೆ ಈ ಸೌಲಭ್ಯ ವಾತಾವರಣಕ್ಕೆ ಸಂಬಂಧಿಸಿದಂತೆ ಇಲ್ಲ.

ಭೂಮಂಡಲ ಬೆಚ್ಚಗಾಗುತ್ತಿರುವುದೇಕೆ?

ಭೂಮಂಡಲ ಹೀರಿಕೊಳ್ಳುವ ಹಾಗೂ ಮರಳಿ ಸೂಸುವ ವಿಕಿರಣಗಳ ಆಯ-ವ್ಯಯದ ಒಂದು ಮುಖ್ಯ ಅಂಶ ಅಂದರೆ ಭೂಮಿಯು ಮೈ ಹಾಗೂ ವಾತಾವರಣ ಭಾಗಶಃ ಶಾಖವನ್ನು ಆಕಾಶದತ್ತ ಯಾವುದೇ. ಕಾರಣದಿಂದ ಹೊರಸೂಸುವ ಶಾಖ ಆಕಾಶದ ಕಡೆಗೆ ಹೋಗದಂತಾದರೆ, ಅರ್ಥಾತ್ ಅವಕೆಂಪು ಕಿಟಕಿಗಳು ಮುಚ್ಚಿದರೆ, ಸಮತೋಲನದ ಮಿತಿ ಮೀರಿ ಶಾಖ ವಾತಾವರಣದಲ್ಲಿ ಸೇರಿಕೊಂಡು ಭೂಮಂಡಲದ ಉಷ್ಣತೆ ಹೆಚ್ಚಾಗಲೇಬೇಕು. ವಾತಾವರಣದಲ್ಲಿ ಹಸುರುಮನೆ ಅನಿಲಗಳ

ಪ್ರಮಾಣ ಹೆಚ್ಚಾದಂತೆ ಅವಕೆಂಪು ವಿಕಿರಣವನ್ನು (ಶಾಖವನ್ನು) ಹೀರಿಕೊಳ್ಳುವ ಅಣುಗಳ ಸಂಖ್ಯೆ ಹೆಚ್ಚಾಗುತ್ತದೆ. ಇದರಿಂದ ಆಕಾಶದತ್ತ ಪಾರಾಗಿ ಹೋಗುವ ಅವಕೆಂಪು ವಿಕಿರಣಗಳು ಈ ಅಣುಗಳಿಂದ ತಡೆಯಲ್ಪಟ್ಟು ಭೂಮಿಯ ಉಷ್ಣತೆಯನ್ನು ಹೆಚ್ಚಿಸುತ್ತವೆ. ಈವರೆಗೆ ಹಸುರುಮನೆ ಪರಿಣಾಮದ ಬಗ್ಗೆ ಕೈಕೊಂಡ ಸಂಶೋಧನೆಯ ಪ್ರಕಾರ ಎಲ್ಲ ವಿಜ್ಞಾನಿಗಳು ಒಪ್ಪಿಕೊಂಡಂತಹ ೨ ಮುಖ್ಯ ಅಂಶಗಳೆಂದರೆ—
೧) ಕಳೆದ ಕೇವಲ ಒಂದು ಶತಮಾನದಲ್ಲಿ ಭೂಮಂಡಲದ ಸರಾಸರಿ ಉಷ್ಣತೆ ೦.೭°ಸೆ ರಷ್ಟು ಹೆಚ್ಚಾಗಿದೆ.

೨) ವಾತಾವರಣದಲ್ಲಿ ಹಸುರು ಮನೆ ಅನಿಲಗಳಾದ CO_2, NO, CH_4, ಮತ್ತು O_3 ಇವುಗಳ ಪ್ರಮಾಣ ತೀವ್ರವಾಗಿ ಏರಿವೆ. ಅದೂ ಅಲ್ಲದೆ ಕ್ಲೋರೋಫ್ಲೂರೊ ಕಾರ್ಬನ್ನುಗಳು (C F C) ವಿಕಿರಣದ ದೃಷ್ಟಿಯಿಂದ ಹೊಸ ಹಸುರು ಮನೆ ಅನಿಲಗಳಾಗಿ ವಾತಾವರಣವನ್ನು ಸೇರಿವೆ.

ಕಾರ್ಬನ್ ಡೈ ಆಕ್ಸೈಡ್ (CO_2):

ಕಲ್ಲಿದ್ದಲು ಪೆಟ್ರೋಲಿಯಮ್, ಹಾಗೂ ಮತ್ತಿತರ ಕಾರ್ಬನ್ನುಳ್ಳ ಇಂಧನವನ್ನು ದಹಿಸಿದಾಗ ಹೊರಡುವ ಮುಖ್ಯ ವಸ್ತು ಅಂದರೆ Co_2. ಈ ರೀತಿ ಹೊರಟ Co_2 ಅನಿಲವನ್ನು ಭೂಮಿಯಲ್ಲಿರುವ ಅರಣ್ಯ, ಮರ, ಗಿಡ, ಸಸ್ಯಗಳು ದ್ಯುತಿಸಂಶ್ಲೇಷಣಾ ಕ್ರಿಯೆಯಿಂದ ಶರ್ಕರಗಳನ್ನಾಗಿ ಪರಿವರ್ತಿಸುತ್ತ ಬಂದಿವೆ. ಪರಿವರ್ತಿತವಾಗದೇ ಉಳಿದ ಅನಿಲ ವಾತಾವರಣದಲ್ಲಿ ೨೮೦ ಪಿ.ಪಿ.ಎಂ. ಪ್ರಮಾಣದಲ್ಲಿ ಉಳಿಯುತ್ತಿತ್ತು. ಕಳೆದ ೧೫,೦೦೦ ವರುಷಗಳಿಂದ Co_2 ನ್ನು ಸ್ಥಿರಗೊಳಿಸುವ ಈ ಪ್ರಕ್ರಿಯೆ ಸಮತೋಲದಲ್ಲಿ ನಡೆದುಬಂದಿದೆ. ಆದರೆ ಹಠಾತ್ತಾಗಿ ಕಳೆದ ೧೫೦ ವರುಷಗಳ ಅವಧಿಯಲ್ಲಿ ಔದ್ಯೋಗಿಕ ಸಮಾಜದ ಯಂತ್ರದ ಗಾಲಿಗಳನ್ನು ಓಡಿಸಲು ಪೆಟ್ರೋಲಿಯಮ್ ಮತ್ತು ಕಲ್ಲಿದ್ದಲನ್ನು ದಹಿಸಿದ್ದರಿಂದ ವಿಪರೀತ ಪ್ರಮಾಣದಲ್ಲಿ Co_2 ವಾತಾವರಣವನ್ನು ಸೇರಿ ಸಮತೋಲದ ಪ್ರಕ್ರಿಯೆ ಏರುಪೇರಾಗಿದೆ. ಮಿತಿಮೀರಿದ ಅರಣ್ಯನಾಶವೂ ಸಹ ವಾತಾವರಣದಲ್ಲಿ Co_2 ದ ಪ್ರಮಾಣವನ್ನುಹೆಚ್ಚಿಸಲು ಕಾರಣವಾಗಿದೆ. ಅರಣ್ಯನಾಶ ಎರಡು ರೀತಿಯಲ್ಲಿ Co_2 ದ ಪ್ರಮಾಣವನ್ನು ಹೆಚ್ಚಿಸುತ್ತದೆ. ೧) ಮರಗಿಡಗಳ ದಹನ ಹಾಗೂ ಕೊಳೆಯುವಿಕೆ ವಾತಾವರಣಕ್ಕೆ Co_2 ನ್ನು ಸೇರಿಸುತ್ತದೆ. ೨) ಅರಣ್ಯ ನಾಶವಾದನಂತರ ಭೂಮಿ, ಹುಲ್ಲುಗಾವಲು ಪ್ರದೇಶ ಅಥವಾ ಸಾಗುವಳಿ ಪ್ರದೇಶ ಆಗಿ ಮಾರ್ಪಾಡಾಗುತ್ತದೆ. ಭರದಿಂದ ಬೆಳೆಯುವ ಒಂದು ಚೌರಸ್ ಮೀಟರ ಅರಣ್ಯ ವರ್ಷವೊಂದಕ್ಕೆ ೨ ಕೆ.ಜಿ. Co_2 ನ್ನು ಸ್ಥಿರಗೊಳಿಸಿದರೆ ಸಾಗುವಳಿ ಪ್ರದೇಶ ಕೇವಲ ೦.೪ ಕೆ. ಜಿ. Co_2 ನ್ನು ಸ್ಥಿರೀಕರಿಸುತ್ತದೆ.

ಔದ್ಯೋಗೀಕರಣದ ದಿನಗಳಿಗಿಂತ ಮೊದಲು ವಾತಾವರಣದಲ್ಲಿ Co_2 ದ ಪ್ರಮಾಣ ೨೮೦ ಪಿ. ಪಿ. ಎಂ. ಪ್ರಮಾಣದಲ್ಲಿತ್ತು. ಆದರೆ ಇಂದು ಅದರ ಪ್ರಮಾಣ ೩೬೦ ಪಿ ಪಿ. ಎಂ. ಪ್ರಮಾಣಕ್ಕೆ ಏರಿದೆ. ಅಂದರೆ ಕಳೆದ ೧೫೦ ವರುಷಗಳಲ್ಲಿ Co ದ ಪ್ರಮಾಣ ಶೇಕಡಾ ೨೫ರಷ್ಟು ಏರಿದೆ.

ಇಂಧನಗಳ ದಹನವನ್ನು ಮತ್ತು ಅರಣ್ಯ ನಾಶವನ್ನು ಇದೇ ರೀತಿ ಮುಂದುವರಿಸಿದರೆ ಸುಮಾರು ೫೦–೬೦ ವರುಷಗಳಲ್ಲಿ Co ದ ಪ್ರಮಾಣ ಎರಡು ಪಟ್ಟಾಗುತ್ತದೆ. Co ದ ಪ್ರಮಾಣ, ವಾತಾವರಣದಲ್ಲಿ, ಎರಡು ಪಟ್ಟು ಹೆಚ್ಚಾದರೆ ಭೂಮಂಡಲದ ಉಷ್ಣತೆ ೪° ಸೆ ದಷ್ಟು ಹೆಚ್ಚಾಗುತ್ತದೆ ಎಂದು, ಹಾನ್‌ಸನ್ ಎಂಬ ವಿಜ್ಞಾನಿ, ಅತ್ಯಂತ ಸುಧಾರಿತ ಕಂಪ್ಯೂಟರ್ ಬಳಸಿ ಖಚಿತ ಪಡಿಸಿದ್ದಾನೆ. ಭೂಮಂಡಲ ಬೆಚ್ಚಗಾಗುವ ದಕ್ಕೆ ಇದರ ವಂತಿಗೆ ಶೇಕಡಾ ೬೦

ಮೀಥೇನ್ (CH_4):

ಮೀಥೇನ್ ಅನಿಲ ವಾತಾವರಣವನ್ನು ಸೇರುವ ಮೂಲಗಳಲ್ಲಿ ಭತ್ತಗದ್ದೆಗಳು, ನೈಸರ್ಗಿಕ ಜವಳು, ಸಾಗರ ಸರೋವರಗಳು ಮುಖ್ಯವಾದವು. ಪೆಟ್ರೋಲಿಯಮ್ ಬಾವಿಯನ್ನು ಕೊರೆಯುವಾಗ, ನೈಸರ್ಗಿಕ ಅನಿಲವನ್ನು ಸರಬರಾಜು ಮಾಡುವಾಗ ಮೀಥೇನ್ ಅನಿಲ ಸೋರಿ ವಾತಾವರಣವನ್ನು ಸೇರುತ್ತದೆ. ಪಳೆಯುಳಿಕೆ ಹಾಗೂ ಇತರ ಕಾರ್ಬನ್‌ಯುಕ್ತ ಇಂಧನಗಳ ಜ್ವಲನದಿಂದಲೂ, ತಿಪ್ಪೆಗುಂಡಿಗಳಲ್ಲಿ (ಗೋಬರ ಗ್ಯಾಸ್) ಕೊಳಚೆ ನೀರಿನಲ್ಲಿ ಮತ್ತು ನೀರು ತುಂಬಿದ ಗದ್ದೆಗಳಲ್ಲಿ ಅವಾಯುವಿಕ ಪರಿಸ್ಥಿತಿಯಲ್ಲಿ ಸೇಂದ್ರಿಯ ಸಂಯುಕ್ತಗಳು ಮೈಕ್ರೋಬಿಕ್ ವಿಭಜನೆ ಹೊಂದುವುದರಿಂದ ಮತ್ತು ಗೆದ್ದಲುಗಳ ಪಚನನಾಳದಲ್ಲಿ ಮಿಥೇನು ಬಿಡುಗಡೆಯಾಗುತ್ತದೆ. ಎತ್ತು, ಎಮ್ಮೆ, ಆಡು, ಕುರಿ, ಒಂಟೆ ಮುಂತಾದ ಮೇವನ್ನು ಮೆಲಕಾಡಿಸುವ ಸಸ್ಯಾಹಾರಿ ಪ್ರಾಣಿಗಳ ಕರುಳಿನಲ್ಲಿ ಸಂಭವಿಸುವ ಮೈಕ್ರೋಬುಗಳ ಉಪಾಪಚಯ ಕ್ರಿಯೆಯಲ್ಲಿ ಮಿಥೇನ್ ಹೊರಬಂದು ವಾತಾವರಣ ಸೇರುತ್ತದೆ.

ವಾತಾವರಣವನ್ನು ಸೇರಿದ ಮೀಥೇನ್ ಅನಿಲ ಎರಡು ರೀತಿಯಲ್ಲಿ ಅವಸಾನಗೊಳ್ಳುತ್ತದೆ. ವಾತಾವರಣದಲ್ಲಿರುವ ಹೈಡ್ರಾಕ್ಸಿಲ್ ರ್‍ಯಾಡಿಕಲ್‌ಗಳು ಅದನ್ನು ವಿಭಜಿಸುತ್ತ, ಮತ್ತು ಗದ್ದೆಗಳು ಒಣಗಿದ್ದಾಗ ಒಣ ಮಣ್ಣು ವಾತಾವರಣದಲ್ಲಿಯ ಮೀಥೇನನ್ನು ಹೀರಿಕೊಳ್ಳುತ್ತದೆ. ಈ ಕೆಲಸವನ್ನು ಮಣ್ಣಿನಲ್ಲಿರುವ ಮಿಥೆನೊಟ್ರೋಪ್ ಎನ್ನುವ ಸೂಕ್ಷ್ಮ ಜೀವಿಗಳು ಮಾಡುತ್ತವೆ.

ಇಂದು ಮೀಥೇನ್ ವಾತಾವರಣಕ್ಕೆ ಸೇರುವ ಮತ್ತು ಅವಸಾನ ಹೊಂದುವ ಪ್ರಕ್ರಿಯೆಗಳಲ್ಲಿ ಸಮತೋಲನ ತಪ್ಪಿದೆ. ಪ್ರಪಂಚದ ೬ ಬಿಲಿಯನ್ ಬಾಯಿಗಳಿಗೆ ಅನ್ನ ಇಕ್ಕಲು ಹೆಚ್ಚು ಭೂಮಿಗಳನ್ನು ಭತ್ತದ ಗದ್ದೆಗಳಾಗಿ ಸಾಗುವಳಿ ಮಾಡುವುದು, ಅವುಗಳನ್ನು ಒಣಗಲು ಬಿಡದೆ ೨–೩ ಬೆಳೆಗಳನ್ನು ತೆಗೆದುಕೊಳ್ಳುವುದು, ಯೂರಿಯಾ ಮತ್ತು ಅಮೋನಿಯಮ್ ಸಲ್ಫೇಟು ಗೊಬ್ಬರಗಳನ್ನು ಬಳಸುವುದು ಅನಿವಾರ್ಯ. ಈ ಎಲ್ಲ ಕಾರಣಗಳಿಂದಾಗಿ ಮೀಥೇನಿನ ಪ್ರಮಾಣ ೦.೮೫ ಪಿಪಿಎಂ ಇದ್ದದ್ದು ಇಂದು ೧.೭ ಪಿಪಿಎಂ ಮಟ್ಟಕ್ಕೆ ಏರಿದೆ. ಅಲ್ಲದೆ ಇದರ ಸಾಂದ್ರತೆ ಪ್ರತಿವರ್ಷ ೧.೧ ಏರುತ್ತಲಿದ್ದು ಶೀಘ್ರದಲ್ಲಿಯೇ ೩.೩. ಪಿಪಿಎಂ ಮಟ್ಟ ತಲುಪುತ್ತದೆ ಎಂದು ಅಂದಾಜು ಮಾಡಲಾಗಿದೆ. ಭೂಮಂಡಲ ಬೆಚ್ಚಗಾಗುವುದಕ್ಕೆ ಇದರ ವಂತಿಗೆ ಶೇಕಡಾ ೧೫.

ನೈಟ್ರಸ್ ಆಕ್ಸೈಡ್ (N_2O) :— ಮಣ್ಣು ನೈಟ್ರಸ್ ಆಕ್ಸೈಡಿನ ಮುಖ್ಯ ಮೂಲ. ಮಣ್ಣಿನಲ್ಲಿ ಸದಾಕಾಲ ನಡೆಯುತ್ತಿರುವ ನೈಟ್ರಿಫಿಕೇಷನ್ ಮತ್ತು ಡೀ-ನೈಟ್ರಿಫಿಕೇಷನ್ ಎನ್ನುವ ಸೂಕ್ಷ್ಮ ಜೀವಾತ್ಮಕ ಪ್ರಕ್ರಿಯೆಯಲ್ಲಿ ಉತ್ಪನ್ನವಾದ ನೈಟ್ರೋಜನ್ ಅನಿಲ ವಾತಾವರಣದಲ್ಲಿ ಎತ್ತರಕ್ಕೆ ಹೋದಾಗ ಅಲ್ಲಿ ಆಕ್ಸಿಜನ್ ನೊಂದಿಗೆ ವರ್ತಿಸಿ N_2O ಆಗಿ ಪರಿವರ್ತನೆಗೊಳ್ಳುತ್ತದೆ. ನೈಟ್ರೋಜನ್‌ಯುಕ್ತ ಪ್ರತಿ ನೂರು ಟನ್ ಗೊಬ್ಬರ ೩ ಟನ್ N_2O ಉತ್ಪನ್ನಕ್ಕೆ ಕಾರಣವಾಗುತ್ತದೆ. ವಾತಾವರಣದಲ್ಲಿ ಏರುತ್ತಿರುವ N_2O ಪ್ರಮಾಣಕ್ಕೆ ಶೇಕಡಾ ೧೦ ರಷ್ಟಕ್ಕೆ ನೈಲಾನ್ ಉತ್ಪಾದನಾ ಉದ್ಯೋಗ ಕಾರಣವಾಗಿದೆ. ವಾತಾವರಣದಲ್ಲಿ ಇದರ ಅವಸಾನ ಆಕ್ಸಿಜನ್‌ ಮತ್ತು ಓಝೋನ್ ಅನಿಲಗಳೊಂದಿಗೆ ವರ್ತಿಸುವುದರಿಂದ ಆಗುತ್ತದೆ. ಶತಮಾನದ ಪ್ರಾರಂಭಕ್ಕೆ ೦.೨೮೦ ಪಿಪಿಎಂ ಇದ್ದ N_2Oದ ಪ್ರಮಾಣ ಇಂದು ೦.೩೧೦ ಪಿಪಿಎಂಗೆ ತಲುಪಿದೆ. ಒಂದು N_2O ಅಣುವಿನ ಹಸುರುಮನೆ ಪರಿಣಾಮ ಒಂದು CO_2 ಅಣುವಿನ ಪರಿಣಾಮಕ್ಕಿಂತ ೩೦೦ ಪಟ್ಟು ಹೆಚ್ಚಿಗಿದೆ. ಈಗಲೂ ಇದರ ಪ್ರಮಾಣ ವಾತಾವರಣದಲ್ಲಿ ಪ್ರತಿವರ್ಷ ಶೇಕಡಾ ೦.೩ರಷ್ಟು ಏರುತ್ತಲಿದೆ. ಬೆಚ್ಚಗಾಗುವುದಕ್ಕೆ ಇದರ ವಂತಿಕೆ ಶೇಕಡಾ ೫.

ಓಝೋನ್ (O_3): ಇದು ಭೂಮಂಡಲ ಬೆಚ್ಚಗಾಗುವುದಕ್ಕೆ ಶೇಕಡಾ ೨೦ ರಷ್ಟು ಶಾಖಶಕ್ತಿಯನ್ನು ಒದಗಿಸುತ್ತದೆ. ಭೂಮಿಯ ಮೈಯನ್ನು ಬೆಚ್ಚಗಿಡುವಲ್ಲಿ O_3ದ ಪಾತ್ರ ಸಂಕೀರ್ಣದ್ದಾಗಿದೆ. ಟ್ರೊಪೋಸ್ಫಿಯರದಲ್ಲಿ ಕೆಳವಲಯದಲ್ಲಿ O_3 ಏರಿದಾದರೆ ಭೂಮಿಯ ಮೈಯನ್ನು ತಂಪಾಗಿಸಲು ಪ್ರಚೋದಿಸಬಹುದು. ಆದರೆ ಮೇಲಿನ ವಲಯದಲ್ಲಿ O_3ದ ಏರಿದಾಗುವಿಕೆ ಬೆಚ್ಚಗಾಗಲು ಕಾರಣವಾಗಬಹುದು. ಆದರೂ ಟ್ರೊಪೋಸ್ಫಿಯದಲ್ಲಿಯ O_3ವಿನ ಬಗ್ಗೆ ಸರಿಯಾದ ಮಾಹಿತಿ ಇನ್ನೂ ದೊರಕಬೇಕಾಗಿದೆ. ವಾತಾವರಣದಲ್ಲಿ ಓಝೋನಿನ ಮೂಲ ಅಂದರೆ ಪಳಿಯುಳಿಕೆ ಇಂಧನಗಳ ದಹನದಿಂದ ಹೊರಟ ಹಾಗೂ ಮಣ್ಣಿನಲ್ಲಿ ಮೈಕ್ರೋಬುಗಳು ಉತ್ಪಾದಿಸಿದ ನೈಟ್ರೋಜನ್ ಆಕ್ಸೈಡುಗಳ ಮತ್ತು ಹೈಡ್ರೊಕಾರ್ಬನ್ನುಗಳ ಮಧ್ಯದ ರಾಸಾಯನಿಕ ಕ್ರಿಯೆ. ಆರ್ಕ್ಟಿಕದ ಕೆಳವಲಯದಲ್ಲಿಯ ಓಝೋನಿನ ಹೆಚ್ಚಿನ ಪ್ರಮಾಣಕ್ಕೆ ಕಾರಣವಾಗಿದೆ ಭೂಮಂಡಲ ಬೆಚ್ಚಗಾಗುವುದಕ್ಕೆ ಇದರ ವಂತಿಕೆ ಶೇ. ೮.

ಕ್ಲೋರೋಫ್ಲೊರೊ ಕಾರ್ಬನ್ನುಗಳು (CFC): ಇವು ಮಾನವ ಕೃತ ರಾಸಾಯನಿಕ ವಸ್ತುಗಳು. ಇವುಗಳ ಪ್ರಮಾಣ ಇಂದು ವಾತಾವರಣದಲ್ಲಿ ಹಸುರುಮನೆ ಅನಿಲಗಳ ಪ್ರಮಾಣವನ್ನು ಮೀರುತ್ತಲಿದೆ. ಪ್ರಾರಂಭದಲ್ಲಿ ಸ್ಪ್ರೇಡಬ್ಬಿಗಳಲ್ಲಿ ಮುನ್ನೂಕುವ ವಸ್ತುವನ್ನಾಗಿ ಉಪಯೋಗಿಸುತ್ತಿದ್ದ $CFCl_3$ಯನ್ನು ಇಂದೂ ಪ್ಲಾಸ್ಟಿಕ್ ಫೋಮನ್ನು ತಯಾರಿಸುವಲ್ಲಿ ಊದುವ ಗಾಳಿಯಾಗಿ ಉಪಯೋಗಿಸಲಾಗುತ್ತಿದೆ. ರೆಫ್ರಿಜರೇಟರುಗಳಲ್ಲಿ ಪ್ರಶೀತಕದಂತೆ CF_2Cl_2 ಅನಿಲದ ಬಳಕೆ ಶೇಕಡಾ ೫ ಕ್ಕಿಂತ ಹೆಚ್ಚಾಗುತ್ತಲಿದೆ. ಎಲೆಕ್ಟ್ರಾನಿಕ್

ಮೈಕ್ರೋ ಸರ್ಕ್ಯೂಟ್‌ಗಳನ್ನು ತೊಳೆಯಲು ಬಳಸುವ $Cl_2FC-CFCl_3$ ದ್ರಾವಕದ ಬಳಕೆ ಈಗ ಶೇಕಡಾ ೧೧ಕ್ಕಿಂತ ಅಧಿಕವಾಗಿದೆ ಎಂದು ತಿಳಿದುಬಂದಿದೆ.

ಹಸುರುಮನೆ ಅನಿಲಗಳು ಹೀರಿಕೊಳ್ಳಲಾರದ ಅವಕೆಂಪು ವಿಕಿರಣಗಳು ಆಕಾಶಕ್ಕೆ ಪಾರಾಗುತ್ತಿದ್ದವು. ಇದರಿಂದ ಭೂಮಿ ತಂಪಾಗುತ್ತಿತ್ತು. ಆದರೆ ಇಂಥ ಅವಕೆಂಪು ಕಿರಣಗಳನ್ನೇ ಈ CFCಗಳು ಹೀರಿಕೊಳ್ಳುವುದರಿಂದ ಶಾಖ ಹೊರಹೋಗದಂತೆ ಅಡ್ಡಗಟ್ಟಿದಂತಾಗಿ ಉಷ್ಣತೆ ಹೆಚ್ಚಾಗುತ್ತದೆ. ಅದರ ಜೊತೆಗೆ ತಾವು ಹೀರಿಕೊಂಡ ಅವಕೆಂಪು ವಿಕಿರಣಗಳನ್ನು ಭಾಗಶಃ ಶಾಖದ ರೂಪದಲ್ಲಿ ಭೂಮಿಗೆ ಮರಳಿಸುತ್ತವೆ. ಈ ರೀತಿ CFC ಅನಿಲಗಳು ಎರಡು ರೀತಿಯಿಂದ ಉಷ್ಣತೆಯನ್ನು ಹೆಚ್ಚಿಸುವುದರಿಂದ ಮತ್ತು ಇವು ಸ್ಟ್ರಾಟೋಸ್ಫಿಯರದಲ್ಲಿ ಓಝೋನನ್ನು ಧ್ವಂಸ ಮಾಡುವುದರಿಂದ, ಇವುಗಳ ಬಳಕೆಯನ್ನು ನಿಯಂತ್ರಿಸಿದರೆ ಎರಡು ಸಮಸ್ಯೆಗಳಿಗೆ ಒಮ್ಮೆಲೇ ಸಮಾಧಾನ ಪಡೆಯುವಲ್ಲಿ ಸಹಾಯವಾಗಬಲ್ಲದು.

ಭೂಮಂಡಲ ಬೆಚ್ಚಗಾಗುವುದರ ಪರಿಣಾಮಗಳು

ಭೂಮಂಡಲ ಹವಾಮಾನ ಮಾದರಿಗಳು ನುಡಿದ ಭವಿಷ್ಯ ಅಂದರೆ ಮುಂಬರುವ ೫೦ರಿಂದ ೧೦೦ ವರುಷಗಳಲ್ಲಿ CO_2ದ ಪ್ರಮಾಣ ಎರಡರಷ್ಟಾಗಿ ಭೂಮಂಡಲ ೧.೫° ಸೆ ದಿಂದ ೪° ಸೆದಷ್ಟು ಹೆಚ್ಚಿಗೆ ಬೆಚ್ಚಗಾಗುತ್ತದೆ. ಭೂಮಂಡಲ ಬೆಚ್ಚಗಾಗುವುದರಿಂದ ಉಂಟಾಗುವ ತೀವ್ರ ಪರಿಣಾಮ ಅಂದರೆ ಸಮುದ್ರ ಪಾತಳಿ ೦.೫ ಮೀ. ದಿಂದ ೧.೫ ಮೀ. ಹೆಚ್ಚು ಎತ್ತರಕ್ಕೆ ಏರುತ್ತದೆ. ಸಾಗರದ ನೀರು ಬಿಸಿಯಾಗಿ ಪ್ರಸರಣಗೊಳ್ಳುವುದು ಮತ್ತು ಪರ್ವತಗಳ ಹಿಮ ಕರಗಿ ಹೆಚ್ಚಿನ ಪ್ರಮಾಣದಲ್ಲಿ ನೀರು ಸಮುದ್ರ ಸೇರುವುದೇ ಇದಕ್ಕೆ ಕಾರಣ. ಸಮುದ್ರ ಪಾತಳಿ ಏರಿದರೆ ಮಹಾಪೂರಗಳ ಸಂಖ್ಯೆ ಹಾಗೂ ಅವುಗಳ ತೀವ್ರತೆ ಹೆಚ್ಚಾಗುತ್ತವೆ. ಕಡಲ ತೀರದ ರಚನೆ ಹಾಗೂ ತರಿ ಜಮೀನು ಹಾಳಾಗುತ್ತವೆ. ಉಪ್ಪು ನೀರು ನದಿನೀರಿನಲ್ಲಿ ಹೊಕ್ಕು ಕಡಲ ತೀರದ ಪಟ್ಟಣಗಳ ನೀರಿನ ಸರಬರಾಜು ಹದಗೆಡುತ್ತದೆ. ಜಗತ್ತಿನ ಮೂರನೆ ಒಂದು ಭಾಗದಷ್ಟು ಜನವಸತಿ ಸಮುದ್ರ ದಂಡೆಯ ಮೇಲೆಯೇ ಇರುತ್ತದೆ. ಹೀಗಾಗಿ ಸಮುದ್ರ ಪಾತಳಿ ಏರುವುದರಿಂದ ಅನೇಕ ರಾಷ್ಟ್ರಗಳ ಜೀವನ ಗಂಡಾಂತರದಲ್ಲಿ ಸಿಕ್ಕಿಹಾಕಿಕೊಳ್ಳುತ್ತದೆ. ಉದಾಹರಣೆಗೆ ಬಾಂಗ್ಲಾ ದೇಶದ ಜನವಸತಿ ಯೋಗ್ಯವಾದ ಪ್ರದೇಶದ ಶೇಕಡಾ ೧೮ ಭಾಗವನ್ನು ಸಮುದ್ರ ನುಂಗಿಬಿಡುತ್ತದೆ. ಈಜಿಪ್ತ ದೇಶ ಶೇಕಡಾ ೧೯ರಷ್ಟು ಸಾಗುವಳಿ ಭೂಮಿಯನ್ನು ಕಳೆದುಕೊಳ್ಳುತ್ತದೆ. ಸಮುದ್ರ ಪಾತಳಿಯಿಂದ ೨ ಮೀ.ಗಿಂತ ಹೆಚ್ಚು ಎತ್ತರವಿಲ್ಲದ ಭೂಪಾತಳಿ ಹೊಂದಿರುವ ಮಾಲ್ದೀವ ನಡುಗಡ್ಡೆಗಳು, ನೆದರ್‌ಲ್ಯಾಂಡ್ಸ್ ಮತ್ತು ಪ್ಯಾಸಿಫಿಕ್ ನಡುಗಡ್ಡೆಗಳು ಮುಳುಗಿ ಹೋಗುವ ಗಂಡಾಂತರವಿದೆ. ನ್ಯೂಯಾರ್ಕ್, ನ್ಯೂ ಆರ್ಲೆನ್ಸ್, ವೆನಿಸ್, ಬ್ಯಾಂಗ್‌ಕಾಕ್, ಶೈಪೆ ಮುಂತಾದ ಕಡಲ ತೀರದ ಬೃಹತ್ ನಗ

ಗಳು ಮುಳುಗಿ ಹೋಗುವ ಸಂಭವವುಂಟು. ಸಮುದ್ರ ಪಾತಳಿ ೧ ಮೀಟರಿನಷ್ಟು ಏರಿದರೆ ಶೇಕಡಾ ೨೬ರಿಂದ ೬೫ ಭಾಗ ಸಾಗುವಳಿ ಮುಳುಗಿ ಹೋಗುತ್ತದೆ.

ಉಷ್ಣತೆ ಹೆಚ್ಚಾದಂತೆ ಆರ್ದ್ರತೆ ಮತ್ತು ಮಳೆ ಇವುಗಳ ಪ್ರಮಾಣ ಅಲ್ಲದೆ ಗಾಳಿಗಳ ದಿಕ್ಕು ಇವುಗಳಲ್ಲಿ ಅನಿಶ್ಚಿತತೆ ಉಂಟಾಗಿ ಅಕಾಲಮಳೆ, ಮಳೆಯಾಗುವ ಪ್ರದೇಶದಲ್ಲಿ ಮಳೆಯಾಗದಿರುವುದು, ಕೆಲವು ಕಡೆ ಅತಿವೃಷ್ಟಿ ಕೆಲವು ಕಡೆ ಬರಗಾಲ, ಮಹಾಪೂರ ಇವು ಸಂಭವಿಸುವುದುಂಟು. ಈವರೆಗೆ ವಾತಾವರಣದ ಕಟ್ಟುಪಾಡಿನಿಂದಾಗಿ ನಿಯಂತ್ರಣದಲ್ಲಿದ್ದ ರೋಗಧಾರಕ ಸೂಕ್ಷ್ಮಜೀವಿಗಳಿಗೆ ಉಷ್ಣತೆ ಹೆಚ್ಚಾದಾಗ ಅವುಗಳ ಬೆಳವಣಿಗೆಗೆ ಪುಟ ಸಿಕ್ಕು ಹೊಸ ರೋಗಗಳು ಮತ್ತು ಕೀಟಗಳು ಹುಟ್ಟಿಕೊಳ್ಳಬಹುದು. ದಿಲ್ಲಿಯಲ್ಲಿ ಈ ಕೆಲವು ವರುಷಗಳಿಂದ ಕಂಡುಬರುತ್ತಿರುವ ಹೊಸ ಡೆಂಗ್ಯೂ ರೋಗಕ್ಕೆ ಭೂಮಂಡಲ ಬೆಚ್ಚಗಾಗಿರುವುದೇ ಕಾರಣ ಎಂದು ಹೇಳುವುದುಂಟು.

ಒಟ್ಟಿನಲ್ಲಿ ಜೀವಿ—ಪರಿಸರದ ಸಮತೋಲನದ ಧ್ವಂಸ, ಜನವಸತಿಯ ಸ್ಥಾನಭ್ರಷ್ಟತೆ, ಲಕ್ಷಾನುಗಟ್ಟಲೆ ಮಂದಿಗೆ ಉಪವಾಸ, ಗಾಯ, ರೋಗ, ಸಾವು—ನೋವುಗಳು ಸಂಭವ ಎಂದು ಈ ಮಾದರಿಗಳು ಕಂಡುಹಿಡಿದಿವೆ.

ಪರಿಹಾರ

ಈ ಗಂಡಾಂತರದಿಂದ ಪಾರಾಗಲು ಉಪಾಯ ಅಂದರೆ ಹಸುರುಮನೆ ಅನಿಲಗಳನ್ನು ವಾತಾವರಣಕ್ಕೆ ಸೇರಿಸುವುದನ್ನು ಕಡಿಮೆ ಮಾಡುವುದು. ಅರ್ಥಾತ್ ಪೆಟ್ರೋಲಿಯಮ್, ಕಲ್ಲಿದ್ದಲು ಮೊದಲಾದ ಪಳೆಯುಳಿಕೆ ಇಂಧನಗಳ ಜ್ವಲನವನ್ನು ಹಾಗೂ ಸಿಎಫ್‌ಸಿ ಅನಿಲಗಳ ಬಳಕೆಯನ್ನು ಕಡಿಮೆಮಾಡುವುದು. ಆದರೆ ಈ ಘಟ್ಟದಲ್ಲಿ ಕೆಲವು ವಿಜ್ಞಾನಿಗಳು ಅಪಸ್ವರ ಎತ್ತಿದ್ದಾರೆ. ೧,೬೦,೦೦೦ ವರುಷಗಳಷ್ಟು ಹಿಂದಿನಿಂದ ಇಂದಿನವರೆಗೆ ಭೂಮಂಡಲದ ಉಷ್ಣತೆಯಲ್ಲಿ ಹಾಗೂ CO_2 ದ ಪ್ರಮಾಣದಲ್ಲಿ ಆದ ಬದಲಾವಣೆಗಳನ್ನು ಅಭ್ಯಸಿಸಿದಾಗ ಅಂದಾಜು ಪ್ರತಿ ೧೫,೦೦೦ ವರುಷಗಳಿಗೊಮ್ಮೆ ಭೂಮಂಡಲದ ಉಷ್ಣತೆ ಹಾಗೂ CO_2 ದ ಪ್ರಮಾಣ ಹೆಚ್ಚಾಗಿದ್ದು ಕಂಡುಬಂದಿದೆ. ಮಾನವನ ಔದ್ಯೋಗಿಕ ಚಟುವಟಿಕೆ ಇಲ್ಲದೇ ಇದ್ದಾಗಲೂ ಉಷ್ಣತೆ ಏರಿದ್ದರೆ ಈಗ ಏರಿರುವ ಉಷ್ಣತೆ ನೈಸರ್ಗಿಕವಾದ ಏರಿಕೆ ಯಾಕಾಗಿರಬಾರದು? ಹಸುರು ಮನೆಗಳ ಅನಿಲಗಳೇ ಕಾರಣ ಎಂದು ಹೇಗೆ ಹೇಳುವುದು? ಎಂಬ ಪ್ರಶ್ನೆಯನ್ನು ಎತ್ತಿದ್ದಾರೆ. ಈಗ ಉಪಯೋಗಿಸಿದ ಭೂಮಂಡಲ ಹವಾಮಾನ ಮಾದರಿಗಳ ಲೋಪ ಎತ್ತಿತೋರಿಸಿ, ಇಂತಹ ಅಪರಿಪೂರ್ಣ ಮಾದರಿಗಳು ಕಂಡುಹಿಡಿದ ಆಗಬಹುದಾದ ಪರಿಣಾಮಗಳು ಎಷ್ಟು ನಂಬಲರ್ಹ ಎಂದು ಪ್ರಶ್ನಿಸಿದ್ದಾರೆ.

ಇಂತಹ ಸಂಕೀರ್ಣ ಮತ್ತು ಅನಿಶ್ಚಿತತೆಯಿಂದಾಗಿ, ಭೂಮಂಡಲ ಬೆಚ್ಚಗಾಗುವಿಕೆಗೆ ಮೂರು ರೀತಿಯಲ್ಲಿ ಸ್ಪಂದಿಸುತ್ತಾರೆ. ಒಂದು ಗುಂಪಿನ ಪ್ರಕಾರ ಭೂಮಂಡಲ ಬೆಚ್ಚಗಾಗುವಿಕೆ ನಿಶ್ಚಿತ ಮತ್ತು ಅದರಿಂದ ಉಂಟಾಗುವ ಪರಿಣಾಮಗಳೂ ಭೀಕರ. ಆದ್ದರಿಂದ ಪರಿಹಾರ ಕಾರ್ಯಗಳನ್ನು

ಕೈಕೊಳ್ಳಲೇಬೇಕು. ಎರಡನೆಯ ಗುಂಪಿನ ವಿಜ್ಞಾನಿಗಳ ಪ್ರಕಾರ, ಈಗ ಒಂದು ರೀತಿಯ ಜೀವನಕ್ಕೆ ಒಗ್ಗಿ ಹೋಗಿದ್ದೇವೆ. ಹಸುರುಮನೆ ಅನಿಲಗಳನ್ನು ವಾತಾವರಣಕ್ಕೆ ಸೇರಿಸದೇ ಸುಖವಾಗಿ ಜೀವನ ನಡೆಸುವುದು ಅಸಾಧ್ಯ. ಆದ್ದರಿಂದ ಭೂಮಂಡಲ ಬೆಚ್ಚಗಾದರೆ ಆಗಲಿ ಅದಕ್ಕೆ ನಾವು ಹೊಂದಿಕೊಂಡು ಹೋಗುವುದೇ ಲೇಸು. ಬೆಚ್ಚಗಿನ ವಾತಾವರಣದಲ್ಲಿ ಇರಲು ಮನುಷ್ಯ ಯೋಜನೆಗಳನ್ನು ಹಾಕಬೇಕು ಮತ್ತು ಕಲಿಯಬೇಕು. ಮೂರನೆಯ ಗುಂಪಿನ ವಿಜ್ಞಾನಿಗಳ ಅಭಿಪ್ರಾಯ ಅಂದರೆ ಇಷ್ಟೆಲ್ಲ ಅನಿಶ್ಚಿತತೆ ಇರುವಾಗ ಅದರ ಬಗ್ಗೆ ತಲೆ ಕೆಡಿಸಿಕೊಳ್ಳುವುದುಬೇಡ. ಹೆಚ್ಚು ಮತ್ತು ನಿಶ್ಚಿತ ಮಾಹಿತಿ ದೊರಕಿದ ಬಳಿಕ ವಿಚಾರಿಸುವುದು ಸರಿ.

ಈಗ ವಿಜ್ಞಾನಿಗಳಲ್ಲಿ ಎಷ್ಟೇ ಭಿನ್ನಾಭಿಪ್ರಾಯವಿದ್ದರೂ, ಭೂಮಂಡಲ ಬೆಚ್ಚಗಾಗುತ್ತಿದೆ, ಹಸುರುಮನೆ ಅನಿಲಗಳ ಪ್ರಮಾಣ ಹೆಚ್ಚುವಲ್ಲಿ ಮಾನವನ ಔದ್ಯೋಗಿಕ ಚಟುವಟಿಕೆಗಳೇ ಕಾರಣ ಎನ್ನುವಲ್ಲಿ ಭಿನ್ನಾಭಿಪ್ರಾಯವಿಲ್ಲ. ಭಿನ್ನಾಭಿಪ್ರಾಯ ಇರುವುದು ಯಾವಾಗ ಬೆಚ್ಚಗಾಗುತ್ತದೆ? ಎಷ್ಟು ಬೆಚ್ಚಗಾಗುತ್ತದೆ ಅನ್ನುವ ವಿಚಾರದಲ್ಲಿ ಮಾತ್ರ. ಅಂದರೆ ಉಷ್ಣತೆಯ ಏರಿಕೆ ೧°ಸೆ. ಇರಬಹುದು ಅಥವಾ ೪.೫°ಸೆ. ಆಗಬಹುದು ಮತ್ತು ಈ ಏರಿಕೆ ೫೦ ವರುಷಗಳಲ್ಲಿ ಆಗಬಹುದು ಅಥವಾ ೧೦೦ ವರುಷಗಳೇ ಬೇಕಾಗಬಹುದು. ಒಟ್ಟಿನಲ್ಲಿ ಮುಂಬರುವ ಕೆಲ ವರುಷಗಳಲ್ಲಿ ಭೂಮಂಡಲ ಬೆಚ್ಚಗೆ ಆಗುವುದಂತೂ ನಿಜ. ಆದರೆ ಮಾದರಿಗಳು ಊಹಿಸಿದ ದುಷ್ಪರಿಣಾಮಗಳ ತೀವ್ರತೆಯಲ್ಲಿ ಹೆಚ್ಚುಕಡಿಮೆ ಆಗಬಹುದು. ಆದ್ದರಿಂದ ಭೂಮಂಡಲ ಬೆಚ್ಚಗಾಗದಂತೆ ಪರ್ಯಾಯ ಕಂಡುಹಿಡಿಯದೇ ಮತ್ತು ಆಗಬಹುದಾದ ನಷ್ಟಕ್ಕೆ ಪರಿಹಾರಕಂಡುಹಿಡಿಯದೇ ಕೈಕಟ್ಟಿ ಕುಳಿತುಕೊಳ್ಳುವುದು ಮಹಾ ಅಪಾಯಕಾರಿ. ಊಹೆಯ ಆಟವೇ ಗಂಡಾಂತರಕಾರಿ ಆಟ ಆದರೆ ಸಂಭವಿಸಬಹುದಾದ ವಿಪತ್ತಿಗಾಗಿ ಅಂಧರಾಗಿ ಹಾಗೂ ನಿಷ್ಕ್ರಿಯರಾಗಿ ಕಾಯುತ್ತಾ ಕುಳಿತುಕೊಳ್ಳುವುದು ಅದಕ್ಕಿಂತ ಅಪಾಯಕಾರಿ.

———

ಶೀಲ ಪ್ರಗತಿಗೆ ಮೂಲ, ಸಂಪತ್ತಿಗೆ ತಳಹದಿ, ಆನಂದ ಶಾಂತಿಗಳಿಗೆ ಮಾರ್ಗ

—ಗಾಂಧೀಜಿ

ಪುಸ್ತಕ ಪರಿಚಯ

ಕರ್ನಾಟಕದ ರೂವಾರಿ (ಶ್ರೀ ಎಸ್. ನಿಜಲಿಂಗಪ್ಪನವರ ಜೀವನ ಚರಿತ್ರೆ) —ಲೇಖಕರು: ಪ್ರೊ॥ ದೇ. ಜವರೇಗೌಡರು; ಪ್ರಕಾಶಕರು: ಸಂವಹನ ೧೨/೧ ಈವ್ನಿಂಗ್ ಬಝಾರ್ ಹಿಂಭಾಗ, ಶಿವರಾಮಪೇಟೆ, ಮೈಸೂರು–೧ ಮೊದಲನೆಯ ಮುದ್ರಣ ೧೯೮೫, ಎರಡನೆಯ ಮುದ್ರಣ ೧೯೯೮, ಪುಟಗಳು ೪೮೦, ಸಚಿತ್ರ, ರೂ ೧೭೫.

ಹರಿಹರಕ್ಕೆ ಹತ್ತಿರದ ಒಂದು ಹಳ್ಳಿ ಹಲವಾಗಲು. ಇಲ್ಲಿಯ ಒಂದು ಸಭ್ಯ ಸುಸಂಸ್ಕೃತ ಆದರೆ ಆರ್ಥಿಕವಾಗಿ ನಿಮ್ನ ಕುಟುಂಬದ ಅಡವಿಯಪ್ಪ–ನೀಲಮ್ಮ ದಂಪತಿಗಳಿಗೆ ದಿನಾಂಕ ೧೦ ಡಿಸೆಂಬರ್ ೧೯೦೨ ರಂದು ಜನಿಸಿದ ಶಿಶುವೇ ಮುಂದೆ ಕರ್ನಾಟಕದ ರೂವಾರಿ ಎಸ್. ನಿಜಲಿಂಗಪ್ಪನವರಾಗಿ ಪ್ರವರ್ಧಿಸುವುದೆಂದು ಆಗ ಯಾರಾದರೂ ಊಹಿಸಿರುವುದು ಕೂಡ ಅಸಾಧ್ಯ. ಪ್ರಸಕ್ತ ಬೃಹತ್ಕೃತಿ ಇವರ ಜೀವನ ಚರಿತ್ರೆ, ಪರ್ಯಾಯವಾಗಿ ರಾಜಕೀಯ ಇತಿಹಾಸವೂ ಹೌದು.

ನಿಜಲಿಂಗಪ್ಪನವರು ಭಾರತದ ನವ ಮನ್ವಂತರ-ಪರ್ವದಲ್ಲಿ ಸ್ವಾತಂತ್ರ್ಯಾಂದೋಲನ, ೧೯೪೭ರಲ್ಲಿ ಸ್ವಾತಂತ್ರ್ಯ ಸಿದ್ಧಿ, ಪ್ರಜಾಪ್ರಭುತ್ವದ ಏರಿಳಿತಗಳು, ರಾಜ್ಯಗಳ ಪುನರ್ವಿಂಗಡಣೆ, ಅಂತಾರಾಷ್ಟ್ರೀಯ ಸಂಬಂಧಗಳು ಇತ್ಯಾದಿ–ನಿರ್ಣಾಯಕ ಪಾತ್ರ ನಿರ್ವಹಿಸಿ, ಖಾಸಗಿ ಮತ್ತು ಸಾರ್ವಜನಿಕ ಜೀವನಗಳಲ್ಲಿ ರುಚಿ ಶುಚಿ ಕಾಪಾಡಿಕೊಂಡು ಬಂದು, ಇಂದು ರಾಷ್ಟ್ರದ ಮೌಲ್ಯನಿಷ್ಠ ವರಿಷ್ಠ ನಾಯಕರಾಗಿದ್ದಾರೆ. ಈ ಇಳಿವಯಸ್ಸಿನಲ್ಲಿಯೂ ಜೀವನೋತ್ಸಾಹ ಕುಂದಿಲ್ಲ. ಲೇಖಕರು ಸಕಾರಣವಾಗಿಯೇ ಸಮಾರೋಪಿಸಿದ್ದಾರೆ: 'ನಿಜಲಿಂಗಪ್ಪನವರು ಕುಳಿತಲ್ಲಿ ನಿಂತಲ್ಲಿ ಭ್ರಷ್ಟಾಚಾರದ ವಿರುದ್ಧ ಕಠಿಣವಾಗಿ ಮಾತಾಡುತ್ತಾರೆ. ಗಾಂಧೀಜಿ ಕಂಡ ಕನಸಿನ ಭಾರತ ನಿರ್ಮಾಣವಾಗಲಿಲ್ಲವಲ್ಲ, ಅವರ ಸಂದೇಶವನ್ನು ಆಚರಿಸಲಿಲ್ಲವಲ್ಲ ಎಂಬ ಕೊರಗು ಇವರ ಬದುಕನ್ನೆಲ್ಲ ವ್ಯಾಪಿಸಿಕೊಂಡಿದೆ. ೧೯೯೭ನೆಯ ಸಂವತ್ಸರದ ಗಾಂಧೀ ಜಯಂತಿಯಂದು ದೆಹಲಿಯಲ್ಲಿದ್ದು, ಗಾಂಧೀ ತತ್ತ್ವದಲ್ಲಿ ವಿಶ್ವಾಸವಿರುವ ನಾಯಕರ ಸಭೆ ಸೇರಿಸಿ, ಗಾಂಧೀ ವೇದಿಕೆಯನ್ನು ಸ್ಥಾಪಿಸಿದರು. ಇದೇ

ಅವರ ಗೌರವಾಧ್ಯಕ್ಷರು....ಇವರ ಯಶಸ್ಸಿನ ಹಾಗೂ ದೀರ್ಘಾಯುಸ್ಸಿನ ಗುಟ್ಟು ಇವರ ಮನಶ್ಶುದ್ಧಿಯಲ್ಲಿದೆ, ಇವರ ಕ್ರಿಯಾಶುದ್ಧಿಯಲ್ಲಿದೆ". ನಿಜ, ಎಸ್ ಎನ್ (SN) ಎಂಬ ಎರಡು ಅಕ್ಷರಗಳು ಸತ್ಯನಿಷ್ಠ ಎಂಬ ವಾಸ್ತವತೆಯನ್ನು ಪ್ರತೀಕಿಸುವುದು ನಿಜಲಿಂಗಪ್ಪನವರ ಹೋರಾಟದ ಬದುಕಿಗೆ ಹಿಡಿದ ಕನ್ನಡಿ.

ಅವರ ಪಾರದರ್ಶಕ ಮತ್ತು ಆಕರ್ಷಕ ವ್ಯಕ್ತಿತ್ವವನ್ನು ರೂಪಿಸಿರುವ ಪಂಚಶೀಲಗಳಿವು: ರಾಷ್ಟ್ರಪ್ರೇಮ, ಆರ್ಜವ, ವೈಚಾರಿಕತೆ, ಕ್ರಿಯಾಶೀಲತೆ ಮತ್ತು ಜೀವಕಾರುಣ್ಯ. ಶೀಲದ ಪರಿಮಳ ವಿನಯ, ವಿನಯದ ತಳಹದಿ ಶೀಲ, ಶೀಲ–ವಿನಯ ಸಂಲಗ್ನತೆಯೇ ಋಜು ವ್ಯಕ್ತಿತ್ವ ಎಂಬ ಸೂಕ್ತಿಗೆ ಇವರ ಜೀವನ ಮತ್ತು ಸಾಧನೆ ದಿವ್ಯನಿದರ್ಶನ. ನಿಜಲಿಂಗಪ್ಪನವರ ಸುದೀರ್ಘ ರಾಜಕೀಯ ಜೀವನದಲ್ಲಿ ಹೇಗೆ ಈ ಮೇಲಿನ ಒಂದೊಂದು ಶೀಲವೂ ಇವರನ್ನು ನೇರ ಹಾದಿ ಮೇಲೆ ಮುನ್ನಡೆಸಿತು ಎನ್ನುವುದಕ್ಕೆ ವಿಪುಲ ನಿದರ್ಶನಗಳು ಈ ಗ್ರಂಥದಲ್ಲಿವೆ. ಪೀಠಿಕೆಯಲ್ಲಿ ದೇಜಗೌ ಬರೆದಿದ್ದಾರೆ: "ಜೀವನ ಚರಿತ್ರೆ ಒಬ್ಬನೊಬ್ಬ ವ್ಯಕ್ತಿಯ ವಿಕಾಸದ ಕಲಾಭಿವ್ಯಕ್ತಿಯೂ ಹೌದು, ಇತಿಹಾಸದ ಮಹಾಮಾತೃಕೆಯೂ ಹೌದು, ಮೇಲಾಗಿ ಅದೊಂದು ವಸ್ತುನಿಷ್ಠ ಸಮಾಜಪುಷ್ಟ ಕಲ್ಪನಾರಹಿತ ಗದ್ಯಕಥನವೂ ಹೌದು." ಲೇಖಕರ ಆಶಯಕ್ಕೆ ಸಾಕ್ಷಿಯಾಗಿ ಇಡೀ ಗ್ರಂಥವೇ ನಮಗೆ ಆಕರ ವಸ್ತುವನ್ನು ಕಲಾತ್ಮಕವಾಗಿ ಒದಗಿಸುತ್ತದೆ. ದೇಜಗೌ ಅವರ ಸಶಕ್ತ ಗದ್ಯಕಥನಕ್ಕೆ ಕೆಲವು ನಿದರ್ಶನಗಳು:

"ನೌಕರಿ ಮನುಷ್ಯ ಬುದ್ಧಿಯನ್ನು ಕರಟಿಸುತ್ತದೆ, ಸ್ವಾಭಿಮಾನವನ್ನು ಮಣ್ಣುಗೂಡಿಸುತ್ತದೆ, ಸ್ವಾತಂತ್ರ್ಯವನ್ನು ಕಸಿದುಕೊಳ್ಳುತ್ತದೆ, ವ್ಯಕ್ತಿತ್ವವನ್ನು ಕುಬ್ಜಗೊಳಿಸುತ್ತದೆ." ನಿಜಲಿಂಗಪ್ಪನವರು ಎಂದೂ ನೌಕರಿಯ ನೊಗಕ್ಕೆ ಕತ್ತೊಡ್ಡಲಿಲ್ಲ.

"ತಾನು ಇಷ್ಟಪಡುವ ಹೆಣ್ಣನ್ನು ಮದುವೆಯಾಗುವುದಕ್ಕಿಂತ ಮದುವೆಯಾದ ಹೆಣ್ಣನ್ನು ಇಷ್ಟಪಡುವುದೇ ಗಂಡನ ಧರ್ಮ." ನಿಜಲಿಂಗಪ್ಪನವರು ತಮ್ಮ ಪತ್ನಿ ಕುರಿತಂತೆ ಮಾತ್ರವಲ್ಲ ಪಾಲಿಗೆ ಬಂದ ಹೊಣೆ ಕುರಿತಂತೆ ಕೂಡ ಈ ಧರ್ಮ ಪಾಲಿಸಿ ಕೃತಕೃತ್ಯರಾದರು.

"ಶಿವ ಸರ್ವವ್ಯಾಪಿ ಎಂದಾದರೆ ಇಷ್ಟಲಿಂಗದ ಅಗತ್ಯ ಉಂಟೇ? ಸದಾ ಚಲಾವಣೆಯಲ್ಲಿರಬೇಕಾದ ನಾಣ್ಯವನ್ನು ಆಭರಣಗಳಲ್ಲಿ ಸೆರೆಹಿಡಿಯುವುದಾದರೆ ಸಮಾಜಕ್ಕೆ ಒಳಿತಾಗುವುದಿಲ್ಲ." ಇವು ನಿಜಲಿಂಗಪ್ಪನವರ ವೈಜ್ಞಾನಿಕ ದೃಷ್ಟಿಗೆ ನಿದರ್ಶನಗಳು.

ಕರ್ನಾಟಕ ಏಕೀಕರಣ ಸಾಧಿಸುವಲ್ಲಿ, ರಾಷ್ಟ್ರೀಯ ಕಾಂಗ್ರೆಸ್ಸಿನ ನೇತಾರರಾಗಿ ಆ ವಟವೃಕ್ಷದ ಸಮರ್ಥ ನಿರ್ವಹಣೆಯಲ್ಲಿ, ೧೯೬೯ರ ಕಾಂಗ್ರೆಸ್ ಮಹಾಸ್ಫೋಟದಲ್ಲಿ ಇಂದಿರಾಗಾಂಧಿಯವರ ಎದುರು ನಿಂತು ರಾಷ್ಟ್ರಕ್ಕೆ ಸರಿದಾರಿ ತೋರಿಸುವಲ್ಲಿ, ಮತ್ತೆ ಜನತಾಪಕ್ಷ ಸ್ಥಾಪಿಸಿ ಅದಕ್ಕೆ ಸೈದ್ಧಾಂತಿಕ ಬುನಾದಿ ಕಟ್ಟುವುದರಲ್ಲಿ ನಿಜಲಿಂಗಪ್ಪನವರ ತತ್ತ್ವನಿಷ್ಠೆ ಮತ್ತು ಬಹುಶ್ರುತತೆ ಹೇಗೆ ಪರಿಣಾಮಕಾರೀ ಧುರೀಣತ್ವ ಒದಗಿಸಿತು

ಎಂಬ ಸಂಗತಿಗಳು ಓದುಗನ ಮನಃ ಪಟಲದಲ್ಲಿ ಅರ್ಥಪೂರ್ಣ ದೃಶ್ಯಗಳಾಗಿ ಪಡಿಮೂಡುತ್ತವೆ. ಇದೊಂದು ಉತ್ಕೃಷ್ಟ ಜೀವನಚರಿತ್ರೆಯಾಗಿ ಮಾತ್ರವಲ್ಲ ಶ್ರೇಷ್ಠ ಗದ್ಯ ಕಾವ್ಯವಾಗಿ ಕೂಡ ಓದುಗನಿಗೆ ಪ್ರಿಯವಾಗುತ್ತದೆ.

ಸಮಕಾಲೀನ ಹಿರಿಯ ವ್ಯಕ್ತಿಗಳ ಜೀವನ ಚರಿತ್ರೆಗಳನ್ನು ನಾವೇಕೆ ಓದಬೇಕು? ಮೂರು ಮುಖ್ಯ ಕಾರಣಗಳಿವೆ: ಮನುಕುಲದ ಯಾವುದೋ ಅನೂಹ್ಯ ಅಭೀಪ್ಸೆಗೆ ಅವರು ಅಭಿವ್ಯಕ್ತಿ ಮಾಧ್ಯಮವಾಗುತ್ತಾರೆ, ಅವರು ವರ್ತಮಾನ ಸಮಾಜಿಕ ಘಟನೆಗಳ ನಿರ್ಮಾಪಕರು ಮತ್ತು ನಮಗೆ ವೈಯಕ್ತಿಕ ನೆಲೆಯಲ್ಲಿ ತೀರ ನಿಕಟರಾಗಿ ನಮ್ಮ ಚಿಂತನ ವಿಧಾನವನ್ನು ಪ್ರಭಾವಿಸುತ್ತಾರೆ. ಇಂಥ ಒಂದು ಘನ ಕೃತಿ "ಕರ್ನಾಟಕದ ರೂವಾರಿ".

ಇಲ್ಲಿ ಆನುಷಂಗಿಕವಾಗಿ ಇನ್ನೊಂದು ಸಂಗತಿಯನ್ನು ಪ್ರಸ್ತಾಪಿಸಬೇಕು. "ಹೋರಾಟದ ಬದುಕು" ದೇಜಗೌ ಅವರ ಆತ್ಮಚರಿತ್ರೆ. ಶ್ರೀಯುತರು ನಿಕಟಪರಿಚಯ ಮತ್ತು ಸಾಹಚರ್ಯ ಒದಗುವ ಮೊದಲೇ ಇದನ್ನು ಓದಿ "ಇಂಥವನೊಬ್ಬ ಇರುವುದು ಸಾಧ್ಯವೇ ?" ಎಂದು ಬೆರಗಾಗಿದ್ದೆ. ಮುಂದೆ ಅಯಾಚಿತವಾಗಿ ಅವರ ಆತ್ಮೀಯ ಸಂಪರ್ಕ ದೊರೆತಾಗ ಅದು ಸಾಧ್ಯ ಎಂಬುದು ಅರಿವಾಯಿತು; ಮಿಗಿಲಾಗಿ ಅಂಥ ಎತ್ತರ ಎಂಥ ತಪಸ್ಸಿಗೆ ಮಾತ್ರ ಸಿದ್ಧಿಸುತ್ತದೆ ಎನ್ನುವುದೂ ಸ್ಪಷ್ಟವಾಯಿತು. "ಕರ್ನಾಟಕದ ರೂವಾರಿ"ಯನ್ನು ಈ ಹೋರಾಟದ ಬದುಕಿನ "ಕನ್ನಡದ ರೂವಾರಿ"ಯವರು ಕಡೆದಿರುವುದು ಇತಿಹಾಸದ ಅಂತಸ್ಸತ್ತ್ವಕ್ಕೆ ಒಂದು ಜ್ವಲಂತ ನಿದರ್ಶನ: ಮೇರುಮಾತ್ರ ಹಿಮಾಲಯವನ್ನು ಕುಂಚಿಸಬಲ್ಲದು.

ಜಿ. ಟಿ. ನಾರಾಯಣರಾವ್
ನಂ. ೮, 'ಅತ್ರಿ,' ಕಾಮಾಕ್ಷಿ ಆಸ್ಪತ್ರೆ ರಸ್ತೆ
ಸರಸ್ವತೀಪುರ
ಮೈಸೂರು ೫೭೦ ೦೦೯

* * * * *

ವಿಶ್ವದಕಥೆ—ಲೇಖಕರು: ಜಿ. ಟಿ. ನಾರಾಯಣರಾವ್, ಪ್ರಕಾಶನ: ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್, ಕವಿಶೈಲ, ಜಯಲಕ್ಷ್ಮೀಪುರ ಮೈಸೂರು–೧೨, ೧೯೯೯, ಪುಟ ೫೮+xiv, ಬೆಲೆ ರೂ ೧೮–೦೦

ಕರ್ನಾಟಕದಲ್ಲಿ ವಿಜ್ಞಾನಿಗಳಿಗೆ ಕೊರತೆ ಇಲ್ಲ, ವೈಜ್ಞಾನಿಕ ಸಾಧನೆಗೆ ಕೊರತೆ ಇಲ್ಲ. ಇರುವುದೆಲ್ಲಾ ವಿಜ್ಞಾನ ಸಂಬಂಧಿ ಕನ್ನಡ ಪುಸ್ತಕಗಳ ಕೊರತೆ! ಅಲ್ಲೊಂದು ಇಲ್ಲೊಂದು ವಿಶ್ವಕೋಶ, ವಿಜ್ಞಾನ ವಿಶ್ವಕೋಶಗಳು ಅಥವಾ ಜ್ಞಾನವಿಜ್ಞಾನ

ಕೋಶಗಳನ್ನು ಬಿಟ್ಟರೆ ವಿಜ್ಞಾನಸಂಬಂಧದ ವಿಷಯಗಳು ದೊರೆಯುವುದು ಹತ್ತನೇ ತರಗತಿಯವರೆಗಿನ ಪಠ್ಯಪುಸ್ತಕಗಳಲ್ಲಿ ಮಾತ್ರ ಎನ್ನುವುದು ನಿಜಕ್ಕೂ ವ್ಯಥೆಯನ್ನುಂಟು ಮಾಡುತ್ತದೆ. ಇಂಥ ಮರಳುಗಾಡಿನಲ್ಲಿ ಆಗಾಗ ಓಯಸಿಸ್ ಅನ್ನು ಕಾಣಿಸುವ ಹಿರಿಮೆ ಶ್ರೀ ಜಿ. ಟಿ. ನಾರಾಯಣರಾವ್ ಅವರದು. ಗಣಿತ ಮತ್ತು ಖಗೋಳ ವಿಜ್ಞಾನಗಳ ಪ್ರಾಧ್ಯಾಪಕರಾಗಿ ಮತ್ತು ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ವಿಶ್ವಕೋಶದ ವಿಜ್ಞಾನ ವಿಭಾಗದ ಸಂಪಾದಕರಾಗಿ ದುಡಿದು ಅವರು ಗಳಿಸಿರುವ ಜ್ಞಾನ ಅವರ ವೈಜ್ಞಾನಿಕ ಬರಹದ ಬೆನ್ನೆಲುಬಾಗಿದೆ. ಈ ಅಪಾರ ಜ್ಞಾನದ ಸಣ್ಣ ತುಣುಕು 'ವಿಶ್ವದಕಥೆ' ಪುಸ್ತಕದಲ್ಲಿ ವ್ಯಕ್ತವಾಗಿದೆ.

ಸಾಮಾನ್ಯರಿಗೆ ಮಾತ್ರವಲ್ಲ, ಮಹಾ ವಿಜ್ಞಾನಿಗಳಿಗೂ ಕೂಡ ಹಿರಿದಾದ ಸವಾಲನ್ನು ಒಡ್ಡಿರುವ ಈ ವಿಶ್ವದ ಆರಂಭ ಹೇಗೆ ಆಗಿರಬಹುದು? ಅಂತ್ಯ ಹೇಗೆ ಬರಬಹುದು ಮುಂತಾದ ಪ್ರಶ್ನೆಗಳು ಚಿರಂತನ ಅಷ್ಟೇ ಚಿರನೂತನ. ವಿಶ್ವ ಎಂದರೇನು? ಎಂಬ ಪ್ರಶ್ನೆಗೆ ಆದಿ ಗೊತ್ತಿರದ, ಅಂತ್ಯ ತಿಳಿದಿರದ ಆವರೆ ವರ್ತಮಾನ ಮಾತ್ರ ಅನುಭವಕ್ಕೆ ಬರುವ ಚಿರಂತನ ಒಗಟು ಅದು ಎಂಬ ಉತ್ತರವೇ ಲಭಿಸುವುದು. ಆದರೆ ವಿಶ್ವ ಒಂದು ನಿಗೂಢ ಒಗಟು ಎಂದು ಸತ್ಯಾನ್ವೇಷಣ ತತ್ಪರರಾದ ಮಹಾ ಖಗೋಳ ವಿಜ್ಞಾನಿಗಳು ಕೈಕಟ್ಟಿ ಕೂರುವುದಾದರೂ ಹೇಗೆ? ತಮ್ಮ ವ್ಯಾಪ್ತಿಗೆ ಬಂದಷ್ಟು, ಬಂದಂಥ ವಿಷಯಗಳನ್ನು ಕುರಿತು ಶೋಧನೆಗೆ ತೊಡಗಿ ತಿಳಿದ ವಿಚಾರಗಳನ್ನು ಜಗತ್ತಿಗೆ ಬಿಟ್ಟುಕೊಡುವುದು ಅವರ ಜಾಯಮಾನ. ಅಂಥವರ ಶೋಧಗಳಲ್ಲಿ ಸಾಮಾನ್ಯರಿಗೆ ತಿಳಿಯಬಹುದಾದಷ್ಟನ್ನು ಆದಷ್ಟು ಸರಳವಾಗಿ ತಿಳಿಸುವ ಪ್ರಯತ್ನವನ್ನು ಇಲ್ಲಿ ಲೇಖಕರು ಮಾಡಿದ್ದಾರೆ. ಅರಿಕೆಯಲ್ಲಿ ಅವರೇ ನುಡಿಯುವಂತೆ, ಆಧುನಿಕ ವಿಜ್ಞಾನವು ವಿಶ್ವದ ಬಗ್ಗೆ ಇಂದು ಏನು ಹೇಳುತ್ತದೆ ಎಂಬುದರ ಸ್ಥೂಲ ಜನಪ್ರಿಯ ನಿರೂಪಣೆ ಇಲ್ಲಿದೆ.

ಹದಿನೈದು ವಿಭಾಗಗಳನ್ನು ಹೊಂದಿರುವ ಈ ಕಥೆಯು ವಿಭಾಗದಿಂದ ವಿಭಾಗಕ್ಕೆ ಕುತೂಹಲವನ್ನು ಕೆರಳಿಸಿಕೊಂಡು ಹೋಗುತ್ತದೆ. ಶೈಲಿಯಂತೂ ಅಜ್ಜಿ ಮೊಮ್ಮಕ್ಕಳನ್ನು ಸುತ್ತಲೂ ಕೂರಿಸಿಕೊಂಡು ಅಕ್ಕರೆಯಿಂದ, ಆತ್ಮೀಯತೆಯಿಂದ ಕಥೆಯ ಸಂಚಿಯನ್ನು ಬಿಚ್ಚುವಂತಿದೆ. ಮೂರು ಉಲ್ಲೇಖನಗಳು, ವಿಶ್ವ ಎಂದರೇನು? ಡಾಪ್ಲರ್ ಪರಿಣಾಮ, ವ್ಯಾಕೋಚನಶೀಲ ವಿಶ್ವ, ವಿಶ್ವದ ಆದಿ, ಮಹಾಬಾಜಣೆ, ಮಹಾಬಾಜಣೆಯ ತರುವಾಯ, ಐತಿಹಾಸಿಕ ಸೂಪರ್ನೋವಾಗಳು, ನೋವಾತಾರೆಯ ಎರವಲು ವೈಭವ, ಸೂಪರ್ನೋವಾ-ಆಸ್ಫೋಟನೆ, ಕೃಷ್ಣವಿವರ–ನಕ್ಷತ್ರ ಲೋಕದ ವೈಕುಂಠ, ಅಂತರಬಹ್ಮಾಂಡ ಗುರುತ್ವ ಮಸೂರ, ಯಾರಲ್ಲಿ ನಮ್ಮನ್ನು ಕರೆಯುತ್ತಿರುವುದು! ಭೂಮ್ಯತೀತ ಬುದ್ಧಿವಂತಿಕೆ! ನಾವು ಸೂಪರ್ನೋವಾ ಸಂಜಾತರೇ ಹೀಗೆ ಒಂದೊಂದು ವಿಭಾಗದಲ್ಲೂ ಉಸಿರು ಬಿಗಿ ಹಿಡಿವ ಉಲ್ಲೇಖಗಳನ್ನು ವಿವರಿಸುತ್ತಾ ಬಂದು ಕಡೆಗೆ ಮುಂದೇನು? ಎಂಬ

ಪ್ರಶ್ನಾರ್ಥಕ ಚಿಹ್ನೆಯನ್ನು ಕಥೆಯ ಅಂತ್ಯಕ್ಕೆ ನೀಡುತ್ತಾರೆ.

ಮೂರು ಉಲ್ಲೇಖನಗಳಲ್ಲಿ ಐನ್‌ಸ್ಟೈನ್, ಸೆನೆಕಾ ಮತ್ತು ಕಾರ್ಲ್‌ಸಗಾನ್ ಈ ಮಹಾನ್ ಶ್ರೇಷ್ಠವ್ಯಕ್ತಿಗಳು ವಿಶ್ವದಬಗೆಗೆ, ವಿಶ್ವರಹಸ್ಯದ ಬಗೆಗ ಮಾಡಿರುವ ಚಿಂತನೆಗಳ ಉಲ್ಲೇಖಿತವಾಗಿದ್ದರೆ, ವಿಶ್ವ ಎಂದರೇನು ? ವಿಭಾಗದಲ್ಲಿ ಕಣ್ಣಿಗೆ ಕಾಣುವ ಮತ್ತು ಕಾಣದಿರುವ ಸಮಸ್ತ ಆಕಾಶಕಾಯಗಳನ್ನು ಒಳಗೊಂಡಿರುವ ಸಮುದಾಯಕ್ಕೆ ವಿಶ್ವವೆಂದು ಹೆಸರು ಎಂದು ಹೇಳಿ, ನಮ್ಮ ಮನೆ ಭೂಮಿ, ಇದು ಸೂರ್ಯಕೇಂದ್ರವಾಗುಳ್ಳ ಸೌರವ್ಯೂಹದಲ್ಲಿದೆ ನಿರ್ದಿಷ್ಟ ಗುರುತ್ವಾಕರ್ಷಣ ವ್ಯವಸ್ಥೆಗೆ ಬಂಧಿತವಾಗಿರುವ ಇಂತಹ ನಕ್ಷತ್ರ ಸಮುದಾಯಕ್ಕೆ ಬ್ರಹ್ಮಾಂಡ, ಆಕಾಶಗಂಗೆ ಎಂಬ ಹೆಸರು. ನಮ್ಮ ಬ್ರಹ್ಮಾಂಡದಲ್ಲಿ ನಾಲ್ಕು ಲಕ್ಷ ಕೋಟಿ ನಕ್ಷತ್ರ ವ್ಯೂಹಗಳಿದ್ದರೆ ಇಂತಹ ದಶ ಸಾವಿರ ಕೋಟಿ ಬ್ರಹ್ಮಾಂಡಗಳನ್ನು ಪತ್ತೆಹಚ್ಚಿದ್ದಾರೆ. ಇಂತಹ ಬ್ರಹ್ಮಾಂಡಗಳ ತವರು ನೀಹಾರಿಕೆ, ಕೋಟಿ ಕೋಟಿ ನೀಹಾರಿಕೆಗಳ ಸಮುದಾಯವೇ 'ವಿಶ್ವ' ಎಂದು ಹೇಳಿದಾಗ ಇದರ ಗಾತ್ರ, ವ್ಯಾಪ್ತಿ, ಸದಸ್ಯ ಕಾಯಗಳ ವೈವಿಧ್ಯ ಅನೂಹ್ಯ ಎಂಬುದು ಅರಿವಿಗೆ ಬರುತ್ತದೆ.

'ಡಾಪ್ಲರ್ ಪರಿಣಾಮದಲ್ಲಿ ನಕ್ಷತ್ರದ ಬೆಳಕಿನ ಫ್ರಾನ್ ಹಾಫರ್ ರೇಖೆಗಳ ಸ್ಥಾನ ಪಲ್ಲಟದ ಅಧ್ಯಯನದಿಂದ ಅದು ನಮ್ಮ ಹತ್ತಿರಕ್ಕೆ ಬರುತ್ತಿದೆಯೋ ಅಥವಾ ನಮ್ಮಿಂದ ದೂರ ಹೋಗುತ್ತಿದೆಯೋ ಎಂಬುದರ ಜೊತೆಗೆ ಪಲ್ಲಟದ ಮೊತ್ತ ಅಳೆದರೆ ಆ ನಕ್ಷತ್ರದ ಚಲನವೇಗ ಮತ್ತು ದಿಕ್ಕು ತಿಳಿಯಬಹುದು ಎಂದು ಸರಳ ಉದಾಹರಣೆಗಳ ಮೂಲಕ ವಿವರಿಸಿದ್ದಾರೆ.

ಇದರ ಆಧಾರದಿಂದ 'ವ್ಯಾಕೋಚನಶೀಲ ವಿಶ್ವ–ಅನೇಕ ರೀತಿಯ ನಿಯಮಗಳ ಅಧ್ಯಯನದಿಂದ ವಿಶ್ವವು ಬಲೂನು' ಹಿಗ್ಗಿದಂತೆ ಹಿಗ್ಗುತ್ತಲೇ ಇದೆ. ಬ್ರಹ್ಮಾಂಡಗಳು ಪರಸ್ಪರ ದೂರ ಸರಿಯುತ್ತಲೇ ಇದೆ' ಎಂಬ ನಿರ್ಧಾರವನ್ನು ವ್ಯಕ್ತಪಡಿಸುತ್ತಾರೆ. ಈ ಹಿನ್ನೆಲೆಯಲ್ಲಿ 'ವಿಶ್ವದ ಆದಿ' ಗತಕಾಲದ ಯಾವುದೋ ಮುಹೂರ್ತದಲ್ಲಿ ವರ್ತಮಾನ ವಿಶ್ವದ ಸಮಸ್ತ ದ್ರವ್ಯವೂ ಅಖಂಡ ಪಿಂಡವಾಗಿ ಗಿಡಿದುಕೊಂಡಿದ್ದ ಪರಮಾದಿ ಪರಮಾಣು ಆಗಿದ್ದಿರಬಹುದೆಂಬ ವಾದ ಮುಂದಿಟ್ಟು ನಂತರ ಆ ಪ್ರೋಟಾನ್ ನ್ಯೂಟ್ರಾನ್, ಎಲೆಕ್ಟ್ರಾನ್ ಮುಂತಾದ ಮೂಲಕಣಗಳದ್ದು ರಾಶಿಯು ಅದು ತನ್ನ ಭಾರಕ್ಕೆ ತಾನೇ ಮಣಿದು, ತಿರುಳಿನಲ್ಲಿ ಅಗಾಧ ಸಂಮರ್ದ ಅನುಭವಿಸಿ ರೌರವದ ಅತಿ ಶಾಖದಿಂದ ಪ್ರಳಯರುದ್ರನ ವಿಲಯತಾಂಡವನಂಥ ಮಹಾವಿಸ್ಫೋಟ ಮಹಾಜಾಜಣೆ Big Bang ಗೆ ಒಳಗಾಯಿತು. ಇದರ ಫಲವಾಗಿ

ಅಂಡವಿಶ್ವ ಅಸಂಖ್ಯ ಅಸಮ ಗಾತ್ರಗಳ ಖಂಡಗಳಾಗಿ ಒಡೆದು ಸ್ಫೋಟಕ ಕೇಂದ್ರದಿಂದ ವಿರುದ್ಧ ದಿಶೆಗಳಿಗೆ ಧಾವಿಸತೊಡಗಿದವು ಇನ್ನೂ ಆ ಕ್ರಿಯೆಯನ್ನು ಉಳಿಸಿಕೊಂಡಿವೆ ಎಂದು ಲಭ್ಯ ಮಾಹಿತಿಗಳ

ಸ್ಪಷ್ಟವಿವರಣೆ ಮೂಲಕ ಹೇಳುತ್ತಾರೆ. ಈ ಮಹಾವಿಜಣೆಯ ತರುವಾಯು' ನೀಹಾರಿಕೆ ಬ್ರಹ್ಮಾಂಡ, ನಕ್ಷತ್ರ ಗ್ರಹಗಳು ರೂಪು ಗೊಂಡಿರುವ ಸಾಧ್ಯತೆಯನ್ನು ವಿವರಿಸಿದ್ದಾರೆ.

ಹಾಗೇ ನಕ್ಷತ್ರಗಳ ಶಕ್ತಿಮೂಲವನ್ನು ವಿವರಿಸುತ್ತ ಬಂದು ಈ ಶಕ್ತಿಮೂಲ ಮುಗಿದಾಗ ನಕ್ಷತ್ರ ಹೇಗೆ ನಾಶ ಹೊಂದುತ್ತದೆ ಎಂಬ ಚಿತ್ರ ನೀಡಿ ಕೆಲವು ಐತಿಹಾಸಿಕ ಸೂಪರ್ನೋವಾಗಳ ಬಗೆಗೆ ವಿವರಣೆ ನೀಡಿದ್ದಾರೆ. ಹಲವು ನಕ್ಷತ್ರಗಳ ವೈಚಿತ್ರ್ಯಗಳನ್ನು ಬಯಲು ಮಾಡಿದ ಸಾಧನೆಯನ್ನು ಗುರುತಿಸಿದ್ದಾರೆ. 'ವಿಶ್ವಕೇಂದ್ರ ನಾನು' ಎಂದುಕೊಳ್ಳುವ ಆದಿಮಾನವನಿಂದ 'ವಿಶ್ವದಲ್ಲಿ ಮಾನವ ಏಕೈಕ ಬುದ್ಧಿಜೀವಿ ಆಗಿರಲಿಲ್ಲ' ಎಂಬ ಈ ಶತಮಾನದ ಉತ್ತರಾರ್ಧದ ಮಾನವನ ಭಾವನೆಯುವರೆಗೂ ವಿವಿಧ ಹಂತದಲ್ಲಿ ಆದ. ವಿವಿಧ ಬದಲಾವಣೆಗಳನ್ನು ದಾಖಲಿಸಿದ್ದಾರೆ. ವಿಶ್ವದ ವಯಸ್ಸು ಹದಿನೈದು ಸಾವಿರ ಕೋಟಿ ವರುಷಗಳಾದರೆ ಬುದ್ಧಿವಂತಿಕೆಯ ವಯಸ್ಸು ೧೦೦ ವರ್ಷಗಳು ಎಂದು ಹೇಳಿ ಬುದ್ಧಿ ವಿಶ್ವವನ್ನು ಅರಿಯಬೇಕಾದರೆ ಇನ್ನೂ ಎಷ್ಟು ತಿಣುಕಾಡಬೇಕಾಗುತ್ತದೆ ಎಂಬ ಸೂಚನೆಯನ್ನು ಕೊಡುತ್ತಾರೆ.

ಹೀಗೆ ನಕ್ಷತ್ರಲೋಕದ ವಿಶ್ವವಿಸ್ಮಯವನ್ನು ಎಳೆಎಳೆಯಾಗಿ ಬಿಡಿಬಿಡಿಯಾಗಿ ನಿರೂಪಿಸುತ್ತಾ ಹೋಗುವ ಈ ಪುಸ್ತಕವನ್ನು ಅಗತ್ಯವಾಗಿ ಎಲ್ಲರೂ ಒಮ್ಮೆ ಓದಬೇಕು. ವಿಜ್ಞಾನದ ಅಧ್ಯಾಪಕರಿಗಂತೂ ಅನೇಕ ವಿಶ್ವಸೂಕ್ಷ್ಮಗಳನ್ನು ವಿದ್ಯಾರ್ಥಿಗಳಿಗೆ ರಂಜಿತವಾಗುವಂತೆ ವರ್ಣಿಸುವ ಹೂರಣವನ್ನು ಕೊಡುತ್ತದೆ ಅಷ್ಟು ಮಾತ್ರವೇ ಅಲ್ಲ, ವಿದ್ಯಾರ್ಥಿಗಳಿಗೂ ಒಂದೆರಡು ಓದಿನಲ್ಲಿ ಅರಗುವಷ್ಟು ಸರಳವಾಗಿದೆ.

ಜಿ. ಟಿ. ನಾರಾಯಣರಾಯರ ನುರಿತ ಲೇಖನಿಯಿಂದ ಈ ರೀತಿಯ ವೈಜ್ಞಾನಿಕ ಪುಸ್ತಕಗಳು, ಲೇಖನಗಳು ಮೂಡಿ ಬರುತ್ತಲೇ ಇರಲಿ, ಕನ್ನಡದ ಈ ಒಂದು ಕೊರತೆಯನ್ನು ನೀಗಿ ಜ್ಞಾನತೃಷೆಯನ್ನು ತಣಿಸುತ್ತಿರಲಿ ಎಂಬುದೇ ಸದಾಶಯ.

ಡಾ|| ಮಂಜುಳಾ ಹುಲ್ಲಹಳ್ಳಿ
ಉಪನ್ಯಾಸಕಿ, ಶ್ರೀ ವಿವೇಕಾನಂದ ಕಾಲೇಜು
ಜಯಲಕ್ಷ್ಮೀಪುರಂ, ಮೈಸೂರು

ಓದುಗರ ಅನಿಸಿಕೆ

ತಾವು ವಿಶ್ವಾಸದಿಂದ ಕಳುಹಿಸಿದ ದೇಜಗೌ ಸಂಚಿಕೆ ತಲಪಿದೆ. ಲೇಖನಗಳು ಹೃದಯಸ್ಪರ್ಶಿಯಾಗಿದೆ. ಈ ವಿಶೇಷ ಸಂಚಿಕೆ ಸಾಹಿತ್ಯಾಭ್ಯಾಸಿಗಳಿಗೆ ಸಂಗ್ರಹಯೋಗ್ಯವಾಗಿವೆ.

ಜವಹರಲಾಲ್ ನೆಹರು ತಾರಾಲಯ
ಬೆಂಗಳೂರು–೦೧ **ಡಾ॥ ಬಿ. ಎಸ್. ಶೈಲಜಾ**

ನನಗೆ ಪುಸ್ತಕ ಸರಿಯಾಗಿ ಬರುತ್ತಿದೆ. ಧನ್ಯವಾದಗಳು.ಜುಲೈ-ಆಗಸ್ಟ್ ೯೯ರ ಪತ್ರಿಕೆ ಡಾ॥ ದೇಜಗೌ ಅವರ ವ್ಯಕ್ತಿತ್ವದ ವಿವಿಧ ಮುಖಗಳನ್ನು ಚಿತ್ರಿಸುವಲ್ಲಿ ತುಂಬ ಯಶಸ್ವಿಯಾಗಿದೆ. ಸೆಪ್ಟೆಂಬರ್ ೯೯ ರ ಪತ್ರಿಕೆ ಕೂಡ ಉತ್ತಮ ಹಾಗೂ ಅನುಭವಿ ಲೇಖಕರ ಲೇಖನಗಳಿಂದ ಕೂಡಿದ್ದು,ತುಂಬಾ ಮಾಹಿತಿ ಪೂರ್ಣವಾಗಿದೆ. ಪತ್ರಿಕೆ ಉತ್ತಮವಾಗಿ ಹೊರಬರಲು ಶ್ರಮಿಸುತ್ತಿರುವ ಎಲ್ಲರಿಗೂ ಅನಂತ ಧನ್ಯವಾದಗಳು.

ಶಿವಬಸವನಗರ
ಬೆಳಗಾವಿ–೫೯೦ ೦೧೬ **ಡಾ॥ ಎಸ್. ಎಂ. ಹರದಗಟ್ಟಿ**

ಆತ್ಮೀಯ ಸಂಪಾದಕರೇ,

ಪುಸ್ತಕ ಪ್ರಪಂಚ ನಿಯತವಾಗಿ ತಲಪುತ್ತಿದೆ. ಸಾಕ್ಷರತೆ ಬಗ್ಗೆ, ಸಾಕ್ಷರ ಜನರ ಬಗ್ಗೆ ಸಂಪಾದಕ ಮಂಡಳಿ ಮತ್ತು ಶಿಕ್ಷಣ ಸಮಿತಿಯು ವಹಿಸಿರುವ ಆಸಕ್ತಿಯು ಅಭಿನಂದನಾರ್ಹ. ಸೆಪ್ಟೆಂಬರ್ ೯೯ರ ಸಂಚಿಕೆಯಲ್ಲಿ ಕಾರ್ಗಿಲ್, ಸಚಿನ್, ವಿ.ಸೀ. ಇತ್ಯಾದಿ ವಿಷಯಗಳನ್ನು ಸೇರಿಸಿರುವುದು ಮಾಹಿತಿ ಪೂರ್ಣವಾಗಿದೆ. ಸಂಪಾದಕೀಯ ತಂಡದ ಶ್ರಮಕ್ಕೆ ನನ್ನ ಅಭಿನಂದನೆಗಳು.

ಲಕ್ಷ್ಮಯ್ಯ ಬ್ಲಾಕ್
ಗಂಗಾನಗರ, ಬೆಂಗಳೂರು–೩೨. **ಮಹಮದ್ ಅನ್ವರ್**

ಮಾನ್ಯ ಪ್ರಧಾನ ಸಂಪಾದಕರಿಗೆ,

ಸೆಪ್ಟೆಂಬರ್ ೯೯ ರ ಪುಸ್ತಕ ಪ್ರಪಂಚ ಸಕಾಲದಲ್ಲಿ ಕೈಸೇರಿದೆ. ಲೇಖನಗಳು ಅತ್ಯುತ್ತಮವಾಗಿವೆ. ಓದಿ ತುಂಬಾ ಆನಂದವಾಗುತ್ತಿದೆ. ಜೊತೆಗೆ ಒಂದು ವಿಜ್ಞಾಪನೆ, ಅಂದರೆ ಡಾ॥ ಎಸ್. ರಾಧಾಕೃಷ್ಣನ್, ರಾಜೇಂದ್ರ ಪ್ರಸಾದ್, ಸ್ವಾಮಿ ವಿವೇಕಾನಂದರಂಥ ಮಹಾಮಹಿಮರ ಜೀವನ ಚರಿತ್ರೆ ಬರುತ್ತಿರಲೆಂದು ಆಶಿಸುತ್ತೇನೆ.

ಎಚ್. ವ್ಹಿ. ಸಂಕೊಳ್ಳಿ
ಶಿರಸಿ

ಮಾನ್ಯರೆ,

ಮೈಸೂರು ಸಾಹಿತ್ಯ ಲೋಕದಲ್ಲೇ ಸದಾಬೆಳಗುವ ದೀವಿಗೆಯಂತೆ ಮೆರೆದ ನಾಡು. ಇಂತಹ ಸ್ಥಳದಲ್ಲಿ ಅದರ ಕುರುಹಾಗಿ ಸಮಾಜಕ್ಕೆ ಸ್ಪಂದಿಸುತ್ತಿರುವ ಪುಸ್ತಕ ಮೈಸೂರಿನಲ್ಲಿ ಇದೊಂದೆ ಎಂಬುದನ್ನು ಹೇಳಲು ಹರ್ಷವಾಗುತ್ತದೆ. ಇದರ ಸಾರಥ್ಯ ವಹಿಸಿರುವವರು ಕನ್ನಡದ ಮಹತ್ವದ ಲೇಖಕರು 'ಪಂಪ ಪ್ರಶಸ್ತಿ', 'ನಾಡೋಜ ಪ್ರಶಸ್ತಿ' ವಿಜೇತರೆಂಬುದು "ಪುಸ್ತಕ ಪ್ರಪಂಚ"ಕ್ಕೆ ಇಟ್ಟ ಕಿರೀಟದಂತೆ ಇರುವುದು ಅಭಿನಂದನಾರ್ಹ. ಏನೇ ಆಗಲಿ ನಮ್ಮ ಪುಸ್ತಕ ಪ್ರಪಂಚ ಸದಾ 'ನವ ನವೋನ್ಮೇಷಶಾಲಿನಿ'ಯಾಗಿ ಬೆಳೆಯಲಿ.

ಪುಸ್ತಕ ಪ್ರಪಂಚ ಚಿರಾಯುವಾಗಲಿ
ದೇಜಗೌಂವರ ಸಖ್ಯವಿರಲಿ
ನಮಗೆಲ್ಲಾ ಸವಿಯೂಟವಿರಲಿ—ಎಂದು ಬಯಸುವ

ವಿಲ್‌ಫ್ರೆಡ್ ಕ್ರಾಸ್ತ

ಸಂತ ತೆರೇಸಾ ಪ್ರೌಢಶಾಲೆ
ಮೈಸೂರು–೮

ಪುಸ್ತಕ ಪ್ರಪಂಚ ಸೆಪ್ಟೆಂಬರ್ ೯೯–ಕುರಿತು

ಕಾರ್ಗಿಲ್–ಕಾಶ್ಮೀರ ಸಮಸ್ಯೆಯ ವಿಶ್ಲೇಷಣೆ ಮತ್ತು ಪರಿಹಾರ ಸೂಚನೆ ಮಾಡಿದ "ಭಾರತದಲ್ಲಿ ಏಕತೆ-ಮೂಡಿ ಅಂತಸ್ಸತ್ವ ಅಧಿಕಗೊಂಡಾಗ ಮಾತ್ರ ಸರ್ವ ಮಾನ್ಯತೆ ದೊರಕೀತು. 'ಇಲ್ಲವಾದಲ್ಲಿ' ಈ ಹಗರಣ ಮತ್ತೆ ಮತ್ತೆ ಮರುಕಳಿಸುವುದ ಖಂಡಿತ" ಎಂಬ ಕಠೋರ ಸತ್ಯದ ಶ್ರೀ ದೇಜಗೌರವರ ಸಮರ್ಥ ಸಂಪಾದಕೀಯ ಇದ ರಲ್ಲಿರುವುದು.

ಸ್ವಾತಂತ್ರ್ಯದ ಮೂರ್ತಿ—"ಸ್ಟ್ಯಾಚು ಆಫ್ ಲಿಬರ್ಟಿ"ಯ ಬಗ್ಗೆ ಬಹು ಚೆನ್ನಾಗಿ ಬರೆದಿದ್ದಾರೆ ಶ್ರೀಮತಿ ಟಿ. ಎಸ್. ಲಲಿತಾ ಅವರು ದೇಶ, ಕಾಲ, ಸಂದರ್ಭ ಗಳ ಅಂಕಿ ಅಂಶಗಳಿಂದ ಕೂಡಿದ ಈ ಲೇಖನ ಮಕ್ಕಳಿಂದ ಹಿರಿಯರವರೆಗೂ ಓದಲು ಕುತೂಹಲಕಾರಿಯಾಗುವುದು. ಮೂಲ ಆಕರದಲ್ಲಿ ತಿಂಗಳು ಇಸ್ವಿ ಸ್ಪಷ್ಟವಾಗಿ ಕೊಟ್ಟರೆ ಇನ್ನೂ ಒಳಿತು.

ಡಾ॥ ಕೆ. ಶ್ರೀಕಂಠಯ್ಯ ಅವರ "ವಿ.ಸೀ–ಒಂದು ಸ್ಮರಣೆ" ವಿ. ಸೀ. ಯವರ ಬಗ್ಗೆ ಇನ್ನೂ ತಿಳಿದುಕೊಳ್ಳಬೇಕೆಂಬ ಕುತೂಹಲವನ್ನು ಹುಟ್ಟಿಸುವುದು.

ಆಟೋರಿಕ್ಷಾ ಡ್ರೈವ್ಹರ್–ದತ್ತೂಪಾಟೀಲ-ಡಾ॥ ಸ. ಜ. ನಾಗಾಲೋಟಿಮಠ ಅವರ ಶೈಲಿಯೇ ಶೈಲಿ, ಬಹು ವಿಶಿಷ್ಟ. ಸಮಾಜದಲ್ಲಿ ಕಂಡುಬರುವ ಲೋಪ ದೋಷ ಗಳನ್ನು ತಿಳಿಸಲು ಚಾಟಿಯ ಏಟು ಕೊಡುವಲ್ಲಿ ಎಂದೂ ಹಿಂದಾಗರು.

ಗೃಹಿಣಿ ಬದುಕಿನ ಸಾಹಸ ಸ್ವಾರಸ್ಯಗಳು—ಶ್ರೀ ರಾಘವೇಂದ್ರಭಟ್ಟರು, ಈ ಅನುವಾದ ಪ್ರಕಟಿಸುವ ಮೊದಲು, ಕಾವ್ಯಾಲಯ ಪ್ರಕಟಣೆಯ ಸಿ. ಕೃಷ್ಣ ಅವರ "ಮುಗುದೆಯರ ಪತ್ರಗಳು" ಎಂಬ ಪುಸ್ತಕವನ್ನು ಓದಬೇಕಿತ್ತು ಎಂದೆನಿಸದೆ ಇರದು. ಆಧಾರಿತ ಸಂಚಿಕೆಯ ತಿಂಗಳನ್ನೂ ಕೊಡುವುದು ಒಳ್ಳೆಯದು.

ಪುಸ್ತಕ ಪರಿಚಯ—ಶ್ರೀಮತಿ ಲತಾರಾಜಶೇಖರ್ ಅವರ, "ಬೆಳಕಿನ ಎದೆ ಹಾಲು" ಕಥನ ಕವನಗಳ ಸಂಗ್ರಹದ ಪರಿಚಯ, ಪುಸ್ತಕ ಓದಬೇಕೆಂಬ ಹಂಬಲ ಹುಟ್ಟಿಸುತ್ತದೆ. ಈ ಪರಿಚಯ, ಕಿರುವಿಮರ್ಶೆಗೊಂದು ಉದಾಹರಣೆ.

—ಮಾಧವರಾವ್ ಮುಧೋಳ್

ಶ್ರೀರಾಂಪುರ
ಮೈಸೂರು–೨೩

———

Reg. No. KRNN-29 / WPP 6

LICENCE No. 21
LICENCED TO POST WITH PAYMENT



ಮೈಸೂರು ಅರಮನೆಯ ಉತ್ತರ ದ್ವಾರ

Edited by Chandrashekhararadhya Printed by Papanna
Printed & Published by Karnataka State Adult Education Council
5/1 Vinoba Road, Manasa Gangothri, Mysore-570 006.